Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–15 | ಏಪ್ರಿಲ್ 7–13, 2025 | ಪುಟ 16 | ರೂ.10/–
Volume-19 | Issue-15 | April 7-13, 2025 | Pages 16 | Price. 10/-





ಸಿಪಿಐ(ಎಂ) 24 ನೆಯ ಮಹಾಧಿವೇಶನ : ಜನತಾ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಕಡೆಗೆ ಮುನ್ನಡೆವ ಬದ್ಧತೆ



ಗ್ರೇಟರ್ ಬೆಂಗಳೂರು: ಅಧಿಕಾರ ವಿಕೇಂದ್ರೀಕರಣಕ್ಕೆ ತಿಲಾಂಜಲಿ ಬಿಳಿಯಾನೆಗಳ ವಶಕ್ಕೆ ನಗರಾಡಳಿತ

ಬೆಲೆ ಏರಿಕೆ: ಜನದ್ರೋಹಕ್ಕೆ ಎಷ್ಟೆಲ್ಲಾ ಸಮರ್ಥನೆಗಳು

ಮರಳಿ ಬರುತ್ತಿದೆ ಚಿಂತಕರ ಬೇಟೆಯಾಡುವ ಮೆಕಾರ್ಥಿವಾದ

...ಊರೊಟ್ಟಿನ ಭೂಮಿಯಲ್ಲಿ ಹಳ್ಳಿಗಳಲ್ಲಿದ್ದ ಭೂಹೀನ ಕೂಲಿಕಾರರೂ ಬಡ ಗೇಣಿದಾರರೂ ಸೇರಿ ತಮ್ಮ ದನ, ಕುರಿಗಳನ್ನು ಮೇಯಿಸಿ ಕೊಳ್ಳಬಹುದಿತ್ತು. ಅಷ್ಟೇ ಅಲ್ಲದೇ ಆಗ ಯಾರೂ ಕೂಡಾ ತಮ್ಮ ಹೊಲಗಳಿಗೆ ಬೇಲಿ ಹಾಕುತ್ತಿರಲಿಲ್ಲ. ಆದರೆ ಈಗ ಈ ಪಾಳೆಯಗಾರಿ ನೋಬಲ್‌ಗಳಿಂದ ಭೂಮಿಯನ್ನು ಕೊಂಡವರು, ಅವರು ತಮ್ಮ ಭೂಮಿಯಲ್ಲಿ ತಮ್ಮ ಲಾಭಕ್ಕಾಗಿ ಏನು ಬೇಕಾದರೂ ಮಾಡಬಹುದಾದ ಸ್ವಾತಂತ್ರ್ಯ ನೀಡಿತು. ಹೀಗೆ ಪಾಳೆಯಗಾರಿ ಆಸ್ತಿಯ ಪರಂಪರಾಗತ ರೂಪದಲ್ಲಿದ್ದ ಭೂಮಿ ಬಂಡವಾಳಶಾಹಿ ಸ್ವರೂಪದ, ವೈಯುಕ್ತಿಕ ಲಾಭದ ಸಾಧನವಾದ ಆಸ್ತಿಯಾಗಿ ಪರಿವರ್ತಿತವಾಯಿತು. ಇದು ಇತಿಹಾಸದಲ್ಲಿ ಒಂದು ದೊಡ್ಡ ಕ್ರಾಂತಿಕಾರಿ ಬೆಳವಣಿಗೆ.

ಬೃಹತ್ ಭೂ ಲೂಟಿ–ಲಕ್ಷಾಂತರ ರೈತರ ಬದುಕನ್ನು ಸುಟ್ಟು ಆದಿಮ ಬಂಡವಾಳ ಸಂಗ್ರಹದ ಆರಂಭ

ಭಾಗ 19

ಜಿ.ಎನ್. ನಾಗರಾಜ್



ಒಂದು ಗುಡಿಸಲು ಬೆಂಕಿಯಿಂದ ಧಗ ಧಗನೆ ಉರಿಯುತ್ತಿದೆ. ಒಬ್ಬ ಹಣ್ಣು ಹಣ್ಣು ಮುದುಕಿ ಒಳಗಿಂದಲೇ ಚೀರಾಡುತ್ತಿದ್ದಾಳೆ. "ಇದು ನಾನು ಹುಟ್ಟಿ ಬೆಳೆದ ಜಾಗ ಮಾತ್ರವಲ್ಲ, ತಲೆತಲಾಂತರದಿಂದ ನಮ್ಮ ವಂಶದ ಅನುಭವದಲ್ಲಿರುವ ಹೊಲ, ಸುತ್ತ ಮುತ್ತಲೆಲ್ಲ ಇರುವ ನಮ್ಮ ಕುಲಕ್ಕೆ ಸೇರಿದ ಜಾಗ. ಇದನ್ನು ನಾನು ಬಿಟ್ಟು ಹೋಗಲಾರೆ" ಎಂದು. ಆ ಗುಡಿಸಲಿನಿಂದ ಅವಳನ್ನು ಹೊರಗೆಳೆದು, ಅವಳ ಹೊಲದಿಂದ ಓಡಿಸಲು ಪ್ರಯತ್ನಿಸಿ ವಿಫಲರಾದ ಸೈನಿಕರು ಕುಲದ ಮುಖ್ಯಸ್ಥೆಯ ಆಜ್ಞೆ ಪಾಲಿಸಲು ಅವಳ ಆ ಬಡ ಗುಡಿಸಲಿಗೆ ಬೆಂಕಿ ಹಚ್ಚಿಯೇ ಬಿಟ್ಟರು.

ಆ ಮುದುಕಿ ಆ ಮುಖ್ಯಸ್ಥೆಯದೇ ಕುಲದವಳಾಗಿದ್ದಳು. ಅಂದರೆ ರಕ್ತ ಸಂಬಂಧಿ. ಆದರೂ ನಿಷ್ಕರುಣೆಯಿಂದ ಕೊಲ್ಲಿಸಿಯೇ ಬಿಟ್ಟಳು.

ಆ ಹಳ್ಳಿ ಬ್ರಿಟನ್ ಭಾಗವಾದ ಸ್ಕಾಂಟ್ಲಂಡಿನ ಪ್ರದೇಶಕ್ಕೆ ಸೇರಿದ್ದು. ಸ್ಕಾಟ್ಲೆಂಡಿನಲ್ಲಿ ವಿವಿಧ ಕುಲಗಳು ತಮ್ಮದೇ ಆದ ಬೇರೆ ಬೇರೆ ನಿರ್ದಿಷ್ಟ ಪ್ರದೇಶಗಳಲ್ಲಿ ಸಾವಿರಾರು ವರ್ಷಗಳಿಂದ ಬೇಸಾಯ ಮಾಡುತ್ತಾ ಬಂದಿದ್ದರು. ಅವರು ಬೇಸಾಯ ಮಾಡುತ್ತಿದ್ದ ಪ್ರದೇಶದ ಒಡೆತನ ಆ ಕುಲದವರಿಗೆಲ್ಲ ಸೇರಿದ್ದು. ಕುಲದ ಮುಖ್ಯಸ್ಥರೂ ಎಲ್ಲರಿಗೂ ಸಮಾನ ಹಕ್ಕು. ಮುಖ್ಯಸ್ಥರದ್ದೇನಿದ್ದರೂ ಕುಲದ ಒಟ್ಟಾರೆ ವ್ಯವಹಾರಗಳ ನಿರ್ವಹಣೆಯಷ್ಟೇ.

ಆದರೆ ಆ ಕುಲದ ಮುಖ್ಯಸ್ಥೆ ಕುಲದ ಎಲ್ಲ ಭೂಮಿಯೂ ತನಗೇ ಸೇರಿದ್ದು ಎನ್ನುವಂತೆ ಆ ಕುಲದ 3000 ಕುಟುಂಬಗಳಿಗೆ ಸೇರಿದ 15,000 ಜನರನ್ನು ಅವರವರು ಬೇಸಾಯ ಮಾಡುತ್ತಿದ್ದ ಹೊಲಗಳಿಂದ ಸೈನಿಕಬಲ ಬಳಸಿ ಓಡಿಸಲು, ಅವರ ಭೂಮಿಯನ್ನೆಲ್ಲಾ ವಶಪಡಿಸಿಕೊಳ್ಳಲು ದಾಳಿಮಾಡಿದ್ದಳು. ಹೊಲ, ಕಾಡು ಗುಡ್ಡಗಳೂ ಸೇರಿದಂತೆ 7,94,000 ಎಕರೆ ಭೂಮಿಯನ್ನು ವಶಪಡಿಸಿಕೊಂಡು ಭದ್ರವಾದ ಬೇಲಿಗಳನ್ನು ಹಾಕಿಸಿದಳು.

ಆ ಭೂಮಿಯನ್ನು 29 ಕುರಿ ಫಾರ್ಮ್‌ಗಳಾಗಿ ವಿಂಗಡಿಸಿದಳು. ಒಂದೊಂದು ಫಾರ್ಮ್‌ನಲ್ಲಿ ಒಂದೊಂದು ಕೃಷಿ ಕೂಲಿಕಾರ ಕುಟುಂಬವೊಂದನ್ನು ದೂರದ ಇಂಗ್ಲೆಂಡ್‌ನಿಂದ ಕರೆತಂದು ನೆಲೆ ಊರಿಸಿದಳು. ಆ ಫಾರ್ಮ್‌ಗಳಲ್ಲಿ ತನ್ನದೇ ಬಂಧು ಬಾಂಧವರ ಜಾಗದಲ್ಲಿ 1,31,000 ಕುರಿಗಳನ್ನು ತಂದಿಟ್ಟಳು. ಆಗ ಬಹು ಲಾಭಕರವಾಗಿದ್ದ ಕುರಿ ಉಣ್ಣೆಯನ್ನು ಮಾರಿ ಅಪಾರ ಸಂಪತ್ತನ್ನು ಶೇಖರಿಸಿದಳು.

ಅಲ್ಲಿಂದ ಓಡಿಸಿದ ಕುಟುಂಬಗಳಿಗೆ, ಒಂದಕ್ಕೆ ಎರಡು ಎಕರೆಯಂತೆ ಏನೂ ಬೆಳೆಯಲಾಗದ ಸಮುದ್ರ ತೀರದ ಭೂಮಿಯನ್ನು "ಬಹಳ ಕರುಣೆ ತೋರಿ" ಗೇಣಿಗೆ ಕೊಟ್ಟಳು. ವಿಶಾಲ ಹೊಲಗಳ ಮಾಲಿಕರಾಗಿದ್ದ ರೈತರನ್ನು ಈಗ ಬೆಳೆಗಳನ್ನು ಬೆಳೆಯಲಾಗದ ಉಪ್ಪು ಭೂಮಿಯ ಗೇಣಿದಾರರನ್ನಾಗಿ ಮಾಡಲಾಯಿತು. ಆ ಭೂಮಿಯಲ್ಲಿ ನೆಲೆಸಿದ ಕುಟುಂಬಗಳು ಬೇರೆ ದಾರಿಯಿಲ್ಲದೆ ಸಮುದ್ರದಲ್ಲಿ ಮೀನು ಹಿಡಿದು ಜೀವನ ಮಾಡಲು ಪ್ರಯತ್ನಿಸಿದರು. ಇದರಿಂದಲೂ ಗಣನೀಯ ಆದಾಯ ಇದೆ ಎಂದು ಕಂಡುಕೊಂಡ ಕುಲದ ಮುಖ್ಯಸ್ಥೆ, ಆ ಜಾಗವನ್ನೂ ಲಂಡನ್ನಿನ ಮೀನು ವ್ಯಾಪಾರಿಗಳಿಗೆ ಮಾರಿದಳು. ಅವರನ್ನು ಮತ್ತೊಮ್ಮೆ ಓಡಿಸಿದಳು.



ಯಾರ ವಂಶದ ಪ್ರತಿಷ್ಟೆಗಾಗಿ ಶತಮಾನಗಳ ಕಾಲ ತಮ್ಮ ರಕ್ತವನ್ನು ಹರಿಸಿದ್ದರೋ, ಯಾರ ಧೀರತನದ ಬಗ್ಗೆ ಬಹುವಾಗಿ ಕೀರ್ತಿಸಲಾಗಿದೆಯೋ, ಅಂತಹ ಕುಲದ ಜನರಿಗೆ ಅವರದೇ ಕುಲ ಬಂಧುವಿನಿಂದ ಒದಗಿದ ಗತಿ ಇದು.

ಮೇಲಿನ ಇಡೀ ಪ್ರಸಂಗ ಮಾರ್ಕ್ಸ್‌ರವರ "ಬಂಡವಾಳ" ಗ್ರಂಥದಿಂದ ಹೆಕ್ಕಿಕೊಂಡದ್ದು.

ಏನಾಯ್ತು ಇದ್ದಕ್ಕಿದ್ದಂತೆ? ಗಾಢವಾದ ಕುಲ ಸಂಬಂಧಗಳು, ಬಹು ಬಿಗಿಯಾದ ಕುಲ ಕಟ್ಟಲೆಗಳು ಇದ್ದಕ್ಕಿದ್ದಂತೆ ಮುರಿದು ಹಾಕಲಾಯಿತಲ್ಲ! ಇದು ಒಂದು ಕುಲದ ಕತೆಯಷ್ಟೇ ಅಲ್ಲ. ಸ್ಕಾಟ್ಲೆಂಡಿನ ಬಹಳಷ್ಟು ಮಲೆನಾಡಿಗ ಕುಲದ ಕತೆ. ಒಂದು ರಕ್ತ ಸಿಕ್ತ ಅಧ್ಯಾಯ. 175ರಿಂದ 1850ರ ವರೆಗಿನ ಸ್ಕಾಟ್ಲೆಂಡಿನ ಚರಿತ್ರೆಯ ಕರಾಳ ಅಧ್ಯಾಯ. ಹೀಗೆ ಓಡಿಸಲ್ಪಟ್ಟ ಸಾವಿರಾರು ಸ್ಕಾಟ್ಲೆಂಡಿಗರು ಕೊನೆಗೆ ಆಗ ತಾನೆ ವಸಾಹತುಗಳಾಗಿದ್ದ ಕೆನಡಾ, ಅಮೆರಿಕಾಗಳಿಗೆ ವಲಸೆ ಹೋಗಬೇಕಾಯಿತು.

ಕುಲ ಬಾಂಧವ್ಯ ಇನ್ನೂ ಬಹಳ ಗಾಢವಾಗಿದ್ದ, ಅದರ ಬಗ್ಗೆ ಬಹಳವಾಗಿ ಬಹು ಹೆಮ್ಮೆಯಿಂದ ಚರಿತ್ರೆಯಲ್ಲಿ ವರ್ಣಿಸಲಾಗುತ್ತಾ ಬರಲಾಗಿದೆಯೋ, ಹೊರ ಪ್ರಪಂಚಕ್ಕೆ ಹೆಚ್ಚು ತೆರೆದುಕೊಂಡಿಲ್ಲದ ಸ್ಕಾಟ್ಲೆಂಡಿನ ಕತೆಯೇ ಹೀಗಾದರೆ ಇನ್ನು ಇಂಗ್ಲೆಂಡಿನ ಕತೆ ಏನು?

ಉಣ್ಣೆಯ ಲಾಭ, ಉಣ್ಣೆಯ ಚರ್ಚ್‌ಗಳು

ಚಳಿ ಚಳಿ ಎಂದು ನಡುಗುವ ಶೀತ ಪ್ರದೇಶವಾದ ಯುರೋಪಿನಲ್ಲಿ ಉಣ್ಣೆ ಬಟ್ಟೆಗಳಿಗೆ ಬಹಳ ಬೇಡಿಕೆ ಇರುವುದು ಸಹಜ. ಇಟಲಿಯ ನಗರಗಳು 13ನೆಯ ಶತಮಾನದ ಕೊನೆಯ ಭಾಗದಲ್ಲಿ ವಿವಿಧ ದೇಶಗಳೊಂದಿಗೆ ದೂರ ವ್ಯಾಪಾರದಲ್ಲಿ ತೊಡಗಿದಾಗ, ಅಲ್ಲಿಯ ಮೇಲ್ವರ್ಗಗಳಲ್ಲಿ ಗಣನೀಯ ಸಂಪತ್ತು ಶೇಖರಣೆಯಾಯಿತು. ಅವರು ತಮ್ಮ ಉಪಯೋಗಕ್ಕಾಗಿ ಮತ್ತು ದೂರ ವ್ಯಾಪಾರಕ್ಕಾಗಿ ಹೆಚ್ಚು ಹೆಚ್ಚು ಉತ್ತಮ ಉಣ್ಣೆಯ ಉಡುಪುಗಳನ್ನು ಕೊಳ್ಳತೊಡಗಿದರು. ಬ್ರಿಟನ್‌ನ ಕುರಿಗಳಿಂದ ದೊರೆಯುತ್ತಿದ್ದ ಉತ್ತಮ ಉಣ್ಣೆಗೆ ಬಹು ದೊಡ್ಡ ಬೇಡಿಕೆ ಉಂಟಾಯಿತು. ಅದರ ಬೆಲೆ ಇದ್ದಕ್ಕಿದ್ದಂತೆ ಬಹಳ ಏರಿ ಬಿಟ್ಟಿತು.

ಉಣ್ಣೆಯೇ ಬ್ರಿಟನ್‌ನ ಕೃಷಿ ಬಂಡವಾಳಶಾಹೀಕರಣ, ಕೈಗಾರಿಕಾ ಅಭಿವೃದ್ಧಿಯ ಮೊದಲ ಪ್ರಚೋದಕವಾಯಿತು. ಹತ್ತಿ, ರೈಲ್ವೆ, ಯಂತ್ರಗಳು ಎಲ್ಲಾ ಬಂದದ್ದು ಎರಡು ಶತಮಾನಗಳ ನಂತರ.

ಉಣ್ಣೆಯಲ್ಲಿನ ಲಾಭದ ಕಾರಣದಿಂದಾಗಿ ಬ್ರಿಟನ್‌ನ ಬಹುದೊಡ್ಡ ಭೂಮಾಲಕರು ಲಾರ್ಡ್‌ಗಳು, ನೋಬಲ್‌ಗಳು ಆಹಾರದ ಬೆಳೆಗಳನ್ನು ಬೆಳೆಯುತ್ತಿದ್ದ ಪಾಳೆಯಪಟ್ಟಿನ ಭೂಮಿಯಲ್ಲಿ ಉಣ್ಣೆ ಉತ್ಪಾದನೆ ಮಾಡಲು ಹವಣಿಸಿದರು. ತಮ್ಮ ಅಧೀನದ ಪರಂಪರಾಗತ ಗೇಣಿದಾರ ರೈತರನ್ನು ಹೊರಹಾಕಿ ಸಣ್ಣ ಹಿಡುವಳಿಗಳಾಗಿದ್ದ ಹೊಲಗಳನ್ನು ವಿಸ್ತಾರವಾದ ಕುರಿ ಹುಲ್ಲುಗಾವಲುಗಳನ್ನಾಗಿ ಪರಿವರ್ತಿಸಿದರು. ಹಾಗೆ ಮಾಡಲು ಹೋಗದ ಬಹು ದೊಡ್ಡ ಲಾರ್ಡ್‌ಗಳು ತಮ್ಮ ಇಡೀ ಪಾಳೆಯ ಪಟ್ಟು ಅಥವಾ ಅರ್ಧ ಪಾಳೆಯ ಪಟ್ಟುಗಳನ್ನು ಮಾರಿದರು. ಅದನ್ನು ಕೊಂಡವರು ಲಂಡನ್ನಿನ ವ್ಯಾಪಾರಿಗಳು, ನವ ಬಂಡವಾಳಗಾರ ವರ್ಗದವರು.

ಹೀಗೆ ಪಾಳೆಯಗಾರಿ ಭೂಮಾಲಕರ ಭೂಮಿ ಹೊಸ ಉದ್ದಿಮೆದಾರ ವರ್ಗದವರಿಗೆ ಹಸ್ತಾಂತರವಾಗಲು ಆರಂಭವಾಯಿತು. ಬ್ರಿಟನ್‌ನ 1640–60ರ ಪ್ರಜಾಪ್ರಭುತ್ವ ಕ್ರಾಂತಿಗೆ ಶತಮಾನಕ್ಕಿಂತ ಮೊದಲೇ ಅಲ್ಲಿಯ ಕೃಷಿಯಲ್ಲಿ ಗಣನೀಯ ಬದಲಾವಣೆಯತ್ತ ಹೆಜ್ಜೆ ಇಟ್ಟಿತು.

ಅಂದು ಬ್ರಿಟನ್‌ನ ಬೃಹತ್ ಭೂಮಾಲಕನೆಂದರೆ ರೋಮಿನ ಕ್ಯಾಥೊಲಿಕ್ ಚರ್ಚ್‌ಗಳು. ಈ ಚರ್ಚ್‌ಗಳ ಪಾದ್ರಿಗಳು ತಮ್ಮ ವಶದಲ್ಲಿದ್ದ ಭೂಮಿಯನ್ನು ಗೇಣಿದಾರರ ಮೂಲಕ ಕೃಷಿ ಮಾಡುತ್ತಿದ್ದರು. ಈಗ ಅವರೂ ಇತರ ಭೂಮಾಲಕರಂತೆ ಉಣ್ಣೆ ಉತ್ಪಾದನೆಯ ಲಾಭ ಪಡೆಯಲು ಬಯಸಿದರು. ಚರ್ಚ್ ಭೂಮಿಗಳಿಂದ ನಿಷ್ಕರುಣೆಯಿಂದ ರೈತರನ್ನು ಹೊರಹಾಕಿ ಕುರಿಗಾವಲುಗಳನ್ನಾಗಿ ಪರಿವರ್ತಿಸಲು ಆರಂಭಿಸಿದರು. ಈ ರೀತಿ ಚರ್ಚ್‌ಗಳು ಪಡೆದ ದೊಡ್ಡ ಲಾಭದಿಂದ ಚರ್ಚ್‌ಗಳ ಹೊಸ ಹೊಸ ಕಟ್ಟಡಗಳು ಏಳತೊಡಗಿದವು. ಚರ್ಚ್‌ನ ಭೂಮಿಯ ಹೆಚ್ಚಿದ ಆದಾಯಗಳಿಂದ ಮತ್ತು



ಉಣ್ಣೆಯಿಂದ ಲಾಭ ಪಡೆದ ಭೂಮಾಲಕರು ನೀಡಿದ ಉದಾರ ದೇಣಿಗೆಗಳಿಂದ ಸಾವಿರಾರು ಹೊಸ ಚರ್ಚ್ ಕಟ್ಟಡಗಳು, ಹೊಸ ವಿನ್ಯಾಸದ ಕಲ್ಲಿನ ಕಟ್ಟಡಗಳು ಮೇಲೆದ್ದವು. ಅವುಗಳಲ್ಲಿ ಕೆಥೆಡ್ರಲ್ ಎಂದು ಕರೆಸಿಕೊಳ್ಳುವ ದೊಡ್ಡ ಕಟ್ಟಡಗಳು, ಯುರೋಪಿನಲ್ಲಿದ್ದ 14ರಲ್ಲಿ ಹತ್ತು ಬ್ರಿಟನ್‌ನಲ್ಲಿಯೇ ಇದ್ದವು. ಇವುಗಳಿಗೆಲ್ಲ ಉಣ್ಣೆ ಚರ್ಚ್‌ಗಳು ಎಂಬ ಹೆಸರೇ ದಕ್ಕಿತು.

ಉಣ್ಣೆಯ ವ್ಯಾಪಾರ ಎಷ್ಟೊಂದು ಲಾಭಕರವಾಗಿತ್ತೆಂದರೆ, ಅಂದಿನ ರಾಜ ಅದರ ಮೇಲೆ ಹಾಕಿದ ರಫ್ತು ತೆರಿಗೆಯಿಂದಲೇ ರಾಜ್ಯದ ಮೂರನೇ ಎರಡರಷ್ಟು ಆದಾಯ ಬರುತ್ತಿತ್ತು.

ಮುಂದೆ ಧಾರ್ಮಿಕ ಸುಧಾರಣೆಯಾಯಿತು. ಕ್ಯಾಥೊಲಿಕ್ ಧರ್ಮದ ಕಂದಾಚಾರಗಳ ವಿರುದ್ಧವಾಗಿ ಇಡೀ ಯುರೋಪಿನಲ್ಲಿ ಎದ್ದ ಪ್ರಾಟೆಸ್ಟೆಂಟ್ ಪಂಥದ ಭಾಗವಾಗಿ ಪೋಪನ ಅಧಿಕಾರವನ್ನು ಧಿಕ್ಕರಿಸಿ ಇಂಗ್ಲೆಂಡ್‌ನಲ್ಲಿ ಆಂಗ್ಲಿಕನ್ ಚರ್ಚ್ ಸ್ಥಾಪನೆಯಾಯಿತು. ರಾಜನೇ ಚರ್ಚ್‌ನ ಅತ್ಯುನ್ನತ ಧರ್ಮಾಧಿಕಾರಿಯೂ ಆಗುವ ಕಾನೂನು ಬಂತು. ಆಗ ರಾಜ ಕ್ಯಾಥೊಲಿಕ್ ಚರ್ಚ್‌ನಲ್ಲಿದ್ದ

ಪುಟ 4 ಕ್ಕೆ

ಸಮಾಜವಾದಿ ದೇಶಗಳಲ್ಲಿ

ಈ ಬಂಡವಾಳಶಾಹಿ ಕ್ರೌರ್ಯವನ್ನು ರಷ್ಯಾ, ಚೀನಾ, ವಿಯೆಟ್ನಾಂ, ಉ.ಕೊರಿಯಾ, ಕ್ಯೂಬಾಗಳಲ್ಲಿ ಸಮಾಜವಾದಿ ಕ್ರಾಂತಿಯಾದ ಕೂಡಲೇ ಇದರ ವಿರುದ್ಧ ದಿಕ್ಕಿನಲ್ಲಿ ನಡೆದ ಮಾನವೀಯವಾಗಿ ನಡೆದ ಭೂಸುಧಾರಣೆಯೊಂದಿಗೆ ಹೋಲಿಸಿ ನೋಡೋಣ. ದೊಡ್ಡ ಪಾಳೆಯಗಾರಿ ಭೂಮಾಲಕರಿಂದ ಭೂಮಿಯನ್ನು ಬಡ ಗೇಣಿದಾರರು, ಕೂಲಿಕಾರರು ತಾವೇ ವಶಪಡಿಸಿಕೊಂಡರು. ತಾವೇ ಸಮನಾಗಿ ಹಂಚಿಕೊಂಡರು.

ಇಂದು ನಮ್ಮ ದೇಶದಲ್ಲಿ, ವಿಶ್ವದಲ್ಲಿ ಬ್ರಿಟನ್, ಅಮೆರಿಕಗಳ ಈ ಕ್ರೌರ್ಯ ಕೈಗಾರಿಕಾ ಬೆಳವಣಿಗೆಗೆ ಅನಿವಾರ್ಯ ಅಗತ್ಯವಾಗಿತ್ತು ಎಂಬುದನ್ನು ಪ್ರತಿಪಾದಿಸಲಾಗುತ್ತಿದೆ. ಭಾರತದಲ್ಲಿ ಕೃಷಿಯಲ್ಲಿ ತೊಡಗಿರುವ ಜನಸಂಖ್ಯೆಯನ್ನು ತೀವ್ರವಾಗಿ ಕಡಿತ ಮಾಡಬೇಕೆಂಬ ವಾದಕ್ಕೆ ಅದಾನಿ ಅಂಬಾನಿಗಳ ಕೈಗೆ ಕೃಷಿಯನ್ನು ಒಪ್ಪಿಸಬೇಕೆಂಬ ವಾದಕ್ಕೆ ಸಮರ್ಥನೆಯಾಗಿ ಬಳಸಲಾಗುತ್ತಿದೆ.

ಆದರೆ ಭೂಹೀನ ರೈತರಿಗೆ, ಗೇಣಿದಾರರಿಗೆ ಬಹು ದೊಡ್ಡ ಪ್ರಮಾಣದಲ್ಲಿ ಭೂಮಿ ಮತ್ತಿತರ ಸಂಪತ್ತನ್ನು ವರ್ಗಾಯಿಸುವ ಮೂಲಕ ಬಹು ವೇಗವಾಗಿ ಕೈಗಾರಿಕಾ ಕ್ರಾಂತಿ ಸಾಧಿಸಬಹುದೆಂದು ಸೋವಿಯತ್ ಒಕ್ಕೂಟ, ಚೀನಾ, ವಿಯೆಟ್ನಾಂ, ಕ್ಯೂಬಾಗಳು ಸಾಧಿಸಿ ತೋರಿಸಿವೆ. ಇಡೀ ವಿಶ್ವಕ್ಕೆ ಪರ್ಯಾಯ ಮಾದರಿಯನ್ನು ಹಾಕಿಕೊಟ್ಟಿವೆ.

ಸಂಪಾದಕೀಯ

ಬೆಲೆ ಏರಿಕೆ: ಜನದ್ರೋಹಕ್ಕೆ ಎಷ್ಟೆಲ್ಲಾ ಸಮರ್ಥನೆಗಳು!

ಉಗಾದಿ ಹಬ್ಬದ ಸಂಭ್ರಮ, ಸಡಗರ ಎಲ್ಲವೂ ಉಡುಗಿ ಹೋಗುವಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ನಾಗರೀಕ ಸೇವೆಗಳ ಶುಲ್ಕ ಹೆಚ್ಚಳವು ಪರಿಣಾಮ ಉಂಟು ಮಾಡಿದೆ. ಇದಕ್ಕೆ ಕಾರಣವಾಗಿರುವ ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿರುವ ಪಕ್ಷಗಳ ನಾಯಕರು ಒಬ್ಬರತ್ತ ಮತ್ತೊಬ್ಬರು ಬೆರಳು ತೋರಿಸುತ್ತಾ ಜನರ ಕಣ್ಣಿಗೆ, ಬಾಯಿಗೆ ಮಣ್ಣು ಹಾಕುತ್ತಿದ್ದಾರೆ. ಕಳೆದ ತಿಂಗಳಿನಲ್ಲಿ ಮೆಟ್ರೋ ರೈಲು ಪ್ರಯಾಣದ ದರಗಳನ್ನು ದುಪ್ಪಟ್ಟು ಮಾಡಿದಾಗ ಆಕ್ರೋಶ ವ್ಯಕ್ತಪಡಿಸಿದ ಸಾರ್ವಜನಿಕರನ್ನು ಯಶಸ್ವಿಯಾಗಿ ದಿಕ್ಕು ತಪ್ಪಿಸಿದೆವೆಂಬ ಭಂಡತನಕ್ಕೆ ಈ ಸರ್ಕಾರಗಳು ಬಂದಿರುವಂತೆ ಕಾಣುತ್ತಿದೆ. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಮೆಟ್ರೋ ಪ್ರಯಾಣ ಧರಗಳ ಹೆಚ್ಚಳದ ವಿಷಯದಲ್ಲಿ ಆಡಿದ ಆಟಗಳಿಂದ ಗೊಂದಲ ಮತ್ತು ಹತಾಶೆಗೆ ಒಳಗಾದ ಜನಸಾನ್ಯರೇ ಕೊನೆಗೆ ತಲೆ ಬಗ್ಗಿಸಿ ಹೇಳಿದಷ್ಟು ಕೊಟ್ಟು ಹೋಗಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಯಿತು. ನಾಗರಿಕ ಸೇವೆಗೆಂದೆ ಟೊಂಕ ಕಟ್ಟಿರುವ ಈ ಸಂಸ್ಥೆಗಳು, ಅದರ ಆಡಳಿತ ಮಂಡಳಿಗಳು ಮತ್ತು ಸರ್ಕಾರಗಳು ತಾವು ಹೇಳಿದ್ದಷ್ಟು ಕೊಟ್ಟು ಹೋಗಬೇಕು ಎನ್ನುವಂತಹ ಸರ್ವಾಧಿಕಾರಿ ದುರ್ವರ್ತನೆ ತೋರಿವೆ. ಇಲ್ಲಿ ಜನದನಿಗೆ, ಜನತೆಯ ಆಗ್ರಹಕ್ಕೆ ಬೆಲೆ ಇಲ್ಲ ಎನ್ನುವುದು ಇತ್ತೀಚೆಗೆ ಸರ್ಕಾರಗಳು ನಡೆದುಕೊಳ್ಳುತ್ತಿರುವ ರೀತಿಯಿಂದ ಮತ್ತೆ ಮತ್ತೆ ಸಾಬೀತಾಗುತ್ತಿದೆ.

ಜನೋದ್ಧಾರಗಳ ಬಗ್ಗೆ ಸದಾ ಗ್ಯಾರಂಟಿಯನ್ನೇ ಕೊಡುತ್ತಿದ್ದ ರಾಜ್ಯದ ಕಾಂಗ್ರೆಸ್ ಸರ್ಕಾರ ಇದೀಗ ಒಂದಾದರೊಂದಂತೆ ಬೆಲೆಗಳನ್ನು ಹೆಚ್ಚಿಸುವ ಮೂಲಕ ಜನರ ಬೆನ್ನಿನ ಮೇಲೆ ಬೆಲೆ ಏರಿಕೆಯ ಬರೆ ಹಾಕುವ ಸರಣಿಯನ್ನೇ ಆರಂಭಿಸಿದೆ. ವಿದ್ಯುತ್ ದರಗಳ ಏರಿಕೆ ಆಯ್ತು. ನೀರು ಪೂರೈಕೆಯ ದರವನ್ನು ಹೆಚ್ಚಿಸಲಾಯ್ತು. ಕಸದ ವಿಲೇವಾರಿ ಸೇವೆಯ ಮೇಲಿನ ಸೆಸ್ ಶುಲ್ಕ ಏರಿಕೆ. ಮನೆಯ ಮುಂದೆ ವಾಹನ ನಿಲುಗಡೆಗೂ ಶುಲ್ಕ ವಿಧಿಸುವ ಪ್ರಸ್ತಾವ. ವಾರ್ಷಿಕ ಬಜೆಟ್ ನಲ್ಲಿ ಆಸ್ತಿ ತೆರಿಗೆ ಒಳಗೊಂಡು ಹಲವಾರು ವಸ್ತು, ಸೇವೆಗಳ ಮೇಲಿನ ತೆರಿಗೆ ಹೆಚ್ಚಳ, ವಿಧಾನ ಸಭಾ ಅಧಿವೇಶನದಲ್ಲಿ ಬಜೆಟ್ ನ ಈ ಅಂಶಗಳ ಬಗ್ಗೆ ಅರ್ಥಪೂರ್ಣ ಚರ್ಚೆಯೇ ನಡೆಯದಂತೆ ಆಡಳಿತ ಮತ್ತು ವಿರೋಧ ಪಕ್ಷಗಳ 'ಒಮ್ಮತ' ದಿಂದ ವಿಷಯಗಳು 'ಹನಿ ಟ್ರಾಪ್' ಗೆ ಒಳಗಾದವು. ಈಗ ಹಾಲಿನ ದರಗಳ ಹೆಚ್ಚಳ, ಡಿಸೆಲ್ ಮೇಲೆ ಸುಂಕ ತೆರಿಗೆ ಸುಲಿಗೆ ಮುಂದುವರಿದ ಮಸಲತ್ತು.

ಜನವರಿ 2025 ರಲ್ಲಿ ಬಸ್ ಪ್ರಯಾಣ ದರಗಳನ್ನು ಶೇ.15 ರಷ್ಟನ್ನು ಹೆಚ್ಚಿಸಲಾಯ್ತು. ವಿದ್ಯುತ್ ದರ ಯೂನಿಟ್ ಗೆ ಕನಿಷ್ಠ 36 ಪೈಸೆ ಸರ್ಚಾರ್ಜ್, ಅಲ್ಲದೇ 67 ಪೈಸೆ ದರ ಹೆಚ್ಚಳ, ಕೆ.ಇ.ಆರ್.ಸಿ ಒಪ್ಪಿದರೆ ಇವೆರಡೂ ಸೇರಿದರೆ ಪ್ರತಿ ಯೂನಿಟ್ ಗೆ ರೂ.1.13 ಪೈಸೆ ಹೆಚ್ಚಳದ ವಿವರಣೆ, ಈಗ ಹಾಲಿನ ದರ ಪ್ರತಿ ಲೀಟರ್ ಗೆ ರೂ. 4 ಹೆಚ್ಚಳದ ಪ್ರಸ್ತಾಪದ ಎದುರು 2.50 ಏರಿಕೆ, ಡಿಸೆಲ್ ಲೀಟರ್ ಗೆ ಶೇ 18.44 ರಿಂದ ಶೇ. 21.77 ಅಂದರೆ ರೂ. 2 + ಹೆಚ್ಚಳ, ಬೆಂಗಳೂರಿನಾಚೆಯ ಜಿಲ್ಲೆಗಳಲ್ಲಿ ರೂ. 2.74 ವರಗೂ ಏರಿಕೆ, ಹೆದ್ದಾರಿ ಟೋಲ್ ದರಗಳೂ ಸಹ ಸೇ.4–5 ರಷ್ಟು ಹೆಚ್ಚಳ, ಜನಸಾಮಾನ್ಯರ ಜೇಬಿಗೆ ಕತ್ತರಿ

ಕೇಂದ್ರದ ಒಕ್ಕೂಟ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ವಿವಿಧ ತೆರಿಗೆ ಸುಂಕ, ಸೆಸ್, ಮುಂತಾದವುಗಳನ್ನು ಹೆಚ್ಚಿಸುತ್ತಿವೆ. ಇವೆಲ್ಲವೂ ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಾರಣವಾಗುತ್ತಿವೆ. ತೀವ್ರ ಹಣದುಬ್ಬರದ ನಡುವೆ ಈ ಹೆಚ್ಚಳ ಜನಸಾಮಾನ್ಯರನ್ನು ತತ್ತರಗೊಳ್ಳುವಂತೆ ಮಾಡಿದೆ. ಬೆಲೆ ಏರಿಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ ನೇರ ಪೂರ್ಣ ಹೊಣೆಗಾರರಾಗಿವೆ. ಆದರೆ ಇಲ್ಲಿ ಅಧಿಕಾರದಲ್ಲಿರುವ ಪಕ್ಷಗಳು ಇದಕ್ಕೆಲ್ಲ ಒಬ್ಬರು ಇನ್ನೊಬ್ಬರು ಕಾರಣವೆಂದು ಅಬ್ಬರದಲ್ಲಿ ಆರೋಪಿಸುತ್ತಿವೆ. ಈ ದೋಷಾರೋಪಣೆಗಳು ವಾಸ್ತವದಲ್ಲಿ ಯಾರು ನಿಜಕ್ಕೂ ಪಾತಕಿಗಳು ಎನ್ನುವುದನ್ನೇ ಮರೆಸುತ್ತಿವೆ. ಮಾತ್ರವಲ್ಲ, ಜನರನ್ನೂ ಗೊಂದಲಕ್ಕೆ ಈಡು ಮಾಡಿ ಕೊನೆಗೂ ಸರ್ಕಾರಗಳು ಬಯಸಿದ ರೀತಿಯಲ್ಲಿ ಜಾರಿಗೆ ತರಲು ನಿರಾತಂಕ ಸ್ಥಿತಿಯನ್ನು ನಿರ್ಮಿಸಿ ಕೊಡುತ್ತಿವೆ. ಈ ಬೈದಾಟಗಳ ವರಸೆಯಲ್ಲಿ ಆಯಾ ಪಕ್ಷದ ಬೆಂಬಲಿಗರನ್ನು ಅಪಹರಣಕ್ಕೆ ಒಳಗಾಗಿಸಲಾಗುತ್ತಿದೆ. ಆಡಳಿತ ಪಕ್ಷಗಳಾಗಿರುವ ಬಿಜೆಪಿ–ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ಧೋರಣೆ ಅತ್ಯಂತ ದ್ರೋಹ ಮತ್ತು ವಂಚಕತನದಿಂದ ಕೂಡಿವೆ.

ಹಾಲಿನ ದರಗಳನ್ನು ಹೆಚ್ಚಿಸಿರುವ ರಾಜ್ಯ ಸರ್ಕಾರ ರೈತರ ಹಿತಕ್ಕಾಗಿಯೇ ಈ ಏರಿಕೆ ಮಾಡಲಾಗಿದೆ ಎಂದು ಅದನ್ನು ಗುರಾಣಿಯಾಗಿ ಬಳಸುತ್ತಿದೆ. ನಿಜ, ರೈತರು ಖಂಡಿತ ಸಂಕಷ್ಟದಲ್ಲಿದ್ದಾರೆ. ದನಗಳ ಸಾಕಾಣಿಕೆ ದುಬಾರಿ ಆಗಿದೆ. ಮೇವು ಇತ್ಯಾದಿಗಳ ಬೆಲೆಗಳು ಹೆಚ್ಚಳವಾಗಿ ನಿರ್ವಹಣೆ ವೆಚ್ಚವು ಹೆಚ್ಚಿದೆ ಎಂಬುದು ನಿಜ. ಆದರೆ ರಾಜ್ಯ ಸರ್ಕಾರ ಇದಕ್ಕೆ ಸಬ್ಸಿಡಿಯನ್ನು ಕೊಡುವ ಮೂಲಕ ಆ ಹೊರೆ ಜನಸಾಮಾನ್ಯರ ಹೆಗಲಿಗೇರಿಸುವುದನ್ನು ತಪ್ಪಿಸಬಹುದು. ಆದರೆ ಅದನ್ನು ಮಾಡಲು ಈ ಸರ್ಕಾರಗಳಿಗೆ ಮನಸ್ಸಿಲ್ಲ. ಹಾಗೆ ರಾಜ್ಯ ಸರ್ಕಾರಕ್ಕೆ ಸಂಪನ್ಮೂಲಗಳ ಕೊರತೆ ಇರುವುದೂ ವಾಸ್ತವ. ಆದರೆ ಆಂತರಿಕ ಸಂಪನ್ಮೂಲವನ್ನು ಕ್ರೋಢಿಕರಿಸುವ ಪರ್ಯಾಯ ಆರ್ಥಿಕ ಮಾರ್ಗಗಳನ್ನು ಈ ಸರ್ಕಾರಗಳು ನಿರಾಕರಿಸುತ್ತಲೇ ಬರುತ್ತಿವೆ. ಜನಸಾಮಾನ್ಯರ ಮೇಲೆ ಹೊರೆ ಏರುವುದು ಇದಕ್ಕೆ ಪರಿಹಾರವೆಂಬ ನೀತಿಗಳನ್ನೇ ಆಳುವ ಈ ಪಕ್ಷಗಳು ಪಾಲಿಸುತ್ತಲೇ ಬಂದಿವೆ. ಮತ್ತೊಂದೆಡೆ, ತನಗೆ ಕೇಂದ್ರದಿಂದ ಸಿಗಬೇಕಾದ ನ್ಯಾಯಯುತ ಪಾಲನ್ನು ಪಡೆಯಲು ತೀವ್ರತರ ಹೋರಾಟ ಅಗತ್ಯ. ರಾಜ್ಯಗಳಿಗೆ ನೀಡಬೇಕಾದ ಜಿ.ಎಸ್.ಟಿ. ಅಂತಹ ತೆರಿಗೆಯ ಪಾಲನ್ನು ನೀಡದೆ ಕೇಂದ್ರ ಒಕ್ಕೂಟ ಸರ್ಕಾರ ರಾಜ್ಯಗಳನ್ನು ವಂಚಿಸುತ್ತಿದೆ. ಮತ್ತು ತೀವ್ರ ಹಣಕಾಸಿನ ಮುಗ್ಗಟ್ಟಿಗೆ ಬೀಳುವಂತೆ ಮಾಡಿದೆ. ಆದರೆ ಕೆಲವೇ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷವೂ ಮುಫತ್ತಾಗಿ ನೀಡುತ್ತಿದೆ. ಪ್ರಧಾನವಾಗಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳು ಬಹು ದೊಡ್ಡ ರೀತಿಯಲ್ಲಿ ಬೆಲೆ ಏರಿಕೆಯ ಗೆ ಪ್ರಮುಖ ಕಾರಣ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ಕೇಂದ್ರದ ನೀತಿಗಳ ವಿರುದ್ಧ ಗಟ್ಟಿತನದ ಹೋರಾಟವನ್ನು ನಡೆಸದೆ ಆಂತರಿಕ ಸಂಪನ್ಮೂಲಗಳನ್ನೂ ಇನ್ನಷ್ಟು ಸಂಗ್ರಹಿಸುವ ಮೂಲಕ ಜನಸಾಮಾನ್ಯರ ಮೇಲೆ ತೆರಿಗೆ, ಬೆಲೆ ಏರಿಕೆಯ ಹೊರೆಯಾಗದಂತೆ ನೋಡುವ ಯಾವ ಕಾಳಜಿಯು ಇಲ್ಲವಾಗಿದೆ. ಈ ಎರಡು ಪಕ್ಷಗಳು ಆರ್ಥಿಕ ಧೋರಣೆಯಲ್ಲಿ ಒಂದೇ ರೀತಿಯ ನೀತಿಗಳನ್ನ ಅನುಸರಿಸುತ್ತಾ ಬಂದಿವೆ. ಆದರೆ ಹೊರಗೆ ರಾಜಕೀಯವಾಗಿ ತಾವು ಜನರ ಹಿತರಕ್ಷಕರು ಎನ್ನುವಂತೆ, ತದ್ವಿರುದ್ಧ ಇರುವಂತೆ ನಟಿಸುತ್ತಿವೆ.

ವಿರೋಧ ಪಕ್ಷವಾಗಿರುವ ಬಿಜೆಪಿ ಯು ಕಾಂಗ್ರೆಸ್ ಸರ್ಕಾರ ಹೆಚ್ಚಿಸಿದ ಬೆಲೆ ಏರಿಕೆಯ ಪ್ರಶ್ನೆಯನ್ನೇ ಮುಂದೊಡ್ಡಿ ಇಡೀ ರಾಜ್ಯದಾದ್ಯಂತ ಪ್ರತಿಭಟನೆ ಮಾಡುತ್ತಿದೆ. ಈ ಮೂಲಕ ತಾನು ಕೇಂದ್ರದಲ್ಲಿ ನಡೆಸುತ್ತಿರುವ ಜನ ವಿರೋಧಿ ನೀತಿಗಳ ಅಪರಾಧಗಳನ್ನು ಮುಚ್ಚಿಕೊಳ್ಳಲು ಯತ್ನಿಸುತ್ತಿದೆ. ಮತ್ತು ಹೆಚ್ಚುತ್ತಿರುವ ಜನರ ಅತೃಪ್ತಿಯನ್ನು ರಾಜಕೀಯವಾಗಿ ಬಳಸಿಕೊಳ್ಳಲು ಸಕ್ರಿಯವಾಗಿ ತೊಡಗಿದೆ. ಜನತೆಗೆ ಒಂದು ಸಕಾಲಿಕ ನೆರವು ನೀಡುವ ಪರಿಹಾರಾತ್ಮಕ ಯೋಜನೆಗಳಾದ ಗ್ಯಾರಂಟಿ ಯೋಜನೆಗಳೆಂದಲೇ ಈ ಬೆಲೆ ಏರಿಕೆಯನ್ನು ಮಾಡಲಾಗುತ್ತಿದ್ದು ಜನತೆಯನ್ನು ಮತ್ತೆ ಸುಲಿಯಲಾಗುತ್ತಿದೆ ಎಂಬ ಭಾವನೆಗಳನ್ನು ವ್ಯಾಪಕವಾಗಿ ಜನರಲ್ಲಿ ಬಿತ್ತುವಲ್ಲಿ ಬಿಜೆಪಿ ಯಶಸ್ವಿಯಾಗುತ್ತಿದೆ. ಈ ಬೆಲೆ ಏರಿಕೆಯ ಭಾದೆಯಿಂದ ಸ್ವಲ್ಪಮಟ್ಟಿಗಾದರೂ ಪರಿಹಾರ ಸಿಗುವ ಗ್ಯಾರಂಟಿ ಯೋಜನೆಗಳ ವಿರುದ್ಧವೇ ಫಲಾನುಭವಿಗಳಾದ ಜನರನ್ನು ಎತ್ತಿಕಟ್ಟುವುದು ದುರಂತವೇ ಸರಿ.

ಅಂತರಿಕ ಭಿನ್ನಾಭಿಪ್ರಾಯಗಳು, ಬಣಗಳ ಬಡಿದಾಟದಲ್ಲಿ ಆಳವಾಗಿ ಮುಳುಗಿ, ಹೇಸಿಗೆ ಹುಟ್ಟಿಸುತ್ತಿರುವ ಬಿಜೆಪಿ ಈ ಸನ್ನಿವೇಶವನ್ನು ತನ್ನ ಪರವಾಗಿ ಬಳಸಲು ಪ್ರತಿಭಟನಾ ಜಾತಾ ನಡೆಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಿರಸ್ಕಾರಕ್ಕೆ ಒಳಗಾಗಿರುವ ಬಿಜೆಪಿ ಪಕ್ಷ ಮತ್ತೆ ಹೇಗಾದರೂ ಅಧಿಕಾರ ಹಿಡಿಯಲು ಹವಣಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದಕ್ಕೆ ಅವಕಾಶವನ್ನು ಕಾಂಗ್ರೆಸ್ ಸರ್ಕಾರ ನೀಡುತ್ತಲೇ ಬರುತ್ತಿದೆ. ಕೋಮುವಾದಿ ದುರಾಕ್ರಮಣ ವ್ಯಾಪಕ ಭ್ರಷ್ಟಾಚಾರ ಮತ್ತು ಹಿಂಸೆಗಳನ್ನು ಹೆಚ್ಚಿಸಿದ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡಲು ನೀಡಿರುವ ಜನಾದೇಶಕ್ಕೆ ದ್ರೋಹವನ್ನು ಬಗೆಯುತ್ತಿದೆ. ಈ ಸನ್ನಿವೇಶದಲ್ಲಿ ಜನತೆಯ ಮೇಲೆ ಹೊರೆಯಾಗದಂತೆ ಅಗತ್ಯ ವಸ್ತುಗಳನ್ನು ಸಾಮಾನ್ಯ ಜನರಿಗೆ ಸುಲಭದ ದರದಲ್ಲಿ ಏಟುಕುವಂತೆ, ಜನತೆಯನ್ನು ಸಂರಕ್ಷಿಸಲು ರಾಜ್ಯ ಸರ್ಕಾರವು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕಿತ್ತು. ಆದರೆ ಕಾಂಗ್ರೆಸ್ ಪಕ್ಷ ರಾಜಕೀಯವಾಗಿಯೂ ಮತ್ತು ಆಡಳಿತಾತ್ಮಕವಾಗಿಯೂ ಕೇವಲ ಸಂಕೇತಿಕ ಸ್ವರ ಹೊರಡಿಸುವುದನ್ನ ಬಿಟ್ಟರೆ ರಾಜಕೀಯ ಧಾಳಿಯ ಎದುರಿನಲ್ಲಿ ಬಹುತೇಕ ಕೈ ಚೆಲ್ಲಿ ಕುಳಿತಿದೆ. ಇದು ಮುಂದಿನ ದಿನಗಳಲ್ಲಿ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಮಾತ್ರವಲ್ಲ ಕರ್ನಾಟಕದ ಪ್ರಜಾಪ್ರಭುತ್ವೀಯ ಮತ್ತು ಶಾಂತಿಪ್ರಿಯ ಜಾತ್ಯಾತೀತ ಮೌಲ್ಯಗಳಿಗೆ ಮುಖ್ಯವಾಗಿ ಜನತೆಗೆ ಅಪಾರ ಅಪಾಯವನ್ನು ಉಂಟು ಮಾಡುತ್ತದೆ.

ಆದ್ದರಿಂದ ಈ ಕೂಡಲೇ ಹಾಲಿನ ಬೆಲೆ ಏರಿಕೆಯ ಹೆಚ್ಚಳದ ಹೊರೆ ಜನರಸಾಮಾನ್ಯರ ಮೇಲೆ ಬೀಳದಂತೆ, ಡೀಸೆಲ್ ಮೇಲಿನ ಸುಂಕ ರದ್ದುಪಡಿಸಿ, ಇತರೆ ತೆರಿಗೆಗಳ ಹೆಚ್ಚಳವನ್ನು ಹಿಂತೆಗೆದುಕೊಳ್ಳುವ ಮೂಲಕವಾಗಿ ಜನತೆಯನ್ನು ಸಂರಕ್ಷಿಸಬೇಕು. ಇಲ್ಲವಾದಲ್ಲಿ, ತೀವ್ರತರವಾದ ರಾಜಕೀಯ ಪರಿಣಾಮಗಳಿಗೆ ಕಾಂಗ್ರೆಸ್ ಪಕ್ಷವೇ ಮುಕ್ತ ಅವಕಾಶವನ್ನು ಬಿಜೆಪಿಗೆ ಕಲ್ಪಿಸಿದಂತಾಗುತ್ತದೆ. ಜನತೆಗೆ ಬಗೆದ ದ್ರೋಹ ಆಗುತ್ತದೆ. ಆದ್ದರಿಂದ ವಿಳಂಬಿಸದೇ ಈ ದೆಸೆಯಲ್ಲಿ ಸರ್ಕಾರ ಸೂಕ್ಷ್ಮವಾದ ಸೂಕ್ತ ಹೆಜ್ಜೆಗಳನ್ನು ತುರ್ತಾಗಿ ಇಡಬೇಕು.

ವಿಭಜನಕಾರಿ ಮತ್ತು ಅನ್ಯಾಯದ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯುವಂತೆ ಜಾತ್ಯತೀತ, ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಟ್ಟಾಗಿ ಆಗ್ರಹಿಸಬೇಕು

24 ನೇ ಮಹಾಧಿವೇಶನದ ನಿರ್ಣಯ

ಸಂಸತ್ತು ಅಂಗೀಕರಿಸಿರುವ 'ವಕ್ಫ್ ತಿದ್ದುಪಡಿ ಮಸೂದೆ' ಸಂವಿಧಾನದ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಮೇಲಿನ ಒಂದು ಪ್ರಹಾರವಾಗಿದೆ ಎಂದು ಸಿಪಿಐ(ಎಂ)ನ 24ನೇ ಮಹಾಧಿವೇಶನ ಖಂಡಿಸಿದೆ. ಈ ಕಾಯ್ದೆಯ ವಿರುದ್ಧ ಪ್ರತಿಭಟಿಸಲು ಅದು ದೇಶದ ಎಲ್ಲಾ ಜಾತ್ಯತೀತ ಜನರು ಮತ್ತು ಸಂಘಟನೆಗಳಿಗೆ ಕರೆ ನೀಡಿದೆ, ಇದು ಕೋಮು ಧ್ರುವೀಕರಣವನ್ನು ಇನ್ನಷ್ಟು ಹೆಚ್ಚಿಸುತ್ತದೆ ಮತ್ತು ರಾಷ್ಟ್ರದ ಜಾತ್ಯತೀತ ಹಂದರಕ್ಕೆ ಹಾನಿ ಮಾಡುತ್ತದೆ ಎಂದು ಅದು ಹೇಳಿದೆ.

ಹಿಂದಿನ ವಕ್ಫ್ ಕಾಯ್ದೆಯು ವಕ್ಫ್ ಆಸ್ತಿಗಳನ್ನು (ಇಸ್ಲಾಮಿಕ್ ದತ್ತಿಗಳನ್ನು) ನಿಯಂತ್ರಿಸುವ ಮತ್ತು ಧಾರ್ಮಿಕ ಮತ್ತು ದತ್ತಿ ಉದ್ದೇಶಗಳಿಗಾಗಿ ಅವುಗಳ ಸರಿಯಾದ ಆಡಳಿತ, ರಕ್ಷಣೆ ಮತ್ತು ಬಳಕೆಯನ್ನು ಖಚಿತಪಡಿಸುವ ಕಾನೂನು ಚೌಕಟ್ಟಾಗಿತ್ತು. ವಕ್ಫ್ ಆಸ್ತಿಗಳ ನಿಯಂತ್ರಣಕ್ಕೆ, ಅವುಗಳ ದುರುಪಯೋಗ ಮತ್ತು ಅನಧಿಕೃತ ಮಾರಾಟವನ್ನು ತಡೆಯಲು ಇದು ಮಾರ್ಗಸೂಚಿಗಳನ್ನು ಒದಗಿಸಿತ್ತು.

ತಿದ್ದುಪಡಿ ಮಾಡಿದ ಕಾಯ್ದೆಯು ಹಿಂದಿನ ಕಾಯ್ದೆಯಲ್ಲಿ ರೂಪಿಸಲಾದ ಮೂಲಭೂತ ತತ್ವಗಳನ್ನು ದುರ್ಬಲಗೊಳಿಸುವ ಗಮನಾರ್ಹ ಬದಲಾವಣೆಗಳನ್ನು ಮಾಡುತ್ತದೆ. ಈ ತಿದ್ದುಪಡಿಯ ಮೂಲಕ ಬಿಜೆಪಿ ಸರ್ಕಾರವು ಜನರನ್ನು ವಿಭಜಿಸುವ ಗುರಿಯನ್ನು ಹೊಂದಿರುವ ತನ್ನ ಹಿಂದುತ್ವ ಕಾರ್ಯಸೂಚಿಯನ್ನು ಮುಂದಿಡುತ್ತಿದೆ. ಹಿಂದಿನ ಕಾಯ್ದೆಯನ್ನು ಮುಸ್ಲಿಮರು ವ್ಯಾಪಕ ಭೂ ಕಬಳಿಕೆಗೆ ಬಳಸಿಕೊಂಡಿದ್ದಾರೆ ಎಂದು ಅದು ಪದೇ ಪದೇ ಹೇಳುತ್ತಿದೆ.

ಮುಸ್ಲಿಮೇತರರು ವಕ್ಫ್ ಆಸ್ತಿಗಳನ್ನು ನಿರ್ವಹಿಸುವುದನ್ನು ನಿಷೇಧಿಸುವ ಇಸ್ಲಾಮಿಕ್ ತಡೆಗಳ ಹೊರತಾಗಿಯೂ, ತಿದ್ದುಪಡಿ ಮಾಡಿದ ಕಾಯ್ದೆಯು ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರರನ್ನು ಸೇರಿಸುತ್ತದೆ. ಇದು ಮುಸ್ಲಿಮರು ತಮ್ಮ ಧರ್ಮವನ್ನು ಆಚರಿಸುವ ಸಾಂವಿಧಾನಿಕ ಹಕ್ಕಿನ ಮೇಲಿನ ದಾಳಿಯಾಗಿದೆ.

ಕನಿಷ್ಠ ಐದು ವರ್ಷಗಳ ಕಾಲ ತಾನು ಧರ್ಮವನ್ನು ಅನುಸರಿಸುತ್ತಿದ್ದೇನೆ ಎಂದು ಸಾಬೀತುಪಡಿಸಬಹುದಾದ ಮುಸ್ಲಿಂ ಮಾತ್ರ ಕೊಡುಗೆ ನೀಡಬಹುದು ಎಂದು ಕಡ್ಡಾಯಗೊಳಿಸುವ ಮೂಲಕ, ತಿದ್ದುಪಡಿ ಮಾಡಿದ ಕಾಯ್ದೆಯು ಮುಸ್ಲಿಮರನ್ನು ಕಿರುಕುಳಕ್ಕೆ ಗುರಿಪಡಿಸಲು ದಾರಿ ಮಾಡಿಕೊಡುತ್ತಿದೆ. ಈ ಮೂಲಕ ಅವರು ವಕ್ಫ್ ಆಸ್ತಿಗಳನ್ನು ರಚಿಸುವುದನ್ನು ಅಥವಾ ಕೊಡುಗೆ ನೀಡುವುದನ್ನು ವಾಸ್ತವವಾಗಿ ತಡೆಯಬಹುದು. ಅನೇಕ ಮುಸ್ಲಿಮೇತರರು ಕೂಡ ಮಸೀದಿಗಳು ಇತ್ಯಾದಿಗಳ ನಿರ್ಮಾಣಕ್ಕೆ ಕೊಡುಗೆ ನೀಡುತ್ತಾರೆ. ಸೋದರತ್ವ ಮತ್ತು ಭ್ರಾತೃತ್ವದ ಈ ಅಭಿವ್ಯಕ್ತಿಯು ತಿದ್ದುಪಡಿ ಮಾಡಿದ ಕಾಯ್ದೆಯಡಿಯಲ್ಲಿ ಇನ್ನು ಮುಂದೆ ಸಾಧ್ಯವಾಗುವುದಿಲ್ಲ.

ವಕ್ಫ್ ಕಾಯ್ದೆಯ ಸೆಕ್ಷನ್ 40 ಅನ್ನು ರದ್ದುಗೊಳಿಸುವ ಮೂಲಕ, ವಕ್ಫ್ ಮಂಡಳಿಯು ವಕ್ಫ್ ಆಸ್ತಿಗಳ ಸ್ವರೂಪವನ್ನು ನಿರ್ಧರಿಸುವ ಅಧಿಕಾರವನ್ನು ಕಳೆದುಕೊಳ್ಳುತ್ತದೆ. ವಕ್ಫ್ ಆಸ್ತಿಗಳು ಪ್ರಾಥಮಿಕವಾಗಿ ನಾಲ್ಕು ವರ್ಗಗಳಾಗಿ ಬರುತ್ತವೆ: ದಸ್ತಾವೇಜಿನ ಮೂಲಕ ವಕ್ಫ್ (ದಾಖಲೆಗಳು ಇರುವಂತದ್ದು), ಮೌಖಿಕ ಘೋಷಣೆಯ ಮೂಲಕ ವಕ್ಫ್ (ಮೌಖಿಕವಾಗಿ ಘೋಷಿಸಿರುವುದು), ಬಳಕೆಯಿಂದ ವಕ್ಫ್ (ದೀರ್ಘಕಾಲದ ಬಳಕೆಯ ಮೂಲಕ ಸ್ಥಾಪಿತವಾಗಿರುವುದು) ಮತ್ತು ಸರ್ಕಾರದಿಂದ ಅನುದಾನದ ಭೂಮಿಗಳು. ಹೊಸ ತಿದ್ದುಪಡಿಗಳ ಅಡಿಯಲ್ಲಿ, ದೇಶದ ಬಹುಪಾಲು ವಕ್ಫ್ ಆಸ್ತಿಗಳು –ಮೌಖಿಕವಾಗಿ ಅಥವಾ ಬಳಕೆಯ ಮೂಲಕ ಘೋಷಿಸಲ್ಪಟ್ಟವು– ಸರ್ಕಾರದ ಸ್ವಾಧೀನಕ್ಕೆ ಗುರಿಯಾಗುತ್ತವೆ.

ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಕೇರಳದಂತಹ ಅತಿದೊಡ್ಡ ವಕ್ಫ್ ಹಿಡುವಳಿಗಳನ್ನು ಹೊಂದಿರುವ ರಾಜ್ಯಗಳು ಪ್ರಸ್ತಾವಿತ ತಿದ್ದುಪಡಿಗಳ ಮೂಲಕ ಈ ಸ್ವತ್ತುಗಳನ್ನು ಗುರಿ ಮಾಡಿ ಸ್ವಾಧೀನಪಡಿಸಿಕೊಳ್ಳುವ ಕ್ರಮಗಳಿಗೆ ಪಕ್ಕಾಗುತ್ತವೆ.

ವಕ್ಫ್ ಆಸ್ತಿಗಳನ್ನು ಪುಟ 7 ಕ್ಕೆ

ಕರಿ ಮೆಣಸು: ನಮ್ಮ ಸಂಸದರು ಮಾಡಬೇಕಾದುದೇನು?

ಕರಿಮೆಣಸು ಬೆಳೆಗಾರರು ಬೆಳೆದ ಬೆಳೆಯನ್ನು ಮಾರಾಟ ಮಾಡುವಾಗ ಅವರಿಗೆ ಜಿಎಸ್‌ಟಿ ಅನ್ವಯವಾಗುವುದಿಲ್ಲವೆಂದು ಕೇಂದ್ರ ಸರಕಾರ ಆದೇಶ ಹೊರಡಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಕೇಂದ್ರ ಸರಕಾರ ಈ ಕ್ರಮ ತೆಗೆದುಕೊಳ್ಳಲು ಮೈಸೂರು–ಕೊಡಗು ಸಂಸದ ಯದುವೀರ ಒಡೆಯರ್‌ರವರ ಪ್ರಯತ್ನ ಕಾರಣ ಎಂದು ಹೇಳಲಾಗಿದೆ. ಅದಕ್ಕಾಗಿ ಅವರು ಅಭಿನಂದನಾರ್ಹರು.

ಇದು ನಮ್ಮ ಕರಿಮೆಣಸು ಬೆಳೆಗಾರರು ಎದುರಿಸುತ್ತಿರುವ ಪ್ರಮುಖ ಸಮಸ್ಯೆ. ಕರಿಮೆಣಸು ನಮ್ಮ ದೇಶಕ್ಕೆ ಅಧಿಕೃತವಾಗಿ ಆಮದಾಗುತ್ತಿರುವುದು ಮತ್ತು ಅದಕ್ಕಿಂತಲೂ ಹೆಚ್ಚಾಗಿ ಕಳ್ಳತನದಿಂದ ಅದನ್ನು ನಮ್ಮ ದೇಶಕ್ಕೆ ತರುತ್ತಿರುವುದು ನಮ್ಮ ರೈತರು ಬೆಳೆಯುತ್ತಿರುವ ಉತ್ಕೃಷ್ಟ ಮಟ್ಟದ ಕರಿಮೆಣಸಿಗೆ ನ್ಯಾಯವಾದ ಬೆಲೆ ಸಿಗದಿರಲು ಪ್ರಮುಖ ಕಾರಣವಾಗಿದೆ. ಕರಿಮೆಣಸು ಕಳ್ಳತನದಿಂದ ನಮ್ಮ ದೇಶದೊಳಕ್ಕೆ ಬರುವುದನ್ನು ತಡೆಗಟ್ಟಬೇಕೆನ್ನುವುದು ಕರಿಮೆಣಸು ಬೆಳೆಗಾರರ ಬಹುಕಾಲದ ಒತ್ತಾಯವಾಗಿದೆ. ಹಿಂದೆ ನಮ್ಮ ಜಿಲ್ಲೆಯಲ್ಲಿ ಗೋಣಿಕೊಪ್ಪಲಿನಲ್ಲಿ ಎಪಿಎಮ್‌ಸಿ ಆವರಣದಲ್ಲೇ ಈ ಕಲಬೆರಕೆ ನಡೆಯುತ್ತಿದ್ದಾಗ ಅದನ್ನು ಹಿಡಿದು ಗಲಭೆಯಾದಾಗ, ಅಂದಿನ ಸಂಸದ ಪ್ರತಾಪ್ ಸಿಂಹ ಒಳಗೊಂಡು ಬಿಜೆಪಿಯ ನಮ್ಮ ಜಿಲ್ಲೆಯ ಮುಖಂಡರುಗಳು 'ತಾವು ದೆಹಲಿಗೆ ಹೋಗಿ ಸಂಬಂಧಿಸಿದವರನ್ನು ಭೇಟಿಯಾಗಿ ಈ ಕಳ್ಳಸಾಗಣಿಕೆಯನ್ನು ತಡೆಯಲು ವ್ಯವಸ್ಥೆ ಮಾಡುವುದಾಗಿ' ಭರವಸೆ ಕೊಟ್ಟಿದ್ದರು. ಆದರೆ ಅದೇನೂ ನಡೆಯಲಿಲ್ಲ.

ಈ ಕಳ್ಳ ಸಾಗಣಿಕೆಯ ಬಗ್ಗೆ ಕಾಂಪ್ಕೋದ ಅಧ್ಯಕ್ಷ ಎ.ಕಿಶೋರ್ ಕುಮಾರ್ ಕೊಡ್ಗಿಯವರು 2022ರಲ್ಲಿ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರ ಬರೆದಿದ್ದರು. ಅದರಲ್ಲಿ ಕಳ್ಳ ಸಾಗಣಿಕೆಯ ಬಗ್ಗೆ ಎಲ್ಲಾ ವಿವರಗಳನ್ನು ಬರೆದಿದ್ದರು. ಧರ್ಮಸ್ಥಳದ ಧರ್ಮಾಧಿಕಾರಿ ಹೆಗ್ಗಡೆಯವರೂ ಅಡಿಕೆಯ ಅಕ್ರಮ ಸಾಗಾಣಿಕೆಯನ್ನು ತಡೆಯಬೇಕೆಂದು



ಪ್ರಧಾನಿಯವರಿಗೆ ಪತ್ರ ಬರೆದಿದ್ದರು. ಕೊಡ್ಗಿಯವರು ಮತ್ತೆ ಬರೆದಿದ್ದಾರೆ. ಆದರೆ ಕಳ್ಳ ಸಾಗಣಿಕೆ ಯಾವುದೇ ಅಡ್ಡಿ ಇಲ್ಲದೆ ನಡೆಯುತ್ತಿದೆ. ಈ ಸಾಗಣಿಕೆಯ ವ್ಯವಹಾರದಲ್ಲಿ ಆಡಳಿತಾರೂಢ ಪಕ್ಷದ ಪ್ರಭಾವಿಗಳಿದ್ದಾರೆಂದು ಹೇಳಲಾಗುತ್ತಿದೆ.

ಆದ್ದರಿಂದ ಕರಿಮೆಣಸು ಮತ್ತು ಅಡಿಕೆಯನ್ನು ನಮ್ಮ ದೇಶದೊಳಗೆ ಅಕ್ರಮವಾಗಿ ತರುತ್ತಿರುವುದನ್ನು ಪೂರ್ಣವಾಗಿ ತಡೆಯಲು ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಿ, ಕರಿಮೆಣಸು ಕಳ್ಳತನದಿಂದ ನಮ್ಮ ದೇಶದೊಳಗೆ ಬರುವುದನ್ನು ತಡೆಯುವಂತೆ ಮಾಡಬೇಕೆಂದು ಕಾಫಿ ಫಾರ್ಮರ್ಸ್ ಫೆಡರೇಶನ್ ಆಫ್ ಇಂಡಿಯಾಕ್ಕೆ ನೊಂದಾಯಿತ ಕರ್ನಾಟಕ ಕಾಫ್ ರೈತರ ಸಂಘದ ಕೊಡಗು ಘಟಕವು ಸಂಸದ ಯದುವೀರರನ್ನು ಒತ್ತಾಯಿಸುತ್ತದೆ ಎಂದು ಕೆ.ಹೆಚ್.ಹನೀಫ ಚಾಮಿಯಾಲ, ಮೈತಾಡಿ ಕೊಡಗು ಅವರು ಹೇಳಿದ್ದಾರೆ.

ಬೃಹತ್ ಭೂ ಲೂಟಿ–ಲಕ್ಷಾಂತರ ರೈತರ ಬದುಕನ್ನು ಸುಟ್ಟು.... ಪುಟ 2 ರಿಂದ

ಅಪಾರ ಆಸ್ತಿಯನ್ನು ವಶಪಡಿಸಿಕೊಂಡು ಬಿಟ್ಟ. ಚರ್ಚ್‌ನ ಅಪಾರ ಭೂಮಿಯನ್ನು ರಾಜ ವಂಶೀಯರಿಗೆ, ತನ್ನ ಬಗಲ ಬಚ್ಚಾಗಳಿಗೆ ಮಾರಿದ. ಆರಕ್ಕೆ ಮೂರಾಗಿ ಮಾರಿದ. ತಮ್ಮ ಕೈಯಲ್ಲಿ ವ್ಯಾಪಾರ, ಉತ್ಪಾದನೆಗಳಿಂದ ಉಳಿಸಿದ ಹಣವಿದ್ದವರಲ್ಲಿ ಹಲವರು ಭೂಮಿಯ ಮೇಲೆ ಹಣ ಹೂಡಿದರು. ಕೊಂಡರು.

ಭೂ ಮಾರುಕಟ್ಟೆ, ಭೂ ಜೂಜು ಮಾರುಕಟ್ಟೆ

ಲಾರ್ಡ್‌ಗಳು, ರಾಜನ ಸ್ವಂತ ಹಿಡಿತದ ಆಸ್ತಿ, ಚರ್ಚ್‌ಗಳ ಆಸ್ತಿ ಹೀಗೆ ದೊಡ್ಡ ಪ್ರಮಾಣದಲ್ಲಿ ಮಾರುಕಟ್ಟೆಗೆ ಬಂದಿತು. ಇಲ್ಲಿಯವರೆಗೆ ಭೂಮಿಯ ಮಾರಾಟ ಎಂಬುದನ್ನೇ ಕೇಳದ ಬ್ರಿಟನ್‌ನಲ್ಲಿ, ರಾಜನಿಂದ ಜಾಗೀರಾಗಿ ಬಂದ ಜಮೀನು, ಅದನ್ನು ಗೇಣಿದಾರರಿಗೆ ಹಂಚುವುದು ಈ ರೀತಿ ನಡೆದು ಬಂದ ಭೂ ಸಂಬಂಧಗಳಲ್ಲಿ ಭೂ ಮಾರುಕಟ್ಟೆ ಎಂಬುದು ಅಸ್ತಿತ್ವಕ್ಕೆ ಬಂದಿತು. ಭೂಮಿ ಜೂಜಾಟದ ವಸ್ತುವಾಯಿತು. ಸ್ವಲ್ಪ ಸಮಯದಲ್ಲಿಯೇ ಹಲವರ ಕೈ ಬದಲಾಯಿಸಿತು. ಒಂದೊಂದು ಬದಲಾವಣೆಗೂ ಭೂಮಿಯ ಬೆಲೆ ಏರುತ್ತಾ ಹೋಯಿತು.

ಇವರು ಭೂಮಿಯನ್ನು ವಂಶಾನುಗತವಾಗಿಯೋ, ರಾಜನಿಂದಲೋ ಜಾಗೀರಾಗಿ ಪಡೆದವರಲ್ಲ. ಆ ಪದ್ಧತಿಯಲ್ಲಿ ಜಾಗೀರು ಪಡೆವರಿಗೆ ಅವರದೇ ಹಕ್ಕು ರಾಜಾಸ್ಥಾನದ ಸ್ಥಾನಮಾನ ಇದ್ದಂತೆಯೇ, ಅದರಲ್ಲಿ ಪರಂಪರಾಗತ ಗೇಣಿದಾರರಾಗಿದ್ದವರಿಗೂ ಆ ಭೂಮಿಯಲ್ಲಿ ಅವರದೇ ಹಕ್ಕು ಬಾಧ್ಯತೆಗಳಿದ್ದವು. ಊರೊಟ್ಟಿನ ಭೂಮಿಯಲ್ಲಿ ಹಳ್ಳಿಗಳಲ್ಲಿದ್ದ ಭೂಹೀನ ಕೂಲಿಕಾರರೂ ಬಡ ಗೇಣಿದಾರರೂ ಸೇರಿ ತಮ್ಮ ದನ, ಕುರಿಗಳನ್ನು ಮೇಯಿಸಿ ಕೊಳ್ಳಬಹುದಿತ್ತು. ಅಷ್ಟೇ ಅಲ್ಲದೇ ಆಗ ಯಾರೂ ಕೂಡಾ ತಮ್ಮ ಹೊಲಗಳಿಗೆ ಬೇಲಿ ಹಾಕುತ್ತಿರಲಿಲ್ಲ. ಆದ್ದರಿಂದ ಬೆಳೆ ತೆಗೆದ ಮೇಲೆ ಯಾರ ಹೊಲದಲ್ಲಾದರೂ ಮೇಯಬಹುದಿತ್ತು.

ಆದರೆ ಈಗ ಈ ಪಾಳೆಯಗಾರಿ ನೋಬಲ್‌ಗಳಿಂದ ಭೂಮಿಯನ್ನು ಕೊಂಡವರು ಈ ಯಾವ ಪರಂಪರಾಗತ ಬಾಧ್ಯತೆಗಳ ಕಟ್ಟುಪಾಡುಗಳನ್ನೂ ಮಾನ್ಯ ಮಾಡಲಿಲ್ಲ. ಅಂತಹ ಯಾವ ಶರತ್ತೂ ಅವರ ಕೊಳ್ಳುವಿಕೆಯ ಭಾಗವಾಗಿರಲಿಲ್ಲ. ಅವರು ತಮ್ಮ ಭೂಮಿಯಲ್ಲಿ ತಮ್ಮ ಲಾಭಕ್ಕಾಗಿ ಏನು ಬೇಕಾದರೂ ಮಾಡಬಹುದಾದ ಸ್ವಾತಂತ್ರ್ಯ ನೀಡಿತು.

ಹೀಗೆ ಪಾಳೆಯಗಾರಿ ಆಸ್ತಿಯ ಪರಂಪರಾಗತ ರೂಪದಲ್ಲಿದ್ದ ಭೂಮಿ ಬಂಡವಾಳಶಾಹಿ ಸ್ವರೂಪದ, ವೈಯಕ್ತಿಕ ಲಾಭದ ಸಾಧನವಾದ ಆಸ್ತಿಯಾಗಿ ಪರಿವರ್ತಿತವಾಯಿತು. ಇದು ಇತಿಹಾಸದಲ್ಲಿ ಒಂದು ದೊಡ್ಡ ಕ್ರಾಂತಿಕಾರಿ ಬೆಳವಣಿಗೆ.

ಭೂಮಿ ಕೊಂಡ ಹೊಸ ಮಾಲೀಕರು ಅಲ್ಲಿದ್ದ ಸ್ವತಂತ್ರ ರೈತರು, ಗೇಣೀದಾರರುಗಳನ್ನೆಲ್ಲ ಮೇಲೆ ವಿವರಿಸಿದಂತೆ ಒಕ್ಕಲೆಬ್ಬಿಸಿದರು. ಊರು ಬಿಟ್ಟು ಓಡಿಸಿದರು. ಇಡೀ ಹಳ್ಳಿಗಳಿಗೇ ಬೆಂಕಿ ಇಟ್ಟರು. ಹೀಗೆ ಸಾವಿರಾರು ಹಳ್ಳಿಗಳು ನಿರ್ಜನವಾದವು. ಮತ್ತೆ ಕೆಲವರು ಸ್ವತಃ ಉತ್ಪಾದನೆಯಲ್ಲಿ ತೊಡಗದವರು ಗೇಣಿಯನ್ನು ಮನಬಂಧಂತೆ ಹೆಚ್ಚಿಸಿದರು. ಇದ್ದಕ್ಕಿದ್ದಂತೆ ಐದು ಪಟ್ಟು, ಹತ್ತು ಪಟ್ಟು. ಒಬ್ಬರಿಂದ ಮತ್ತೊಬ್ಬರಿಗೆ ಕೈ ಬದಲಾಯಿಸಿದಂತೆಲ್ಲ ಗೇಣಿಗಳು ಹಲವು ಪಟ್ಟು ಏರುತ್ತಾ ಹೋದವು. ಏರಿದ ಗೇಣಿಯನ್ನು ತೆರಲಾರದೆ ಭೂಮಿಯನ್ನು ತ್ಯಜಿಸಬೇಕಾದವರು ಹಲವರು.

ರೈತರಿಗೆ ರಾಜರಿಂದಲೂ ನ್ಯಾಯ ಸಿಗಲಿಲ್ಲ. ಪಾರ್ಲಿಮೆಂಟ್‌ನಿಂದಲೂ ಕೂಡಾ

ಬ್ರಿಟನ್‌ನ ಇತಿಹಾಸದ ಈ ಕ್ರೂರ ಅಧ್ಯಾಯವನ್ನು ಎನ್‌ಕ್ಲೋಷರ್ ಅಲೆ ಎಂದು ಕರೆಯಲಾಗಿದೆ. ಇದರ ಕ್ರೂರ ಮುಖವನ್ನು ಮರೆಮಾಡಲು ಇದು ಕೃಷಿ ಕ್ರಾಂತಿಯಲ್ಲಿ ಅನಿವಾರ್ಯ ಎಂದು, ರೈತರೇ ಕೃಷಿ ವೆಚ್ಚ ಭರಿಸಲಾಗದೆ ಭೂಮಿ ಬಿಟ್ಟರು ಎಂದೂ ಬಣ್ಣ ಕಟ್ಟಲು ಪ್ರಯತ್ನಿಸಲಾಗಿದೆ.

ಇವರು ಅಂದಿನ ರಾಜ ಪ್ರಭುತ್ವದ ಕೋರ್ಟ್‌ಗಳಿಗೆ ಸಲ್ಲಿಸಿದ ಮನವಿಗಳು, ರಾಜನಿಗೇ ಸಲ್ಲಿಸಿದ ಮನವಿಗಳನ್ನು ಕೇಳುವವರಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಲವೆಡೆ ದಂಗೆಗಳು ಎದ್ದವು. ರಾಜನ ಸೈನ್ಯ ನಿರ್ದಯವಾಗಿ ಅವುಗಳನ್ನು ಹತ್ತಿಕ್ಕಿತು.

ಎನ್‌ಕ್ಲೋಷರ್ ವಿರುದ್ಧ ಆಯೋಗಗಳನ್ನು ಸ್ಥಾಪಿಸಲಾಯಿತು. ಅದನ್ನು ತಪ್ಪಿಸಲು ಒಂದಲ್ಲ ಹಲವು ಬಾರಿ ಕಾಯಿದೆ ಮಾಡಲಾಯಿತು. ಆದರೆ ಈ ಕಾಯಿದೆಗಳು ಒಂದಿಷ್ಟು ಜುಲ್ಮಾನೆ ತುಂಬಿ ಭೂ ಲೂಟಿ ಮಾಡಿದವರು ಕಾಯಿದೆ ಬದ್ಧಗೊಳಿಸಿಕೊಳ್ಳಲಷ್ಟೇ ಸಹಾಯವಾಯಿತು.

ಇಂತಹ ದುರ್ಭರ ಪರಿಸ್ಥಿತಿಯಲ್ಲಿ ರೈತಾಪಿ ಜನರು ಹೊಸ ಹೊಸ ಧಾರ್ಮಿಕ ಪಂಥಗಳ ಮೊರೆ ಹೋದರು. ಇಂತಹ ಒಂದು ಪಂಥ ಪ್ಯೂರಿಟನ್ ಅಥವಾ ಶುದ್ಧ ಕ್ರೈಸ್ತ ಪಂಥ.

ಹಿಂದಿನ ಲೇಖನಗಳಲ್ಲಿ ವಿವರಿಸಿದಂತೆ ರಾಜನಿಗೂ ಪಾರ್ಲಿಮೆಂಟ್‌ಗೂ ಸೈನಿಕ ಸಂಘರ್ಷ ಏರ್ಪಟ್ಟಾಗ ಈ ಪ್ಯುರಿಟನ್ ರೈತರೇ ರಾಜ ಪ್ರಭುತ್ವದ ವಿರುದ್ಧ ದಂಗೆಯಲ್ಲಿ ಪಾರ್ಲಿಮೆಂಟ್ ಪರ ಸೈನ್ಯದಲ್ಲಿ, ಕುಶಲಕರ್ಮಿಗಳ ಜೊತೆ ಅಪಾರ ತ್ಯಾಗ ಬಲಿದಾನ ಮಾಡಿ ಸೆಣೆಸಿದವರು. ವಿಜಯಕ್ಕೆ ಕಾರಣರಾದವರು. ಆದರೆ ಈ ರೈತರಿಗೆ ಮುಂದಿನ ಪ್ರಭುತ್ವಗಳ ಕಾಲದಲ್ಲಿ ಯಾವ ನ್ಯಾಯವೂ ದೊರಕಲಿಲ್ಲ. ಅದರ ಬದಲಾಗಿ ಮುಂದೆ ಪಾರ್ಲಿಮೆಂಟಿನ ಅಧೀನದಲ್ಲಿ ರಾಜ ಪ್ರಭುತ್ವ ಏರ್ಪಟ್ಟಾಗ ಬಹು ದೊಡ್ಡ ಪ್ರಮಾಣದಲ್ಲಿ, ಬಹು ವೇಗವಾಗಿ ಸರ್ಕಾರದ ಭೂಮಿ, ಊರೊಟ್ಟಿನ ಭೂಮಿ ಅಂದಿನ ಶ್ರೀಮಂತರ ಕೈ ಸೇರಿತು.

16ನೇ ಶತಮಾನದಿಂದ ಆರಂಭವಾಗಿ 19ನೆಯ ಶತಮಾನದವರೆಗೆ ಜರುಗಿದ ಈ ಕ್ರೌರ್ಯದ ಪ್ರಮಾಣವನ್ನು ಅಂದಿನ ಕೃಷಿ ಅವಲಂಬಿತ ಜನಸಂಖ್ಯೆಯ ಕುಸಿತವನ್ನು ನೋಡಿದರೆ ತಂತಾನೆ ವೇದ್ಯವಾಗುತ್ತದೆ.

1750 – ಶೇ. 75ರಷ್ಟು
1801 – ಶೇ. 35
1851 – ಶೇ. 22
1901 – ಶೇ. 8

20ನೆಯ ಶತಮಾನದ ಅಂತ್ಯದ ವೇಳೆಗೆ ಈ ಪ್ರಮಾಣ ಕೇವಲ ಶೇ.2–3 ಆಯಿತು. ಈಗ 21ನೆಯ ಶತಮಾನದಲ್ಲಿ ಬ್ರಿಟನ್‌ನ ಕೃಷಿಯಲ್ಲಿ ತೊಡಗಿರುವವರ ಪ್ರಮಾಣ ಕೇವಲ ಶೇ.1.5. ಒಟ್ಟು ಸಂಖ್ಯೆ ಕೇವಲ ನಾಲ್ಕು ಲಕ್ಷಕ್ಕಿಂತ ಸ್ವಲ್ಪ ಹೆಚ್ಚಷ್ಟೇ. ಇಷ್ಟೇ ಜನ ಬ್ರಿಟನ್‌ನ 18.1 ಮಿಲಿಯ ಹೆಕ್ಟೇರ್ (ನಾಲ್ಕು ಕೋಟಿ ಎಕರೆಯಷ್ಟು) ಭೂಮಿಯನ್ನು ಕೃಷಿ ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ 12.8 ಮಿಲಿಯ ಹೆಕ್ಟೇರ್ ಕೃಷಿ ಭೂಮಿ ಇದೆ. ಒಂದು ಕೋಟಿ ಮುವತ್ತೇಳು ಲಕ್ಷ ಜನ ಕೃಷಿಯಲ್ಲಿ ತೊಡಗಿದ್ದಾರೆ. ಈ ಅಂಕಿಗಳ ಜೊತೆ ಹೋಲಿಕೆಯಲ್ಲಿ ಕರ್ನಾಟಕಕ್ಕಿಂತ ಒಂದೂವರೆಯಷ್ಟು ಹೆಚ್ಚು ಕೃಷಿ ಭೂಮಿ ಇರುವ ಬ್ರಿಟನ್‌ನಲ್ಲಿ ಕರ್ನಾಟಕದ ಮೂವತ್ತೈದನೇ ಒಂದರಷ್ಟು ಮಾತ್ರ. ಅಂದರೆ ಬ್ರಿಟನ್‌ನಲ್ಲಿ ಕ್ರೂರ ರೀತಿಯಲ್ಲಿ ರೈತರನ್ನು ಕೃಷಿಯಿಂದ ಹೊರದೂಡುವ ಕೃತ್ಯ ಬಹಳಷ್ಟು 19ನೆಯ ಶತಮಾನದಲ್ಲಿಯೇ ಮುಗಿದು ಹೋಗಿದೆ ಎಂಬುದನ್ನು ಗಮನಿಸಬೇಕು.

ಹೀಗೆ ಹಲವು ಮಿಲಿಯಾಂತರ ಸಂಖ್ಯೆಯಲ್ಲಿ ಪರಂಪರಾಗತ ಗೇಣಿದಾರರು, ಜೀತಗಾರರು ಮತ್ತಿತರರನ್ನು ಊರು ಬಿಟ್ಟು ಓಡಿಸಲಾಯಿತು. ಅವರುಗಳು ಊರೂರು ಅಲೆಯುತ್ತಾ ವ್ಯಾಗಬಾಂಡ್‌ಗಳಾಗಿ, ಭಿಕ್ಷುಕರಾಗಿ, ಕೆಲವರು ಕಳ್ಳರಾಗಿ ನಗರ, ಪಟ್ಟಣಗಳನ್ನು ಸೇರಿದರು. ನಗರಗಳ ಜನಸಂಖ್ಯೆ ಅದೇ ಪ್ರಮಾಣದಲ್ಲಿ ಏರಿತು.

ಈ ಪ್ರಕ್ರಿಯೆ ಅಂದು ಹೆಚ್ಚು ಹೆಚ್ಚು ಸ್ಥಾಪಿಸಲಾಗುತ್ತಿದ್ದ ಕೈಗಾರಿಕೆಗಳಿಗೆ ಅಗ್ಗದ ಕೂಲಿಗೆ ದುಡಿಯುವ ಕಾರ್ಮಿಕರನ್ನು ಒದಗಿಸಿತು. ಅವರ ಮಿಗುತಾಯ ಮೌಲ್ಯದ ಗಳಿಕೆಯನ್ನು ಹಲವು ಪಟ್ಟು ಹೆಚ್ಚಿಸಿತು. ಇಂತಹ ದೊಡ್ಡ ಪ್ರಮಾಣದಲ್ಲಿ ಅಗ್ಗದ ಶ್ರಮ ಲಭ್ಯವಾಗದೆ ಕೈಗಾರಿಕೆಗಳು ಸ್ಥಾಪನೆಯಾಗಲು ಸಾಧ್ಯವಿತ್ತೇ? ಕೈಗಾರಿಕಾ ಕ್ರಾಂತಿ ಸಾಧ್ಯವೇ? ಇಡೀ ಜಗತ್ತಿಗೆ, ತನ್ನ ನೇರ ಹಿಡಿತದ ವಸಾಹತುಗಳಿಗೆ ದೊಡ್ಡ ಪ್ರಮಾಣದಲ್ಲಿ ಸರಕುಗಳನ್ನು ಸರಬರಾಜು ಮಾಡಿ ಬೃಹತ್ ಪ್ರಮಾಣದ ಬಂಡವಾಳ ಶೇಖರಣೆ ಸಾಧ್ಯವೇ!

ಇಂತಹ ಪ್ರಕ್ರಿಯೆ ಯುರೋಪಿನಲ್ಲಿ, ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಕೊಲೆಗಡುಕ ಕ್ರೌರ್ಯದಿಂದ ಜರುಗಿದೆ.

ಭಾರತದಲ್ಲಿ

ಈ ಪ್ರಕ್ರಿಯೆ ಭಾರತದಲ್ಲೂ ಸ್ವಾತಂತ್ರ್ಯ ಮೊದಲು ವೇಗವಾಗಿ ನಡೆಯಿತು. ರೈತರು ಭೂಮಿ ಕಳೆದುಕೊಂಡು ಕೂಲಿಕಾರರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಿತು. ಅಂದಿನ ಮುಂಬಯಿ, ಕಲಕತ್ತಾ, ಮದ್ರಾಸಿನ ಕೈಗಾರಿಕೆಗಳಿಗೆ ಕಾರ್ಮಿಕರನ್ನು ಒದಗಿಸಿತು. ದೇಶದ, ವೆಸ್ಟ್ ಇಂಡೀಸ್, ಮಾರಿಷಸ್‌ನ ಪ್ಲಾಂಟೇಷನ್‌ಗಳಿಗೆ ಕೂಲಿಕಾರರನ್ನು ಸರಬರಾಜು ಮಾಡಿತು.

ಆದರೆ ತೆಲಂಗಾಣ, ಬಂಗಾಲ ಮೊದಲಾದ ರಾಜ್ಯಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಆರಂಭವಾಗಿ, ಸ್ವಾತಂತ್ರ್ಯಾನಂತರವೂ ಮುಂದುವರೆದ ಗೇಣಿದಾರ ರೈತರ ತೀವ್ರ ಸಂಘರ್ಷ ರೈತರನ್ನು ಒಕ್ಕಲೆಬ್ಬಿಸುವ ಸ್ವತಂತ್ರ ಭಾರತದ ಬಂಡವಾಳಶಾಹಿ ನೆಹರೂ, ಇಂದಿರಾ ಸರ್ಕಾರಗಳ ತಹ ತಹಕ್ಕೆ ಗಣನೀಯವಾಗಿ ತಡೆ ಹಾಕಿತು.

ಈಗ ಜಾಗತೀಕರಣ, ಖಾಸಗೀಕರಣದ ಹೆಸರಿನಲ್ಲಿ ಮನಮೋಹನ್ ಸಿಂಗ್ ಮತ್ತು ಮೋದಿ ಸರ್ಕಾರದ ಮೂರು ರೈತ ನಾಶಕ ಮಸೂದೆಗಳ ಗುರಿಯೂ ರೈತರ ಭೂಮಿ ಕಿತ್ತುಕೊಂಡು ಬಂಡವಾಳಶಾಹಿ ಕಾರ್ಪೊರೇಟ್ ಕೃಷಿಗೆ ಒಳಪಡಿಸುವುದು, ರೈತರನ್ನು ಅಗ್ಗದ ಕೂಲಿಕಾರರನ್ನಾಗಿ ಬಂಡವಾಳಗಾರರಿಗೆ ಒದಗಿಸುವುದು.

ಹೀಗೆ ಸಾಗಿದೆ ಸಂಘರ್ಷ, ವರ್ಗ ಸಂಘರ್ಷ. ಶತ ಶತಮಾನಗಳಿಂದ.

ಗ್ರೇಟರ್ ಬೆಂಗಳೂರು:

ಅಧಿಕಾರ ವಿಕೇಂದ್ರೀಕರಣಕ್ಕೆ ತಿಲಾಂಜಲಿ ಬಿಳಿಯಾನೆಗಳ ವಶಕ್ಕೆ ನಗರಾಡಳಿತ



ಲಿಂಗರಾಜು ಮಳವಳ್ಳಿ

ಬೆಂಗಳೂರು ವಿಶ್ವದ ಪ್ರಮುಖ ಹೂಡಿಕೆ ನಗರವಾಗಿ ಜಾಗತಿಕವಾಗಿ ಗುರುತಿಸಲ್ಪಟ್ಟಿದೆ. ಇಲ್ಲಿನ ಹವಾಗುಣ, ಸರ್ಕಾರಗಳ ಬಂಡವಾಳದ ಪರವಾದ ಧೋರಣೆ, ಚೀಪ್ ಲೇಬರ್ ಇತ್ಯಾದಿ ಕಾರಣಗಳಿಗಾಗಿ ಹೂಡಿಕೆದಾರರು ಸೂಪರ್ ಲಾಭದ ಆಸೆಗಣ್ಣಿನಿಂದ ಬೆಂಗಳೂರಿನತ್ತ ಮುಖ ಮಾಡಿದ್ದಾರೆ. ಸರ್ಕಾರಗಳೂ ಮೂಲ ಸೌಕರ್ಯದ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಸುರಿಯುತ್ತಿವೆ. ಮಹಾನಗರ ಪಾಲಿಕೆಯನ್ನು 110 ಹಳ್ಳಿಗಳ ಸೇರ್ಪಡೆಯೊಂದಿಗೆ ಬೃಹತ್ ಮಹಾನಗರ ಪಾಲಿಕೆ ಮಾಡಿದರೂ ಇಲ್ಲಿನ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ನೀರು, ರಸ್ತೆ, ಒಳಚರಂಡಿ, ಘನತ್ಯಾಜ್ಯದಂತಹ ಸಮಸ್ಯೆಗಳು ಬೆಟ್ಟದಷ್ಟಿವೆ. ಸರ್ಕಾರಗಳು ಇಂತಹ ಸಮಸ್ಯೆಗಳಿಗೆ ಕಾಯ್ದೆಯಲ್ಲಿನ ದೋಷ ಹುಡುಕುತ್ತಿವೆ! ಕಾರ್ಯಗತ ಆಗುವಲ್ಲಿನ ಸಮಸ್ಯೆಗಳು ಮುಖ್ಯವಾಗುತ್ತಿಲ್ಲ. ಈಗ ಮತ್ತೆ ಬೆಂಗಳೂರು ನಗರ ವ್ಯಾಪ್ತಿಯನ್ನು ಮತ್ತಷ್ಟೂ ಹಿಗ್ಗಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮಾಡಿ ನಗರದ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಕೈಹಾಕಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇನ್ನು ಮುಂದೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಗಲಿದೆ (ಜಿಬಿಎ). 1976ರ ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮಕ್ಕೆ 2020ರಲ್ಲಿ ತಿದ್ದುಪಡಿ ತಂದು ವಾರ್ಡುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿತ್ತು. ಇದೀಗ ಬೆಂಗಳೂರು ನಗರಕ್ಕೆ ಪ್ರತ್ಯೇಕವಾಗಿ ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ-2024 ಕಾಯ್ದೆಯನ್ನು ತರಲಾಗಿದೆ. ವಿಧಾನ ಮಂಡಲದಿಂದ ಅಂಗೀಕಾರಗೊಂಡು ಅಂತಿಮವಾಗಿ ರಾಜ್ಯಪಾಲರ ಅಂಕಿತಕ್ಕೆ ಹೋಗಿದೆ. ರಾಜ್ಯಪಾಲರು ಔಪಚಾರಿಕವಾಗಿ ಕೆಲವು ಸ್ಪಷ್ಟನೆಯನ್ನು ಕೇಳಿ ವಿಧೇಯಕವನ್ನು ಹಿಂತಿರುಗಿಸಿದ್ದಾರೆ. ಚಂಡಿ ಕಥೆಯಂತೆ ಇದು ನಿರೀಕ್ಷಿತವೂ ಹೌದು. ಪ್ರಜಾಪ್ರಭುತ್ವವನ್ನು ಅಣಕಮಾಡುವ ರಾಜ್ಯಪಾಲರ ಈ ನಡೆ ಪ್ರಶ್ನಾರ್ಹ. ಬಿಜೆಪಿಯೇತರ ಎಲ್ಲ ರಾಜ್ಯ ಸರ್ಕಾರಗಳು ಈ ಸ್ಥಿತಿ ಎದುರಿಸುತ್ತಿವೆ ಕೂಡ. ಇದು ಮತ್ತೊಂದು ಮಗ್ಗುಲಿನ ಚರ್ಚೆ. ಈ ಬರಹದ ಉದ್ದೇಶ ರಾಜ್ಯಪಾಲರ ನಡೆಯನ್ನು ಕುರಿತದ್ದಲ್ಲ! ಬದಲಾಗಿ ಈ ವಿಧೇಯಕ ಬೆಂಗಳೂರಿನ ಸಮಸ್ತ ನಾಗರಿಕರ ಹಿತ ಕಾಯುತ್ತದೆಯೇ ಎಂಬುದರ ಕುರಿತು.

ಈ ವಿಧೇಯಕದ ಉದ್ದೇಶದ ಕುರಿತು ಹೀಗೆ ಹೇಳಲಾಗಿದೆ. "ಗ್ರೇಟರ್ ಬೆಂಗಳೂರು ಪ್ರದೇಶದ ಅಭಿವೃದ್ಧಿಯ ಸಮನ್ವಯ ಮತ್ತು ಮೇಲ್ವಿಚಾರಣೆಗಾಗಿ, ಸಹಭಾಗಿತ್ವ, ಸ್ಪಂದನಶೀಲ ಆಡಳಿತಕ್ಕಾಗಿ, ವಾರ್ಡ್ ಸಮಿತಿ, ನಗರಾಡಳಿತದ ಮೂಲ ಘಟಕವಾಗಿಸಲು ಹಾಗೂ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಸುಗಮ ಮತ್ತು ಸಶಕ್ತಗೊಳಿಸಲು, ಎಲ್ಲಾ ಸೇವಾ ವಿತರಣಾ ಸಾರ್ವಜನಿಕ ಪ್ರಾಧಿಕಾರಿಗಳ ಉತ್ತರದಾಯಿತ್ವವನ್ನು ಸಂಯೋಜಿಸಲು ಮತ್ತು ಸುವ್ಯವಸ್ಥಿತಗೊಳಿಸಲು, ವಿಕೇಂದ್ರೀಕೃತ, ಸಹಭಾಗಿ, ದಕ್ಷ, ನ್ಯಾಯಸಮ್ಮತ ಆಡಳಿತ ಕಾರ್ಯಚೌಕಟ್ಟನ್ನು ಸ್ಥಾಪಿಸುವ ಮೂಲಕ, ಎಲ್ಲಾ ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ" ಈ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯ್ದೆ ತರಲಾಗಿದೆ ಎಂದು ಹೇಳಲಾಗಿದೆ.

ಸರಳವಾಗಿ ಹೇಳುವುದಾದರೆ, ಬಿಬಿಎಂಪಿ ಮತ್ತು ಬೆಂಗಳೂರು ನಗರದ ವಿವಿಧ ಸಾರ್ವಜನಿಕ ವಿತರಣಾ ಸಂಸ್ಥೆಗಳಾದ ಬಿಡಿಎ, ಬೆಸ್ಕಾಂ, ಜಲಮಂಡಳಿ, ಬಿಎಂಟಿಸಿ, ನಮ್ಮ ಮೆಟ್ರೋ, ಪೊಲೀಸ್, ಇತ್ಯಾದಿ ಸಂಸ್ಥೆಗಳ ನಡುವೆ ಸಮನ್ವಯತೆಯ ಕೊರತೆ, 198 ವಾರ್ಡುಗಳ, 1.40 ಕೋಟಿ ಜನಸಂಖ್ಯೆಯ ಈ ಬೃಹತ್ ಬೆಂಗಳೂರು ನಗರವನ್ನು ಕೇವಲ ಒಂದು ಕಾರ್ಪೊರೇಷನ್‌ನಿಂದ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಹೊಸ ವಿಧೇಯಕ ತರಲಾಗಿದೆ ಎಂಬುದು ರಾಜ್ಯ ಸರ್ಕಾರದ ವಾದ.

ವಿರೋಧ ಪಕ್ಷ ಬಿಜೆಪಿ ಈ ವಿಧೇಯಕವನ್ನು ವಿರೋಧಿಸಿದೆ. ವಿರೋಧಾಭಾಸ ಎಂದರೆ, ಈ ವಿಧೇಯಕ ಸಾಧಕಬಾಧಕಗಳ ಕುರಿತು ವರದಿ ನೀಡಲು ರಚಿಸಲಾಗಿದ್ದ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದ ಜಂಟಿ ಸದನ ಸಮಿತಿಯಲ್ಲಿ ಬಿಜೆಪಿ ಶಾಸಕರು ವಿಧೇಯಕಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ಜತೆಗೆ ಜಂಟಿ ಸದನ ಸಮಿತಿಯು ಜನಾಭಿಪ್ರಾಯ ಪಡೆವ ಕಾರಣಕ್ಕಾಗಿ ಆಯೋಜಿಸಿದ್ದ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದ್ದ ಭಾಜಪ ಶಾಸಕರು ಈ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಲಿಲ್ಲ! ರಾಜಕೀಯವಾಗಿ ವಿರೋಧಿಸುತ್ತಾ ಅಂತರಂಗದಲ್ಲಿ ವಿಧೇಯಕದ ಬೆನ್ನಿಗೆ ನಿಂತಿರುವುದು ಕಾಣುತ್ತದೆ. ಇದಕ್ಕೆ ವ್ಯಾವಹಾರಿಕ ಕಾರಣಗಳಿವೆ ಎಂಬುದು ಪಡಸಾಲೆಯ ಚರ್ಚೆಗಳಲ್ಲಿ ಕಂಡು ಬಂದಿದೆ.

ಕೆಲ ನಾಗರಿಕ ಸಂಸ್ಥೆಗಳು ಈ ವಿಧೇಯಕದಲ್ಲಿ ಕೆಲ ಅಂಶಗಳ ಕುರಿತು ಆಕ್ಷೇಪ ವ್ಯಕ್ತಪಡಿಸಿವೆ, ಹಾಗೆಯೇ ಕೆಲವರು ವಿಧೇಯಕ ಪರವಾಗಿಯೂ ಮಾತನಾಡಿದ್ದಾರೆ. ಪರ ಮತ್ತು ವಿರೋಧಕ್ಕಿರುವ ಕಾರಣಗಳನ್ನು ಪಟ್ಟಿ ಮಾಡುತ್ತಾ ಹೋದಲ್ಲಿ 1976ರ ಕೆಎಂಸಿ ಕಾಯ್ದೆ ಮತ್ತು 2020ರಲ್ಲಿ ತಂದ ತಿದ್ದುಪಡಿ ಕಾಯ್ದೆಗಳು ಬೆಂಗಳೂರನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ತೊಡಕಾಗಿದ್ದವೇ? ಎಂಬ ಪ್ರಶ್ನೆ ಏಳುವುದು ಸಹಜ!

ಹಾಗಿದ್ದರೆ, ಜಿಬಿಎ ವಿಧೇಯಕದಲ್ಲಿ ಏನಿದೆ?

ಈ ವಿಧೇಯಕವು ನಗರಾಡಳಿತವನ್ನು ಮೂರು ಹಂತದಲ್ಲಿ ನಿರ್ವಹಿಸುವುದನ್ನು ಹೇಳಿದೆ.

1. ಗ್ರೇಟರ್ ಬೆಂಗಳೂರು ಪ್ರಾಧಿಕಾರ
2. ನಗರ ಪಾಲಿಕೆಗಳು
3. ವಾರ್ಡ್ ಸಮಿತಿಗಳು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಕೆಳಗಿನ ಎರಡು ಸಮಿತಿಗಳು ಕಾರ್ಯನಿರ್ವಹಿಸುತ್ತವೆ. ವಿಧೇಯಕದಲ್ಲಿರುವಂತೆ ಜಿಬಿಎಗೆ ರಾಜ್ಯದ ಮುಖ್ಯಮಂತ್ರಿ ಅಧ್ಯಕ್ಷರಾಗಿರುತ್ತಾರೆ. ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿತ್ತಾರೆ. ಬೆಂಗಳೂರು ನಗರದ ಶಾಸಕರಾಗಿ ಸಚಿವರಾಗಿರುವವರು, ನಗರಾಭಿವೃದ್ಧಿ ಸಚಿವರು ಇದರ ಪದನಿಮಿತ್ತ ಸದಸ್ಯರಾಗಿರುತ್ತಾರೆ. ಉಳಿದಂತೆ ವಿವಿಧ ಸಾರ್ವಜನಿಕ ವಿತರಣಾ ಸಂಸ್ಥೆಗಳ ಕಾರ್ಯಾಂಗದ ಮುಖ್ಯಸ್ಥರುಗಳು ಸದಸ್ಯರಾಗಿರುತ್ತಾರೆ. ಜತೆಗೆ ಪಾಲಿಕೆಗಳ ಮೇಯರ್‌ಗಳು ಸದಸ್ಯರಾಗಲಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿ ವಾಸಿಸುವ ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರು, ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಇದರ ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಅಂದರೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಬಿಳಿಯಾನೆಗಳ ಬೀಡಾಗಲಿದೆ ಎಂದೇ ಅರ್ಥ! ಆರಂಭದಲ್ಲಿ ಆಡಳಿತ ವಿಕೇಂದ್ರೀಕರಣದ ಉದ್ದೇಶವನ್ನು ಪ್ರತಿಪಾದಿಸಿದ್ದ ವಿಧೇಯಕವು ನಗರಡಾಳಿತವನ್ನು ವಶಕ್ಕೆ ಪಡೆಯುವ ಕೇಂದ್ರೀಕರಣಕ್ಕೆ ರಹದಾರಿ ಕಲ್ಪಿಸಿರುವುದು ಕಾಣುತ್ತದೆ. ನಗರ ಯೋಜನೆಯ ಮಾಸ್ಟರ್ ಪ್ಲಾನ್ ರಚಿಸುವ, ಹಣಕಾಸು ನಿರ್ವಹಣೆ, ಸಾಲ ಪಡೆಯುವುದು ಸೇರಿದಂತೆ, ಯೋಜನೆ ಮತ್ತು ಆಯವ್ಯಯವನ್ನು ಜಿಬಿಎ ತನ್ನ ವಶದಲ್ಲೇ ಇಟ್ಟುಕೊಂಡಲ್ಲಿ, ಆಡಳಿತ ವಿಕೇಂದ್ರೀಕರಣ ಹೇಗೆ ಸಾಧ್ಯ? ಪ್ರಶ್ನೆಗೆ ಈ ಕಾಯ್ದೆಯಿಂದ ಉತ್ತರ ದೊರಕದು.

ಅಧ್ಯಾಯ 15ರಲ್ಲಿ ಹೇಳಿರುವಂತೆ ಪ್ರಧಾನ ರಸ್ತೆಗಳು, ಉಪ ಪ್ರಧಾನ ರಸ್ತೆಗಳು, ಸಂಚಾರ ಯೋಜನೆಗಳು, ವಾಹನ ಸುರಂಗ ಮಾರ್ಗಗಳು, ಮತ್ತು ರಾಜಕಾಲುವೆ ಇತ್ಯಾದಿ ಸೇರಿದಂತೆ ಎಲ್ಲಾ



ರಸ್ತೆಗಳು, ಚರಂಡಿಗಳು ಮತ್ತು ಇತರೆ ಮೂಲ ಸೌಕರ್ಯವು ನಗರ ಪಾಲಿಕೆಗಳಿಗೆ ಸೇರಿದ್ದಾಗ್ಯೂ, ನಗರ ಪಾಲಿಕೆಗಳು ತಮ್ಮ ಸಂಬಂಧಪಟ್ಟ ಕ್ರಿಯಾಯೋಜನೆಗಳಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರವು ತಯಾರಿಸಿದ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯನ್ನು ಸೇರಿಸಿಕೊಳ್ಳತಕ್ಕದ್ದು ಎಂದು ಹೇಳಿದೆ. ಅಂದರೆ ಜಿಬಿಎ ಸಿದ್ಧಪಡಿಸಿದ ಮೂಲಸೌಕರ್ಯ ಯೋಜನೆಯನ್ನು ಪಾಲಿಕೆಗಳು ಕಾರ್ಯಗತ ಮಾಡುವ ಕೆಲಸವನ್ನಷ್ಟೆ ಮಾಡಬೇಕು. ಪಾಲಿಕೆಗಳು ಇಲ್ಲಿ ಕೂಲಿ ಆಳಿನಂತೆ ದುಡಿಯಬೇಕಷ್ಟೆ! ನಗರಡಾಳಿತದ ಯೋಜನೆಯನ್ನು ಇಡಿಯಾಗಿ ಪ್ರಾಧಿಕಾರವೇ ಮಾಡುವುದಾದರೆ ಪಾಲಿಕೆಗಳ ಕೆಲಸವಾದರೂ ಏನು? ಪಾಲಿಕೆಗಳು ಕೇವಲ ಕಾರ್ಯಗತಗೊಳಿಸುವ ಬ್ಯೂರೋಕ್ರಷಿಯಂತಾದರೆ ಪಾಲಿಕೆಗಳ ಅಗತ್ಯವಾದರೂ ಏನಿದೆ? ಹೀಗಾಗಿ ವಿಧೇಯಕವು ನಗರಾಡಳಿತವನ್ನು ಸಂಪೂರ್ಣವಾಗಿ ಕೇಂದ್ರೀಕರಣಗೊಳಿಸುವುದನ್ನೇ ಹೇಳುತ್ತದೆ.

ಪ್ರಾಧಿಕಾರದಡಿಯಲ್ಲಿ ಕಾರ್ಯಕಾರಿ ಸಮಿತಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದಡಿಯಲ್ಲಿ ಕಲಂ 13ರಲ್ಲಿ ಹೇಳಿರುವಂತೆ ಕಾರ್ಯಕಾರಿ ಸಮಿತಿ ರಚನೆಯಾಗಲಿದೆ. ಇದಕ್ಕೆ ಬೆಂಗಳೂರು ಅಭಿವೃದ್ಧಿ ಸಚಿವರು ಅಧ್ಯಕ್ಷರಾಗಿರಲಿದ್ದಾರೆ. ಅಥವಾ ಮುಖ್ಯಮಂತ್ರಿಯವರು ನಾಮನಿರ್ದೇಶನ ಮಾಡುವ ಯಾರೇ ಮಂತ್ರಿಯು ಅಧ್ಯಕ್ಷರಾಗಿರತಕ್ಕದ್ದು ಎಂದು ಹೇಳುತ್ತದೆ. ಅಂದರೆ ಬೆಂಗಳೂರು ಅಭಿವೃದ್ಧಿ ಸಚಿವರು ಅಥವಾ ಮುಖ್ಯಮಂತ್ರಿ ನಾಮನಿರ್ದೇಶನ ಮಾಡುವ ಮಂತ್ರಿಯು ಬೆಂಗಳೂರು ನಗರದ ಸಂಪೂರ್ಣ ಅಧಿಕಾರವನ್ನು ನಿಯಂತ್ರಿಸಲಿದ್ದಾರೆ. ಜತೆಗೆ ಬೆಂಗಳೂರು ನಗರಕ್ಕೆ ಹೂಡಿಕೆಗಳನ್ನು ಆಕರ್ಷಿಸುವ ಮೂಲ ಸೌಕರ್ಯ ಯೋಜನೆಗಳನ್ನು ಆರ್ಥಿಕ ಅಭಿವೃದ್ಧಿ ಏಜೆನ್ಸಿ ರಚನೆಯಾಗಲಿದೆ. ಇದಕ್ಕೆ ಬೆಂಗಳೂರು ಅಭಿವೃದ್ಧಿ ಸಚಿವರು ಅಧ್ಯಕ್ಷರಾಗಿರುತ್ತಾರೆ. ಈ ಏಜೆನ್ಸಿಯು ಖಾಸಗಿ-ಸಾರ್ವಜನಿಕ ಸಹಭಾಗಿತ್ವವನ್ನು ರೂಪಿಸುವ ಜವಾಬ್ದಾರಿಯನ್ನು ನೀಡಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರವು ಈ ಆರ್ಥಿಕ ಅಭಿವೃದ್ಧಿ ಏಜೆನ್ಸಿ ಒಟ್ಟು ಯೋಜನೆಗಳನ್ನು ರೂಪಿಸಿಕೊಡಲಿದೆ. ಮತ್ತೊಂದೆಡೆ ಘನತ್ಯಾಜ್ಯ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. ಹೀಗಾಗಿ ನಗರಾಡಳಿತವು ವಿಕೇಂದ್ರೀಕರಣಗೊಳ್ಳುವ ಬದಲು ಕಾರ್ಪೊರೇಟ್ ಕುಳಗಳ ಹಿತವನ್ನಷ್ಟೇ ಕಾಯುವ ಕೇಂದ್ರೀಕೃತ ಆಡಳಿತ ವ್ಯವಸ್ಥೆ ಬರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಹಲವು ಪಾಲಿಕೆಗಳ ರಚನೆ; ಅತ್ಯಲ್ಪ ಅಧಿಕಾರ

198 ವಾರ್ಡುಗಳ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬದಲಾಗಿ ನಗರಕ್ಕೆ ಏಳು ಪಾಲಿಕೆಗಳಿಗೆ ಹೆಚ್ಚಿಲ್ಲದಂತೆ ಹಲವು ಪಾಲಿಕೆಗಳನ್ನು ರಚಿಸಲು ವಿಧೇಯಕ ಅವಕಾಶ ನೀಡಿದೆ. ರಾಜ್ಯ ಸರ್ಕಾರ ಈ ಸದ್ಯ ಮೂರು ಪಾಲಿಕೆಗಳನ್ನು ಪ್ರಸ್ತಾಪವನ್ನಿಟ್ಟಿದೆ. ಪ್ರತಿ ಪಾಲಿಕೆಯು 150 ವಾರ್ಡುಗಳಿಗೆ ಹೆಚ್ಚಿಲ್ಲದಂತೆ ಇರಬೇಕೆಂದು ನಿರ್ಬಂಧ ಹೇರಿದೆ. ಆದರೆ ಈ ಹಿಂದೆಯೂ ಇದ್ದಂತೆ ಪ್ರತಿ ಪಾಲಿಕೆಗೆ ಮೇಯರ್, ಉಪ ಮೇಯರ್, ಆಯುಕ್ತರು ಇರಲಿದ್ದಾರೆ. ಸ್ಥಾಯಿ ಸಮಿತಿಗಳು ಇರಲಿವೆ. ಇದರ ನಡುವೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಸಕರು ಅಧ್ಯಕ್ಷರಾಗಿರುವ ಸಮಾಲೋಚನಾ ಮತ್ತು ಸಮನ್ವಯ ಸಮಿತಿಯು ರಚನೆಯಾಗಲಿದೆ. ಅಂದರೆ ಕೆಳಹಂತದಲ್ಲೂ ಪಾಲಿಕೆ ಸದಸ್ಯರಿಗೆ ಯಾವುದೇ ಅಧಿಕಾರ ಇರಲು ಸಾಧ್ಯವಿಲ್ಲ, ಬದಲಾಗಿ ಆಯಾ ವ್ಯಾಪ್ತಿಯ ಶಾಸಕರೇ ಎಲ್ಲವನ್ನೂ ನಿರ್ಧರಿಸಲು ಸಾಧ್ಯವಿದೆ. ಈಗಲೂ ಇದೇ ಸ್ಥಿತಿ ಇದೆಯಾದರೂ, ಪಾಲಿಕೆ ಸದಸ್ಯರಿಗೆ ಇದ್ದ ಹಕ್ಕೂ ಇಲ್ಲಿ ಇಲ್ಲ ಎಂಬುದು ಕೇವಲ ತೋರಿಕೆಯ ಪ್ರಜಾಪ್ರಭುತ್ವವಾಗುತ್ತದೆ. ಒಂದಕ್ಕಿಂತ ಹೆಚ್ಚು ಪಾಲಿಕೆಗಳನ್ನು ರಚಿಸುವ ವಿಚಾರದಲ್ಲಿ ಪರ-ವಿರೋಧ ಸಮಪ್ರಮಾಣದಲ್ಲಿದೆ. ಪಾಲಿಕೆಗಳು ಹಲವಿದ್ದರೂ ಮೇಯರ್ ಒಬ್ಬರೇ ಇರಲಿ ಎಂಬ ಅಭಿಪ್ರಾಯಗಳು ಕೇಳಿ ಬಂದಿದ್ದವು. ಆದರೆ ಅಧಿಸೂಚನೆಯಲ್ಲಿ ಪ್ರತಿ ಪಾಲಿಕೆಗೂ ಮೇಯರ್ ಮತ್ತು ಉಪ ಮೇಯರ್ ಇರಲಿದ್ದಾರೆ ಎಂದು ಹೇಳುತ್ತದೆ. ಆದರೆ ಪಾಲಿಕೆಗಳು ಮೊದಲಿದ್ದ ಅಧಿಕಾರಗಳನ್ನು ಕಳೆದುಕೊಳ್ಳಲಿವೆ. ಉದಾಹರಣೆಗೆ ಎರಡು ಪಾಲಿಕೆಗಳ ವ್ಯಾಪ್ತಿಯಲ್ಲಿ ಆಗುವ ಕಾಮಗಾರಿಗಳನ್ನು ಜಿಬಿಎ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇರುವುದರಿಂದ ಪಾಲಿಕೆಗಳು ಇಲ್ಲಿ ನೆಪ ಮಾತ್ರಕ್ಕೆ ಇರುವ ಸಾಧ್ಯತೆಯೇ ಹೆಚ್ಚು. ಹೀಗಾಗಿ ಜನರಿಂದ ಆಯ್ಕೆಯಾದ ನಗರ ಪಾಲಿಕೆಗಳ ಸದಸ್ಯರು ಸ್ಲೀಪಿಂಗ್ ಸದಸ್ಯರಾಗಿ ಉಳಿಯುತ್ತಾರೆ.

ಮೂರು ಜಿಲ್ಲೆಗಳಾಚೆ ಚಾಚಿದ ಗ್ರೇಟರ್ ಬೆಂಗಳೂರು

ಕರಡು ಮಸೂದೆಯಲ್ಲಿ ಪ್ರಸ್ತಾಪಿಸಿದಂತೆ ಬಿಬಿಎಂಪಿ ಪ್ರದೇಶ ಮತ್ತು ಆನೇಕಲ್ ಸೇರಿದಂತೆ ಬೆಂಗಳೂರು ನಗರ ಜಿಲ್ಲೆಯ ಪ್ರದೇಶ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪುಟ 6 ಕ್ಕೆ

ವೈಜ್ಞಾನಿಕ ದತ್ತಾಂಶಗಳ ನೆಲೆಯಲ್ಲಿ ನೀತಿ ನಿರ್ಧಾರಕ್ಕೆ ಮತ್ತು ಸಾಮಾಜಿಕ ನ್ಯಾಯಕ್ಕೆ ಜಾತಿ ಜನಗಣತಿ ಸೇರಿದಂತೆ ಸಾಮಾನ್ಯ ಜನಗಣತಿಯನ್ನು ತಕ್ಷಣ ನಡೆಸಬೇಕು

2021 ರಲ್ಲಿ ನಡೆಯಬೇಕಿದ್ದ ದಶಕದ ಜನಗಣತಿಯನ್ನು ಇಲ್ಲಿಯವರೆಗೆ ನಡೆಸದಿರುವ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸುತ್ತ ಸಿಪಿಐ(ಎಂ) ಮಹಾಧಿವೇಶನ, ಆಡಳಿತಾತ್ಮಕ ಗಡಿಗಳನ್ನು ಸ್ತಂಭನಗೊಳಿಸಲು ನೀಡಿದ ಜೂನ್ 2024ರ ಗಡುವನ್ನು ಒಕ್ಕೂಟ ಸರಕಾರ ವಿಸ್ತರಿಸಿಯೂ ಇಲ್ಲ. ಜಿಲ್ಲೆಗಳು, ತಾಲ್ಲೂಕು, ಬ್ಲಾಕ್ ಅಥವಾ ಗ್ರಾಮ ಮಟ್ಟಗಳಂತಹ ಆಡಳಿತಾತ್ಮಕ ಗಡಿಗಳ ಪ್ರಕಾರ ಜನಗಣತಿಯನ್ನು ನಡೆಸಲು ಇದು ಅಗತ್ಯ.

2020ರಲ್ಲಿ ಪ್ರಾರಂಭವಾಗಬೇಕಿದ್ದ 2021ರ ಜನಗಣತಿಯು ಅನಿರ್ದಿಷ್ಟವಾಗಿ ವಿಳಂಬಗೊಂಡಿದೆ. ಕೋವಿಡ್ ನಂತರ ಮಾತ್ರ ಜನಗಣತಿ ಕಾರ್ಯಾಚರಣೆಗಳನ್ನು ನಡೆಸಬಹುದು ಎಂದು ಸರ್ಕಾರ ಆಗ ಹೇಳಿತ್ತು, ಆದರೆ ನಾಲ್ಕು ವರ್ಷಗಳ ನಂತರವೂ ಜನಗಣತಿ ನಡೆಯುವ ಯಾವುದೇ ಲಕ್ಷಣಗಳಿಲ್ಲ. ಜನಗಣತಿಯಿಂದ ಒದಗಿಸಲಾದ ದತ್ತಾಂಶವು ನೀತಿ ಯೋಜಕರು ಮತ್ತು ನಿರ್ವಾಹಕರು ವಿವಿಧ ವಿಭಾಗಗಳ ಜನರಿಗೆ ಅನುಗುಣವಾಗಿ ನೀತಿಗಳನ್ನು ರೂಪಿಸಲು ಅನುವು ಮಾಡಿಕೊಡುತ್ತದೆ.

ಬ್ರಿಟಿಷ್ ಆಳ್ವಿಕೆಯ ಕಾಲದಿಂದ, ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿಯನ್ನು ತಪ್ಪದೆ ನಡೆಸಲಾಗುತ್ತಿದೆ. 1941ರಲ್ಲಿ, ಎರಡನೇ ಮಹಾಯುದ್ಧದ ಸಮಯದಲ್ಲಿಯೂ ಸಹ, ಜನಗಣತಿಯನ್ನು ಮೊಟಕುಗೊಳಿಸಿ ನಡೆಸಲಾಯಿತು. ಜನಗಣತಿಯು ಜನಸಂಖ್ಯಾ ಎಣಿಕೆಯನ್ನು ಮಾತ್ರವಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳ ದತ್ತಾಂಶ, ಸಾಗುವಳಿ ವರ್ಗಗಳು ಮತ್ತು ಕೃಷಿ ಕಾರ್ಮಿಕರನ್ನು ಒಳಗೊಂಡಂತೆ ಸಮಗ್ರ ದತ್ತಾಂಶವನ್ನು ಸಹ ಒದಗಿಸುತ್ತದೆ.

24 ನೇ ಮಹಾಧಿವೇಶನದ ನಿರ್ಣಯ

ಇದು ನಗರ-ಗ್ರಾಮೀಣ ಜನಸಂಖ್ಯೆ, ಭಾಷಿಕ ಗುಂಪುಗಳು ಮತ್ತು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ದತ್ತಾಂಶವನ್ನು ಸಹ ಒದಗಿಸುತ್ತದೆ.

ಸಾಮಾನ್ಯ ಜನಗಣತಿಯಲ್ಲಿ ಎಣಿಸಲಾದ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳನ್ನು ಹೊರತುಪಡಿಸಿ, ಇತರ ಹಿಂದುಳಿದ ವರ್ಗಗಳ ಬಗ್ಗೆ ಯಾವುದೇ ದತ್ತಾಂಶವಿಲ್ಲ. ಇತರ ಹಿಂದುಳಿದ ವರ್ಗಗಳ ವಿವಿಧ ವಿಭಾಗಗಳ ನಿಖರವಾದ ಎಣಿಕೆಯನ್ನು ಹೊಂದಿರುವುದು ಅವಶ್ಯಕ. ಆದ್ದರಿಂದ, ಜಾತಿ ಜನಗಣತಿಯ ಬೇಡಿಕೆಯನ್ನು ಬೆಂಬಲಿಸುವುದಾಗಿ ಮಹಾಧಿವೇಶನ ಹೇಳಿದೆ.

ಜಾತಿ ಜನಗಣತಿಯು ಜಾತಿ ಮತ್ತು ಸಾಮಾಜಿಕ-ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಯ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಆಳುವ ವರ್ಗದ ನೀತಿಗಳು ಮತ್ತು ಮೀಸಲಾತಿಗಳ ಪರಿಣಾಮವನ್ನು ನಿರ್ಣಯಿಸಲು ಸಹಾಯ ಮಾಡುತ್ತದೆ. ಸಂಪನ್ಮೂಲಗಳು ಮತ್ತು ಅವಕಾಶಗಳನ್ನು ಇನ್ನೂ ನಿರಾಕರಿಸಲಾಗುತ್ತಿರುವ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ (ಒಬಿಸಿ) ಜಾತಿ ಗುಂಪುಗಳ ವಾಸ್ತವವು ಜಾತಿ ಜನಗಣತಿಯ ಮೂಲಕ ಹೊರಬರುತ್ತದೆ. ಇದರಿಂದ ಆಳುವ ವರ್ಗಗಳ ದಿವಾಳಿಕೋರ ನೀತಿಗಳು ಮತ್ತು ಸಾಮಾಜಿಕ ನ್ಯಾಯವನ್ನು ಈಡೇರಿಸುವಲ್ಲಿ ಅವರ ವೈಫಲ್ಯ ಬಹಿರಂಗಕ್ಕೆ ಬರುತ್ತದೆ.

ಜನಗಣತಿಯನ್ನು ನಡೆಸದಿರುವ ಮೂಲಕ, ಸಂವಿಧಾನ ತಿದ್ದುಪಡಿಯಿಂದ ಒದಗಿಸಲಾದ ಸಂಸತ್ತು ಮತ್ತು ರಾಜ್ಯ ಶಾಸಕಾಂಗಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿಯನ್ನು ದೂರ ಭವಿಷ್ಯಕ್ಕೆ ತಳ್ಳಲಾಗಿದೆ (ಕನಿಷ್ಠ ಪಕ್ಷ 2029ರಲ್ಲೂ ಇಲ್ಲ).

ವೈಜ್ಞಾನಿಕ ಆಧಾರದ ಮೇಲೆ ನಡೆಸಲಾದ ಅಂಕಿ-ಅಂಶಗಳ ಸಮೀಕ್ಷೆಗಳ ಬಗ್ಗೆ ಸರಕಾರ ಸಾಮಾನ್ಯವಾಗಿ ತಿರಸ್ಕಾರವನ್ನೇ ಹೊಂದಿರುವುದರಿಂದಾಗಿ ಅದು ಜನಗಣತಿಯನ್ನು ನಡೆಸಲು ಯಾವುದೇ ಒಲವು ತೋರಿಸುತ್ತಿಲ್ಲ. ವಿವಿಧ ಸಮೀಕ್ಷೆಗಳನ್ನು ನಿಗ್ರಹಿಸಲಾಗಿದೆ ಅಥವಾ ಸಮೀಕ್ಷೆಯನ್ನು ವಿರೂಪಗೊಳಿಸಲಿಕ್ಕಾಗಿ ಅವುಗಳ ಸಂಖ್ಯಾಶಾಸ್ತ್ರೀಯ ಪರಿಮಿತಿಗಳನ್ನು ಬದಲಾಯಿಸಲಾಗಿದೆ. ಜನಗಣತಿಯು ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳ ವೈಜ್ಞಾನಿಕ-ವಿರೋಧಿ ದೃಷ್ಟಿಕೋನಕ್ಕೆ ಬಲಿಯಾಗಿದೆ. ಜಾತಿ ಜನಗಣತಿಯಲ್ಲಿ ಸಂಗ್ರಹಿಸಲಾದ ದತ್ತಾಂಶವು ಜಾತಿ ವ್ಯವಸ್ಥೆಯಲ್ಲಿನ ಅಸಮಾನತೆಗಳನ್ನು ಬಹಿರಂಗಪಡಿಸುತ್ತದೆ ಮತ್ತು ಸಂಘಪರಿವಾರದ ಎಲ್ಲವನ್ನೂ ನುಂಗಿ ಹಾಕುವ ಧಾರ್ಮಿಕ ಗುರುತಿನ ದಾವೆ ಅದರಿಂದ ಕುಸ್ಸಾಗುತ್ತದೆ.

ವೈಜ್ಞಾನಿಕ ದತ್ತಾಂಶಗಳ ನೆಲೆಯಲ್ಲಿ ನೀತಿ ನಿರ್ಧಾರವಾಗಬೇಕು ಎಂದು ಖಚಿತಪಡಿಸಿಕೊಳ್ಳಲು ಮತ್ತು ಸಮಾಜದ ಎಲ್ಲಾ ದಮನಿತ ವರ್ಗಗಳಿಗೆ ನ್ಯಾಯವನ್ನು ಖಚಿತಪಡಿಸಿಕೊಳ್ಳಲು, ಹೆಚ್ಚು ಬಹು ವಿಳಂಬಿತ 2021ರ ಜನಗಣತಿಯನ್ನು, ಜಾತಿ ಜನಗಣತಿಯ ಜೊತೆಗೆ ತಕ್ಷಣವೇ ನಡೆಸಬೇಕೆಂದು ಒತ್ತಾಯಿಸಲೇಬೇಕಾಗಿದೆ.

ಆದ್ದರಿಂದ ಒಕ್ಕೂಟ ಸರ್ಕಾರವು ತಕ್ಷಣವೇ ಸಾಮಾನ್ಯ ಜನಗಣತಿಯನ್ನು ನಡೆಸಬೇಕು ಮತ್ತು ಅದರೊಂದಿಗೆ ಜಾತಿ ಜನಗಣತಿಯನ್ನು ನಡೆಸಬೇಕೆಂದು ಮಹಾಧಿವೇಶನ ಒತ್ತಾಯಿಸಿದೆ. ಈ ಆಗ್ರಹವನ್ನು ಬೆಂಬಲಿಸಬೇಕು ಮತ್ತು ಒತ್ತಾಯಿಸಬೇಕು ಎಂದು ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿ ವಿಭಾಗಗಳಿಗೆ ಮಹಾಧಿವೇಶನ ಮನವಿ ಮಾಡಿದೆ.

ಮನುಧರ್ಮದ ಹಾದಿಯಲ್ಲಿ ದೇಶವನ್ನು ಹಿಂದಕ್ಕೆ ಕೊಂಡೊಯ್ಯಲು ನಾವು ಬಿಡುವುದಿಲ್ಲ-ಬೃಂದಾ ಕಾರಟ್

ಮದುರೈ: "ಮನುಧರ್ಮದ ಆಧಾರದ ಮೇಲೆ ಈ ದೇಶವನ್ನು ಹಿಂದಕ್ಕೆ ಕೊಂಡೊಯ್ಯುವ ಯಾವುದೇ ಪ್ರಯತ್ನವನ್ನು ಕಮ್ಯುನಿಸ್ಟ್ ಚಳುವಳಿ ಎಂದಿಗೂ ಸ್ವೀಕರಿಸುವುದಿಲ್ಲ" ಎಂದು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಪಾಲಿಟ್‌ಬ್ಯುರೋ ಸದಸ್ಯೆ ಬೃಂದಾ ಕಾರಟ್ ಹೇಳಿದರು. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 24ನೇ ಅಖಿಲ ಭಾರತ ಸಮ್ಮೇಳನವು ಬುಧವಾರ(ಏಪ್ರಿಲ್ 2)ದಿಂದ ತಮಿಳುನಾಡಿನ ಮಧುರೈನಲ್ಲಿ ಆರಂಭವಾಗಿದೆ. ಇದರ ಹಿಂದಿನ ದಿನ ಮಂಗಳವಾರ ಸಂಜೆ, ಕಾಮ್ರೇಡ್ ಪಿ.ರಾಮಮೂರ್ತಿ ಸ್ಮಾರಕ ಸಂಕೀರ್ಣದಲ್ಲಿ "ಜನರ ಪ್ರಜಾಪ್ರಭುತ್ವ ಹಾದಿ" ಇತಿಹಾಸದ ವಸ್ತು ಪ್ರದರ್ಶನ ಮತ್ತು ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಬೃಂದಾ ಕಾರಟ್ ಅವರು, "ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ದಿವಂಗತ ಸೀತಾರಾಮ್ ಯೆಚೂರಿ ಅವರು ಹೇಳುತ್ತಿದ್ದರು, ಸಿಪಿಐ(ಎಂ) ಯಾವಾಗಲೂ ಜನರ ಮುಂದೆ ಎರಡು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿದೆ; ಆ ಎರಡು ಅಂಶಗಳೆಂದರೆ, ಮೊದಲನೆಯದಾಗಿ, ಬಂಡವಾಳಶಾಹಿಯಿಂದ ಕಾರ್ಮಿಕ ವರ್ಗದ ಶೋಷಣೆಯ ವಿರುದ್ಧದ ಹೋರಾಟ. ಎರಡನೆಯದಾಗಿ, ಇಂದಿಗೂ ಅಸ್ತಿತ್ವದಲ್ಲಿರುವ ಪ್ರತಿಗಾಮಿ ಜಾತಿ ವ್ಯವಸ್ಥೆಗಳ ವಿರುದ್ಧದ ಹೋರಾಟ - ಸಾಮಾಜಿಕ ದಬ್ಬಾಳಿಕೆ. ಭಾರತೀಯ ಕಮ್ಯುನಿಸ್ಟ್ ಚಳುವಳಿ ತ್ಯಾಗಗಳಿಂದ ತುಂಬಿದೆ. ಕಮ್ಯುನಿಸ್ಟರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಮತ್ತು ಬಂಡವಾಳಶಾಹಿ ಶೋಷಣೆ ಮತ್ತು ಸಾಮಾಜಿಕ ದಬ್ಬಾಳಿಕೆಯ ವಿರುದ್ಧದ ಹೋರಾಟದಲ್ಲಿ ತಮ್ಮ ಜೀವಗಳನ್ನು ತ್ಯಾಗ ಮಾಡುವುದು ಸೇರಿದಂತೆ ವಿವಿಧ ತ್ಯಾಗಗಳನ್ನು ಮಾಡಿದವರು. ಕಮ್ಯುನಿಸ್ಟ್ ಚಳುವಳಿ ದೇಶಭಕ್ತಿಯ ಸಂಕೇತವೂ ಆಗಿದೆ. ನಿಜವಾದ ದೇಶಭಕ್ತಿ ಎಂದರೆ ದೇಶದ ರೈತರು, ವಿದ್ಯಾರ್ಥಿಗಳು ಮತ್ತು ದುಡಿಯುವ ಜನರ ಹಕ್ಕುಗಳಿಗಾಗಿ ಶ್ರಮಿಸುವುದು."

"ಈ ಹಕ್ಕುಗಳಿಗಾಗಿಯೇ ಸ್ವಾತಂತ್ರ್ಯ ಹೋರಾಟ ನಡೆಯಿತು. ಕಮ್ಯುನಿಸ್ಟರು ಸೇರಿದಂತೆ ಹಲವು ಪಕ್ಷಗಳು ಈ ಹೋರಾಟದಲ್ಲಿ ಭಾಗವಹಿಸಿದ್ದವು. ಇಂದು ಒಕ್ಕೂಟದಲ್ಲಿ ಆಡಳಿತ ನಡೆಸುತ್ತಿರುವವರಿಗೆ ದೇಶಭಕ್ತಿ ಎಂದರೆ ಏನೆಂದು ತಿಳಿದಿಲ್ಲ. ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಇಂದಿನ ಆಡಳಿತಗಾರರಿಗೆ ಯಾವುದೇ ಪಾತ್ರವಿಲ್ಲ. ಮೋದಿ ನೇತೃತ್ವದ ಸರ್ಕಾರ ಭಾರತದ ಸಂವಿಧಾನಕ್ಕೆ ವಿರುದ್ಧವಾಗಿ ಮತ್ತು ಜನರ ಭಾವನೆಗಳಿಗೆ ವಿರುದ್ಧವಾಗಿ ವರ್ತಿಸುತ್ತಿದೆ. ಸಂವಿಧಾನ ನೀಡಿರುವ ಹಕ್ಕುಗಳನ್ನು ನಿರಾಕರಿಸುವ ಮೂಲಕ, ಅವರು ಮನು ಧರ್ಮದ ಆಧಾರದ ಮೇಲೆ ದೇಶವನ್ನು ಹಿಂದಕ್ಕೆ ಕೊಂಡೊಯ್ಯಲು ಪ್ರಯತ್ನಿಸುತ್ತಿದ್ದಾರೆ. ಆಡಳಿತಗಾರರ ಈ ಪ್ರಯತ್ನವನ್ನು ಕಮ್ಯುನಿಸ್ಟ್ ಚಳುವಳಿ ಒಪ್ಪುವುದಿಲ್ಲ. ಮಧುರೈನಲ್ಲಿ ನಡೆಯುತ್ತಿರುವ 24ನೇ ಅಖಿಲ ಭಾರತ ಸಮ್ಮೇಳನವು ರಾಜಕೀಯ ಮಹತ್ವದ್ದಾಗಿದೆ. ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸುತ್ತಿರುವ ತಮಿಳುನಾಡು ರಾಜ್ಯ ಸಮಿತಿಯ ಕೆಲಸ ಅಪಾರ. 24ನೇ ಮಹಾಧಿವೇಶನದಲ್ಲಿ ಹಾರುತ್ತಿರುವ ಕೆಂಪು ಧ್ವಜವು ಭಾರತ ಮತ್ತು ತಮಿಳುನಾಡಿನ ಕಮ್ಯುನಿಸ್ಟರು ಮಾಡಿದ ಹೋರಾಟಗಳು ಮತ್ತು ತ್ಯಾಗಗಳನ್ನು ಸಾಕಾರಗೊಳಿಸುತ್ತದೆ" ಎಂದು ಬೃಂದಾ ಕಾರಟ್ ಹೇಳಿದರು.

ಗ್ರೇಟರ್ ಬೆಂಗಳೂರು: ಬಿಳಿಯಾನೆಗಳ ವಶಕ್ಕೆ ನಗರಡಾಳಿತ.......

ಪುಟ 5 ರಿಂದ

ಪ್ರದೇಶಗಳು ಹಾಗೂ ರಾಮನಗರ ಜಿಲ್ಲೆಯ ಕೆಲ ಪ್ರದೇಶಗಳನ್ನು ಒಳಗೊಂಡಿತ್ತು. ಆದರೆ ಅಂಗೀಕಾರಗೊಂಡ ಅಧಿಸೂಚನೆಯಲ್ಲಿ "ಈ ಅಧಿನಿಯಮವು ಜಾರಿಯಾದ ನಂತರ ಆದಷ್ಟು ಬೇಗನೆ, ಸರ್ಕಾರವು ಅಧಿಸೂಚನೆಯ ಮೂಲಕ ಬೆಂಗಳೂರು ನಗರದ ಬೃಹತ್ ನಗರ ಪ್ರದೇಶವನ್ನು ಮತ್ತು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರದೇಶಗಳನ್ನು ಗ್ರೇಟರ್ ಬೆಂಗಳೂರು ಪ್ರದೇಶ ಎಂದು ಘೋಷಿಸತಕ್ಕದ್ದು, ಜತೆಗೆ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಗ್ರೇಟರ್ ಬೆಂಗಳೂರು ಪ್ರದೇಶದ ಭೂ ಪ್ರದೇಶದ ಮಿತಿಗಳನ್ನು ಮಾರ್ಪಾಟು ಮಾಡಬಹುದು" ಎಂದು ಹೇಳಿದೆ. ಅಂದರೆ ರಾಜ್ಯಪಾಲರ ಅಂಕಿತದ ಬಳಿಕ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿ ನಿರ್ಧಾರವಾಗಲಿದೆ. ಕರಡು ಅಧಿಸೂಚನೆಯಲ್ಲಿದ್ದಂತೆ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಪ್ರದೇಶಗಳನ್ನೂ ಒಳಗೊಳ್ಳುವ ಪ್ರಸ್ತಾಪವೇ ಸರ್ಕಾರದ ಅಧಿಕೃತ ಆದೇಶವಾಗಿ ಬರುವ ಸಾಧ್ಯತೆಯೇ ಹೆಚ್ಚು. ಇದು ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ, ಭೂ ಮಾಫಿಯಾಗಳಿಗೆ ಅನುಕೂಲವಾಗಲಿದೆ. ನಗರಡಾಳಿತವನ್ನು ಸುಗಮ ಮತ್ತು ಸುವ್ಯವಸ್ಥಿತಗೊಳಿಸುವ ಉದ್ದೇಶವು ವ್ಯಾಪ್ತಿಯನ್ನು ಹಿಗ್ಗಿಸುವುದರಿಂದ ಹೇಗೆ ಸಾಕಾರಗೊಳ್ಳುತ್ತದೆ ಯಾವುದೇ ಆಧಾರಗಳಿಲ್ಲ.

ವಾರ್ಡ್ ಸಮಿತಿಗಳು ಸಲಹಾ ಸಮಿತಿಗಳಷ್ಟೇ!

ವಾರ್ಡ್ ಸಮಿತಿಗಳೆಂದರೆ ವಾರ್ಡ್‌ಗೆ ಬೇಕಾದ ಯೋಜನೆಯನ್ನು ರೂಪಿಸುವ ಅಧಿಕಾರ ಹೊಂದಿರಬೇಕಿತ್ತು. ಕೇರಳದಲ್ಲಿ ಗ್ರಾಮ ಪಂಚಾಯತಿಗಳೂ ತಮ್ಮ ಯೋಜನೆಯನ್ನು ತಾವೇ ರೂಪಿಸುತ್ತವೆ. ಇದೇ ನಿಜವಾದ ಅರ್ಥದಲ್ಲಿ ಪ್ರಜಾಪ್ರಭುತ್ವ ಎನ್ನಬಹುದು. ಅಧಿಸೂಚನೆಯಲ್ಲಿ ಮೂರು ಹಂತದ ಆಡಳಿತ ವ್ಯವಸ್ಥೆ ಎಂದು ಹೇಳಲಾಗಿದ್ದರೂ, ಕೊನೆಯ ಹಂತವಾದ ವಾರ್ಡ್ ಸಮಿತಿಗಳು ಕೇವಲ ಸಲಹಾ ಸಮಿತಿಗಳಾಗಿ ಇರಲಿವೆ, ಇವುಗಳಿಗೆ ಯೋಜನೆ ತಯಾರಿಸುವ ಅಧಿಕಾರವಾಗಲಿ, ಸಂಪನ್ಮೂಲ ಸಂಗ್ರಹಿಸುವುದಾಗಲಿ, ಯೋಜನೆ ಕಾರ್ಯಗತಗೊಳಿಸುವಲ್ಲಿ ಮಧ್ಯಪ್ರವೇಶ ಮಾಡುವುದಾಗಲಿ ಯಾವ ಅಧಿಕಾರವನ್ನೂ ನೀಡಿಲ್ಲ. ಅಧಿಸೂಚನೆಯಲ್ಲಿ ಇರುವಂತೆ ಕಲಂ 103(4) ರಲ್ಲಿ "ವಾರ್ಡ್ ಸಮಿತಿಯ ಶಿಫಾರಸುಗಳು ಸಲಹಾ ಸ್ವರೂಪದಲ್ಲಿರತಕ್ಕದ್ದು" ಎಂದು ಸ್ಪಷ್ಟಪಡಿಸಲಾಗಿದೆ. ಅಂದರೆ ಕೇವಲ ಸಲಹೆಗಳನ್ನು ಮಾತ್ರವೇ ನೀಡುವ ಹೆಸರಿಗಷ್ಟೆ ವಾರ್ಡ್ ಸಮಿತಿ ಆಗಿರುತ್ತದೆ.

ಮಹಾನಗರ ಪಾಲಿಕೆಯಿಂದ ಬೃಹತ್ ಬೆಂಗಳೂರು ಆಗಿದ್ದು ಮುಂದುವರಿದು ಗ್ರೇಟರ್ ಬೆಂಗಳೂರು ಆಗುತ್ತಿರುವುದು ಬೆಂಗಳೂರಿನ ಸಾಮಾನ್ಯ ಜನರ ಹಿತಕ್ಕಾಗಿ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪಾಲಿಕೆ ಆಡಳಿತ ನಿಧಾನಕ್ಕೆ ಕಾರ್ಪೊರೇಟ್ ಕಂಪನಿಗಳ ಮರ್ಜಿಯಲ್ಲಿ ಕೇಂದ್ರೀಕೃತವಾಗಿ ನಡೆಯಲು ಬೇಕಾದ ಕಾನೂನಿನ ಚೌಕಟ್ಟನ್ನು ಈ ಕಾಯ್ದೆ ನೀಡಲಿದೆ, ಬದಲಾಗಿ ಇದು ಬೆಂಗಳೂರಿನ ಸಮಗ್ರ, ಸುಗಮ, ಸುಸ್ಥಿತ ಅಭಿವೃದ್ಧಿಯನ್ನು ಸಾಧಿಸುತ್ತದೆ ಎಂಬುದು ಹಗಲುಗನಸು ಆಗಬಹುದು.

ಚುನಾವಣಾ ಆಯೋಗದ ಸ್ವಾತಂತ್ರ್ಯ, ಸಮಗ್ರತೆ ಮತ್ತು ಪಾರದರ್ಶಕತೆಗಾಗಿ ದನಿಯೆತ್ತಬೇಕು; ಚುನಾವಣೆಗಳಲ್ಲಿ ಸಮಾನ ಅವಕಾಶಗಳನ್ನು ಖಚಿತಪಡಿಸಬೇಕು

24 ನೇ ಮಹಾಧಿವೇಶನದ ನಿರ್ಣಯ

ಚುನಾವಣಾ ಆಯುಕ್ತರ ನೇಮಕಾತಿಯಲ್ಲಿ ಸ್ವಾತಂತ್ರ್ಯವನ್ನು ಖಚಿತಪಡಿಸಲು ನವೆಂಬರ್ 2023ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಸ್ಪಷ್ಟ ನಿರ್ದೇಶನವನ್ನು ಕಣ್ಣಿಗೆ ರಾಚುವಂತೆ ಉಲ್ಲಂಘಿಸಿ, ಪ್ರಸ್ತುತ ಬಿಜೆಪಿ ಆಡಳಿತವು, ಭಾರತದ ಮುಖ್ಯ ನ್ಯಾಯಾಧೀಶರನ್ನು ಹೊರಗಿಟ್ಟು, ಆಯ್ಕೆ ಸಮಿತಿಯ ಮೂವರು ಸದಸ್ಯರಲ್ಲಿ ಇಬ್ಬರು ಆಳುವ ಸಂಪುಟದ ಸದಸ್ಯರಾಗಿರುತ್ತಾರೆ ಎನ್ನುವ ಮೂಲಕ ಆಯ್ಕೆ ಪ್ರಕ್ರಿಯೆಯನ್ನು ಬದಲಾಯಿಸುವ ಕಾನೂನನ್ನು ತರಾತುರಿಯಿಂದ ಜಾರಿಗೆ ತಂದಿತು.

ಭಾರತದ ಚುನಾವಣಾ ಆಯೋಗವು ಭಾರತೀಯ ಜನರ ಒಂದು ಸಾಕಷ್ಟು ದೊಡ್ಡ ವಿಭಾಗದ ವಿಶ್ವಾಸವನ್ನು ಕಳೆದುಕೊಂಡಿದೆ. ಏಪ್ರಿಲ್ 2024ರಲ್ಲಿ, ಅಭಿವೃದ್ಧಿಶೀಲ ಸಮಾಜಗಳ ಅಧ್ಯಯನ ಕೇಂದ್ರ (ಸಿಎಸ್‌ಡಿಎಸ್) ನಡೆಸಿದ ಸಮೀಕ್ಷೆಯು ಒಂದು ಆಘಾತಕಾರಿ ಸಂಗತಿಯನ್ನು, ಇಂದು ಕೇವಲ ಶೇ. 28ರಷ್ಟು ಭಾರತೀಯರು ಮಾತ್ರ ಚುನಾವಣಾ ಆಯೋಗದಲ್ಲಿ ಯಾವುದೇ ನಂಬಿಕೆ ಅಥವಾ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ ಎಂದು ಬಹಿರಂಗಪಡಿಸಿದೆ.

ಭಾರತದ ಚುನಾವಣಾ ವ್ಯವಸ್ಥೆಯು ಹೇಗೆ ಮತ್ತು ಎಷ್ಟರ ಮಟ್ಟಿಗೆ ಸವೆದುಹೋಗಿದೆ ಎಂಬುದು ಸಂಕೀರ್ಣವಾಗಿದೆ ಮತ್ತು ಬಹು ಹಂತಗಳಲ್ಲಿ ಚಾಲಾಕಿತನಗಳನ್ನು ಒಳಗೊಂಡಿದೆ. ಈ ಪ್ರಶ್ನೆಗಳನ್ನು ಹಲವಾರು ತಜ್ಞರು ಮತ್ತು ನಾಗರಿಕ ಗುಂಪುಗಳು ಕಟ್ಟುನಿಟ್ಟಾಗಿ ಪರಿಶೀಲಿಸಿದ್ದಾರೆ. ಅವು ಮೂಲಭೂತವಾಗಿ ಚುನಾವಣಾ ಆಯೋಗದ ಕಾರ್ಯನಿರ್ವಹಣೆಯ ಸಂಪೂರ್ಣ ಅಪಾರದರ್ಶಕ ವಿಧಾನವನ್ನು ಕುರಿತಾಗಿವೆ:

1) ಹಿಂದಿನ ಮತ್ತು ಪ್ರಸ್ತುತ ಮತದಾರರ ಪಟ್ಟಿಗಳನ್ನು ಒಳಗೊಂಡಂತೆ ಮತದಾರರ ದತ್ತಾಂಶವನ್ನು ಬಿಡುಗಡೆ ಮಾಡದಿರುವುದು.
2) ಚುನಾವಣಾ ಕಾನೂನು ಮತ್ತು ಆಯೋಗದ ಕೈಪಿಡಿಗಳ ಅಡಿಯಲ್ಲಿ ಕಡ್ಡಾಯಗೊಳಿಸಲಾದ 17–ಸಿ ಮತ್ತು 17–ಎ ಫಾರ್ಮ್‌ಗಳು, ವೀಡಿಯೊ ರೆಕಾರ್ಡಿಂಗ್‌ಗಳು ಮತ್ತು ಸೂಚಕ ಕಾರ್ಡ್‌ಗಳನ್ನು ಬಿಡುಗಡೆ ಮಾಡದಿರುವುದು.
3) ಮತದಾರರ ಹೆಸರುಗಳ ನಕಲಿ ಸೇರ್ಪಡೆಗಳು ಮತ್ತು ತೆಗೆಯುವುದರ ಮೂಲಕ ಮತದಾರರ ಪಟ್ಟಿಗಳಲ್ಲಿ ಚಾಲಾಕಿತನ.

ಚುನಾವಣಾ ಆಯೋಗದ ನಡವಳಿಕೆಯ ಬಗ್ಗೆ ಒಂದು ಮಹತ್ವದ ಪ್ರಶ್ನೆ, ಎಲೆಕ್ಟ್ರಾನಿಕ್ ಮತ ಯಂತ್ರಗಳ (ಇವಿಎಂಗಳ) ವಿಶ್ವಾಸಾರ್ಹತೆ ಮತ್ತು ಆಯೋಗದಿಂದ ಚುನಾವಣಾ ಪ್ರಕ್ರಿಯೆಯ ಮೇಲ್ವಿಚಾರಣೆಗೆ ಸಂಬಂಧಿಸಿದೆ.

ಮೊದಲಿಗೆ 2014ರ ಲೋಕಸಭಾ ಚುನಾವಣೆಗಳಲ್ಲಿ, 2017ರ ಉತ್ತರ ಪ್ರದೇಶ ಮತ್ತು ಗುಜರಾತ್ ರಾಜ್ಯ ಚುನಾವಣೆಗಳಲ್ಲಿ ಮತ್ತು 2019ರ ಲೋಕಸಭಾ ಚುನಾವಣೆಗಳಲ್ಲಿ ಮಾದರಿ ನೀತಿ ಸಂಹಿತೆ (ಎಂಸಿಸಿ) ಮತ್ತು ಜನತಾ ಪ್ರಾತಿನಿಧ್ಯ ಕಾಯ್ದೆಯ ಉಲ್ಲಂಘನೆಯಲ್ಲಿ ಚುನಾವಣೆಗಳಲ್ಲಿ ಉಭಯಪಕ್ಷೀಯ ನಡವಳಿಕೆಯ ಒಂದು ಪ್ರಮುಖ ಉಲ್ಲಂಘನೆಯು ಸ್ಪಷ್ಟವಾಗಿ ಕಂಡುಬಂದಿತು. ಪ್ರಧಾನ ಮಂತ್ರಿ, ಗೃಹ ಮಂತ್ರಿ, ಉತ್ತರಪ್ರದೇಶ ಮುಖ್ಯಮಂತ್ರಿ ಮತ್ತು ಇತರರು ಸೇರಿದಂತೆ ಆಳುವ ಪಕ್ಷದ ಪ್ರಮುಖ ಪ್ರಚಾರಕರ ವಿರುದ್ಧ, ಬಹಿರಂಗವಾಗಿ ಕೋಮುವಾದಿ ಮನವಿಗಳನ್ನು ಮಾಡಿದ್ದಾರೆ ಮತ್ತು ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ಹಲವಾರು ದೂರುಗಳನ್ನು ನೀಡಲಾಗಿತ್ತು, ಆದರೆ ಅವುಗಳನ್ನು ನಿರ್ಲಕ್ಷಿಸಲಾಯಿತು. ಇದು ಚುನಾವಣಾ ಆಯೋಗದ ಸ್ಪಷ್ಟವಾದ ಪಕ್ಷಪಾತೀ

> **ಕಳೆದ ದಶಕದಲ್ಲಿ ಭಾರತದ ಚುನಾವಣಾ ಆಯೋಗ (ಇಸಿಐ) ಚುನಾವಣೆಗಳನ್ನು ಅಪಾರದರ್ಶಕ ಮತ್ತು ಸಂವಿಧಾನಬಾಹಿರ ವಿಧಾನದಲ್ಲಿ ನಡೆಸುತ್ತಿರುವ ಬಗ್ಗೆ ತೀವ್ರ ಕಳವಳ ಮತ್ತು ನೋವನ್ನು ವ್ಯಕ್ತಪಡಿಸುತ್ತ, ಮಹಾಧಿವೇಶನ ಅಂಗೀಕರಿಸಿರುವ ನಿರ್ಣಯ, ಸ್ವಾಯತ್ತತೆಯ ಸವೆತ, ರಾಜಕೀಯ ವಿರೋಧದ ಬಗ್ಗೆ ತಿರಸ್ಕಾರ ಮತ್ತು ಚುನಾವಣಾ ಕಾನೂನುಗಳು, ನಿಯಮಗಳು ಮತ್ತು ಕೈಪಿಡಿಗಳಲ್ಲಿ ಯಾವುದೇ ನಾಚಿಕೆಯಿಲ್ಲದೆ ಚಾಲಾಕಿತನ ತೋರಿರುವುದು, ಸದಾ ಹಣಬಲ ಹೊಂದಿರುವ ಪಕ್ಷಗಳ ಪರವಾದ ಅಂಶಗಳಿಂದ ತುಂಬಿರುವ ಭಾರತದ ಚುನಾವಣಾ ಪ್ರಕ್ರಿಯೆಯನ್ನು ಒಂದು ಸಂಪೂರ್ಣ ಪ್ರಹಸನವನ್ನಾಗಿ ಮಾಡಿದೆ ಎಂದು ಹೇಳಿದೆ.**

ನಿಲುವನ್ನು ಬಯಲಿಗೆ ತಂದಿತು. ಬಿಜೆಪಿಯ ಹಿತಾಸಕ್ತಿಗಳನ್ನು ಈಡೇರಿಸಲು ಸರ್ಕಾರಿ ಸಂಪನ್ಮೂಲಗಳನ್ನು ಎಗ್ಗಿಲ್ಲದೆ ಬಳಸುವುದರ ವಿರುದ್ಧ ಕ್ರಮ ಕೈಗೊಳ್ಳಲು ಆಯೋಗ ವಿಫಲವಾಗಿದೆ. ಇಂದು, ರಾಜಕೀಯ ಸ್ಪರ್ಧಿಗಳು ಮತ್ತು ನಾಗರಿಕರಿಗೆ ಪರಿಷ್ಕರಣೆಗಳಿರುವ ಮತ್ತು ಇಲ್ಲದ ಮತದಾರರ ಪಟ್ಟಿಗಳನ್ನು ಕೂಡ ನಿರಾಕರಿಸಲಾಗುತ್ತಿದ್ದು, ರಾಜಕೀಯ ವಿರೋಧ ಪಕ್ಷದ ಅತ್ಯಂತ ಮೂಲಭೂತ ಸಾಂವಿಧಾನಿಕ ಹಕ್ಕುಗಳನ್ನು ಸಹ ಯಾವುದೇ ನಾಚಿಕೆಯಿಲ್ಲದೆ ಕಸಿದುಕೊಳ್ಳಲಾಗುತ್ತಿದೆ. ತೀರಾ ಇತ್ತೀಚೆಗೆ, ನಕಲಿ ಮತದಾರ ಫೋಟೋ ಐಡೆಂಟಿಟಿ ಕಾರ್ಡ್‌ಗಳ ಸಮಸ್ಯೆಯೂ ಬೆಳಕಿಗೆ ಬಂದಿದೆ.

2024ರ ಸಂಸತ್ತಿನ ಚುನಾವಣೆಗಳ ನಂತರ ತಕ್ಷಣವೇ, ನಾಗರಿಕರ ಗುಂಪುಗಳು ದೇಶಾದ್ಯಂತ ಕನಿಷ್ಠ 79 ಲೋಕಸಭಾ ಕ್ಷೇತ್ರಗಳಲ್ಲಿ "ಜನಾದೇಶ" ಫಲಿತಾಂಶಗಳಲ್ಲಿ ಪ್ರತಿಫಲಿಸಿಲ್ಲ ಎಂದು ಸೂಚಿಸುವ ದತ್ತಾಂಶವನ್ನು ಪ್ರಸ್ತುತಪಡಿಸುವ ಒಂದು ಪುರಾವೆ ಸಹಿತ ವರದಿಯನ್ನು (ವೋಟ್ ಫಾರ್ ಡೆಮಾಕ್ರಸಿ–ವಿಎಫ್‌ಡಿ) ಪ್ರಕಟಿಸಿದವು: ಗಮನಾರ್ಹ ಸಂಗತಿಯೆಂದರೆ, ಸಂಜೆ 7–8 ಗಂಟೆಗೆ ವರದಿಯಾದ ಮತದಾನದ ಅಂಕಿಅಂಶಗಳು ಮತ್ತು ಆಯೋಗ ಒದಗಿಸಿದ ಮತದಾನದ ಶೇಕಡಾವಾರು ಅಂಕಿಅಂಶಗಳಿಂದ ಲೆಕ್ಕ ಹಾಕಿದ ಮತದಾನದ ಅಂತಿಮ ಅಂಕಿಅಂಶಗಳ ನಡುವಿನ ಹೆಚ್ಚಳವು ಎಲ್ಲಾ ಹಂತಗಳಲ್ಲಿ ಒಟ್ಟಾಗಿ 5 ಕೋಟಿ ಮತಗಳ ಹತ್ತಿರದಲ್ಲಿದೆ, ನಿಖರವಾಗಿ ಹೇಳಬೇಕೆಂದರೆ 4,65,46,885. ತಜ್ಞರ ವಿವರವಾದ ರಾಜ್ಯವಾರು ಗಣಿತ ಮತ್ತು ಸಂಖ್ಯಾಶಾಸ್ತ್ರೀಯ ಲೆಕ್ಕಾಚಾರಗಳು ಈ ನಕಲಿ ಮತಗಳು 2024ರ ಲೋಕಸಭಾ ಚುನಾವಣೆಯಲ್ಲಿ ಸುಮಾರು 79 ಸ್ಥಾನಗಳಲ್ಲಿ ಎನ್‌ಡಿಎ/ಬಿಜೆಪಿ ಕೂಟಕ್ಕೆ ಪ್ರಯೋಜನವನ್ನು ನೀಡಿರುವ ಸಾಧ್ಯತೆಯಿದೆ ಎಂದು ಹೇಳುತ್ತವೆ. ಇದು ಯಾರು/ಯಾವ ಕೂಟ ಅಧಿಕಾರಕ್ಕೆ ಬಂದಿತು ಎಂಬುದನ್ನು ನಿರ್ಧರಿಸಿದೆ. ಮತಗಳಲ್ಲಿ ಈ ವಿವರ ನೀಡದ ಹೆಚ್ಚಳಕ್ಕೆ ಯಾವುದೇ ಕಾರಣಗಳನ್ನು ಕೊಡಲು ಚುನಾವಣಾ ಆಯೋಗ ನಿರಾಕರಿಸಿದೆ.

ಮತ್ತೊಂದೆಡೆ, ಒಟ್ಟಾರೆಯಾಗಿ, ಬಿಜೆಪಿಗೆ ಮತ ಚಲಾಯಿಸುವ ಸಾಧ್ಯತೆ ಕಡಿಮೆ ಇರುವ ಧಾರ್ಮಿಕ ಮತ್ತು ಜಾತಿ ಗುಂಪುಗಳ ಮತದಾರರು ಹೆಚ್ಚಿನ ಪ್ರಮಾಣದಲ್ಲಿ ಇರುವ ಪ್ರದೇಶಗಳಲ್ಲಿ ಮತದಾರರ ಪಟ್ಟಿಯಿಂದ ತೆಗೆದ ಹೆಸರುಗಳ ಸಂಖ್ಯೆಯ ಪ್ರಮಾಣಾತ್ಮಕವಾಗಿ ಹೆಚ್ಚಿದೆ ಎಂದು ಕೆಲವು ಕಟ್ಟುನಿಟ್ಟಾದ ಕ್ಷೇತ್ರವಾರು ಸಮೀಕ್ಷೆಗಳು ಸೂಚಿಸುತ್ತವೆ. ಇದಲ್ಲದೆ, ನಕಲಿ ಮತದಾರರನ್ನು ಗುರುತಿಸಲು ಹೊಸ ಮತದಾರರ ಸೇರ್ಪಡೆಯ ಬಗ್ಗೆ ಮತ್ತಷ್ಟು ಮತ್ತು ಸಮಗ್ರವಾದ ಪರಿಶೀಲನೆಯ ಅಗತ್ಯವಿದೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆ 2024ರ ಸ್ವತಂತ್ರ ಅಧ್ಯಯನಗಳು ಏಪ್ರಿಲ್ 2024ರಲ್ಲಿ ನಡೆದ ಲೋಕಸಭಾ ಚುನಾವಣೆ ಮತ್ತು ನವೆಂಬರ್ 2024ರಲ್ಲಿ ನಡೆದ ವಿಧಾನಸಭಾ ಚುನಾವಣೆಯ ನಡುವಿನ ಏಳು ತಿಂಗಳಲ್ಲಿ ಮತದಾರರ 'ನೋಂದಣಿ'ಯಲ್ಲಿ ಆಘಾತಕಾರಿ ಹೆಚ್ಚಳವನ್ನು ಬಯಲಿಗೆಳೆದಿವೆ. ಇದು 40,81,229 ರಷ್ಟಿತ್ತು. ಅಂದರೆ ಮಾಸಿಕ ನೋಂದಣಿ (ಏಪ್ರಿಲ್ 2024–ನವೆಂಬರ್ 2024) ಸರಾಸರಿ 5,83,032 ಇತ್ತು. ತದ್ವಿರುದ್ಧವಾಗಿ, 2019–2024ರ ನಡುವಿನ ಐದು ವರ್ಷಗಳ ಅವಧಿಯಲ್ಲಿ ತಿಂಗಳಿಗೆ ಸರಾಸರಿ ಮತದಾರರ ನೋಂದಣಿ ಕೇವಲ 71,116 ಆಗಿದ್ದು, ಅದರ ಹಿಂದಿನ 2014–2019ರ ಐದು ವರ್ಷಗಳಲ್ಲಿ ಕೇವಲ 1,31,302 ಮಾತ್ರ. ಈ ಸೇರ್ಪಡೆಗಳನ್ನು ಆಳುವ ಬಿಜೆಪಿ ನೇತೃತ್ವದ ಕೂಟದ ಮತಗಳನ್ನು ಹಿಗ್ಗಿಸುವ ಆಶಯದಿಂದ ಮಾಡಲಾಗಿದೆ ಎಂಬ ದಾವೆಯನ್ನು ಇದು ದೃಢೀಕರಿಸುತ್ತದೆ. ಇದುವರೆಗೂ, ಹಲವು ಬಾರಿ ಆಗ್ರಹಿಸಿದರೂ, ಈ ಸೇರ್ಪಡೆಗಳ ದಸ್ತಾವೇಜುಗಳನ್ನು ಒದಗಿಸಿಲ್ಲ.

ಇದರ ಜೊತೆಗೆ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್ ಮತ್ತು ಅಸ್ಸಾಂಗಳಲ್ಲಿ ಚುನಾವಣೆ ನಡೆಸುವ ಚುನಾವಣಾ ಅಧಿಕಾರಿಗಳ (ಆರ್‌ಒ) ಪ್ರಶ್ನಾರ್ಹ ಮತ್ತು ಪಕ್ಷಪಾತದ ನಡವಳಿಕೆಗಳು ಕಂಡು ಬಂದಿದ್ದು, 56 ಕ್ಷೇತ್ರಗಳಿಂದ ದಾಖಲಿತ ದೂರುಗಳು ಬಂದಿವೆ. ಇನ್ನೂ ಕೆಟ್ಟ ಸಂಗತಿಯೆಂದರೆ, ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವುದನ್ನು ತಡೆಯಲು ರಾಜ್ಯ ಪೊಲೀಸ್ ವ್ಯವಸ್ಥೆಯನ್ನು ಬಳಸಿರುವುದು.

ಇನ್ನೊಂದು ಗಂಭೀರ ಲಕ್ಷಣವೆಂದರೆ, 2017ರಲ್ಲಿ ಪರಿಚಯಿಸಲಾದ ಮತ್ತು ಅಂತಿಮವಾಗಿ 2024ರ ಆರಂಭದಲ್ಲಿ ಭಾರತದ ಸುಪ್ರೀಂ ಕೋರ್ಟ್ ರದ್ದುಗೊಳಿಸಿದ ಸಂವಿಧಾನಬಾಹಿರ ಚುನಾವಣಾ ಬಾಂಡ್ ಯೋಜನೆಯ ಮೂಲಕ ಕಾರ್ಪೊರೇಟ್–ಬಿಜೆಪಿ ನಂಟಿನ ಲಜ್ಜೆಗೆಟ್ಟ ಸಾರ್ವಜನಿಕ ಪ್ರದರ್ಶನ. ಆಡಳಿತಾರೂಢ ಬಿಜೆಪಿ ಐದು ವರ್ಷಗಳಲ್ಲಿ ಚುನಾವಣಾ ಬಾಂಡ್‌ಗಳ ಮೂಲಕ ಪಡೆದ ನಿಧಿಗಳಲ್ಲಿ ಸುಮಾರು 8,500 ಕೋಟಿ ರೂ.ಗಳ ಅಗಾಧ ಪಾಲನ್ನು ಪಡೆದಿದ್ದರೂ, ಅದು ಅವಕಾಶದಲ್ಲಿ ಅಸಮತೆಯನ್ನು ಸೃಷ್ಟಿಸಿದರೂ, ಆಳುವ ಪಕ್ಷವು ಕಾನೂನುಬಾಹಿರ ರೀತಿಯಲ್ಲಿ ಸಂಪಾದಿಸಿದ ಈ ಹಣವನ್ನು ಹಿಂದಿರುಗಿಸಲು ಅಥವಾ ಅದರ ವೆಚ್ಚವನ್ನು ವಿವರಿಸಲು ಒತ್ತಾಯಿಸಲಾಗಿಲ್ಲ ಎಂದಿರುವ ಮಹಾಧಿವೇಶನದ ನಿರ್ಣಯ, ಇಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಚುನಾವಣಾ ಬಾಂಡ್‌ಗಳನ್ನು ಪ್ರಶ್ನಿಸುವಲ್ಲಿ ಪಕ್ಷದ ಮಹತ್ವದ ಪಾತ್ರವನ್ನು ನೆನಪಿಸಿಕೊಂಡಿದೆ.

ಮತದಾರ ಫೋಟೋ ಗುರುತು ಕಾರ್ಡನ್ನು ಆಧಾರ್ ಕಾರ್ಡ್‌ನೊಂದಿಗೆ ಜೋಡಿಸುವ ಆಯೋಗದ ಇತ್ತೀಚಿನ ಕ್ರಮವನ್ನು ಸಹ ತೀವ್ರವಾಗಿ ವಿರೋಧಿಸಬೇಕಾಗಿದೆ. ಏಕೆಂದರೆ ಇದು ಚುನಾವಣಾ ಪ್ರಕ್ರಿಯೆಯ ನಿಯಂತ್ರಣವನ್ನು –ಮತದಾರರ ಸೇರ್ಪಡೆ ಮತ್ತು ಅಳಿಸುವಿಕೆ– ಕೇಂದ್ರ ಸರ್ಕಾರದಿಂದ ನಿಯಂತ್ರಿಸಲ್ಪಡುವ ಯುಐಡಿಎಐ ಕೈಯಲ್ಲಿ ಇರಿಸುತ್ತದೆ. ಇದಲ್ಲದೆ, ಮತದಾರ ಫೋಟೋ ಗುರುತು ಕಾರ್ಡ್ ಪೌರತ್ವದ ಪುರಾವೆಯಾಗಿದ್ದರೆ, ಆಧಾರ್ ಕಾರ್ಡ್ ಕೇವಲ ಗುರುತಿನ ನೆಲೆಯಾಗಿದೆ.

ಈ ಎಲ್ಲಾ ಕಳವಳಕಾರೀ ಬೆಳವಣಿಗೆಗಳಿಂದಾಗಿ ಚುನಾವಣಾ ಆಯೋಗ ಉತ್ತರದಾಯಿಯಾಗಬೇಕು ಮತ್ತು ಮತದಾನದ ವೇಳೆಯಲ್ಲಿ ಪಾರದರ್ಶಕತೆಗೆ ಮರಳಬೇಕು ಎಂದು ಆಗ್ರಹಿಸುವ ಒಂದು ಸಾಮೂಹಿಕ ಜನಾಂದೋಲನಕ್ಕೆ ಪಕ್ಷವನ್ನು ಬದ್ಧಗೊಳಿಸುವುದು ಅಗತ್ಯವಾಗಿದೆ ಎಂದು ನಿರ್ಣಯ ಹೇಳಿದೆ. ಚುನಾವಣಾ ಆಯೋಗದ ಜವಾಬುದಾರಿಕೆಯನ್ನು ಖಚಿತಪಡಿಸಬೇಕು ಮತ್ತು ಎಲ್ಲಾ ದತ್ತಾಂಶಗಳನ್ನು ರಾಜಕೀಯ ವಿರೋಧ ಪಕ್ಷಗಳಿಗೆ ಮತ್ತು ಎಲ್ಲಾ ಭಾರತೀಯ ನಾಗರಿಕರಿಗೆ ಸತತವಾಗಿ ಮತ್ತು ಪಾರದರ್ಶಕವಾಗಿ ಲಭ್ಯವಾಗುವಂತೆ ಮಾಡಬೇಕು ಎಂದು ನಿರ್ಣಯ ಆಗ್ರಹಿಸಿದೆ.

ಆದ್ದರಿಂದ, ಚುನಾವಣಾ ವ್ಯವಸ್ಥೆಯಲ್ಲಿನ ದುರಾಚರಣೆಗಳು ಬಹಿರಂಗಗೊಳ್ಳುವಂತೆ ಮಾಡಲು ಮತ್ತು ಪ್ರತಿಯೊಬ್ಬ ಭಾರತೀಯ ಮತದಾರರು ಭಯ ಅಥವಾ ಆಮಿಷವಿಲ್ಲದೆ ತಮ್ಮ ಮತವನ್ನು ಚಲಾಯಿಸಲು ಪ್ರೋತ್ಸಾಹಿಸುವಂತೆ ಮಾಡಲು ಪ್ರಯತ್ನಗಳನ್ನು ತುರ್ತಾಗಿ ತೀವ್ರಗೊಳಿಸಬೇಕು ಎಂದು ಮಹಾಧಿವೇಶನ ನಿರ್ಧರಿಸಿದೆ. ಚುನಾವಣಾ ಆಯೋಗ ಸ್ವತಂತ್ರವಾಗಿ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಮತ್ತು ಚುನಾವಣೆಗಳಲ್ಲಿ ಸಮಾನ ಅವಕಾಶಗಳನ್ನು ಮತ್ತೆ ಒದಗಿಸಲು ಪ್ರಚಾರ–ಪ್ರಕ್ಷೋಭೆ ನಡೆಸಲು ಪಕ್ಷ ಬದ್ಧವಾಗಿದೆ ಎನ್ನುತ್ತ ಮಹಾಧಿವೇಶನ ದೇಶದಲ್ಲಿ ರಾಜಕೀಯ ಪ್ರಜಾಪ್ರಭುತ್ವವನ್ನು ರಕ್ಷಿಸಲು ಇದು ಅತ್ಯಗತ್ಯ ಮತ್ತು ಒಂದು ಪೂರ್ವ ಷರತ್ತು ಎಂಬುದರಲ್ಲಿ ಬೇರೆ ಮಾತಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ವಿಭಜನಕಾರಿ ಮತ್ತು ಅನ್ಯಾಯದ ವಕ್ಫ್ ತಿದ್ದುಪಡಿ ಕಾಯ್ದೆ... ಪುಟ 3 ರಿಂದ

ನಿರ್ಧರಿಸುವ ಅಧಿಕಾರವನ್ನು ಸರ್ವೇ ಆಯುಕ್ತರಿಂದ ಸರ್ಕಾರ ನೇಮಿಸಿದ ಕಂದಾಯ ಅಧಿಕಾರಿಗಳಿಗೆ ವರ್ಗಾಯಿಸುವ ಮೂಲಕ, ಸರ್ಕಾರವು ಪೂಜಾ ಸ್ಥಳಗಳು, ಶಿಕ್ಷಣ ಸಂಸ್ಥೆಗಳು, ಆರೋಗ್ಯ ಸೌಲಭ್ಯಗಳು ಮತ್ತು ವೃತ್ತಿಪರ ಕೇಂದ್ರಗಳನ್ನು ವಶಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ, ಈ ಮೂಲಕ ವಕ್ಫ್ ಆಸ್ತಿಗಳ ಮೇಲೆ ಅದರ ನಿಯಂತ್ರಣವನ್ನು ಕ್ರೋಢೀಕರಿಸಲಾಗುತ್ತದೆ.

ದೀರ್ಘಾವಧಿಯ ಬಳಕೆಯ ಮೂಲಕ ಐತಿಹಾಸಿಕವಾಗಿ ಸ್ಥಾಪಿತವಾದ ಸಾವಿರಾರು ವಕ್ಫ್ ಆಸ್ತಿಗಳ ನೋಂದಣಿ ಅಗತ್ಯ ಎನ್ನುವ ಹೊಸ ಆದೇಶವು ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸರ್ಕಾರದ ರಹಸ್ಯ ಕಾರ್ಯಸೂಚಿಯನ್ನು ಬಯಲು ಮಾಡುತ್ತದೆ.

ವಕ್ಫ್ ನ್ಯಾಯಮಂಡಳಿಯ ಅಧಿಕಾರವನ್ನು ಕಸಿದುಕೊಳ್ಳುವ ಮೂಲಕ, ವಕ್ಫ್ ಮಂಡಳಿಯನ್ನೇ ಅದು ಸೇವೆ ಸಲ್ಲಿಸುವ ಸಮುದಾಯದಿಂದ ದೂರ ಮಾಡಲಾಗುತ್ತದೆ.

ಈ ತಿದ್ದುಪಡಿಗಳ ಮೂಲಕ, ಕೇಂದ್ರ ಸರ್ಕಾರವು ಮುಸ್ಲಿಮರ ಹಕ್ಕುಗಳನ್ನು ನಿರ್ಮೂಲನೆ ಮಾಡುವ ತನ್ನ ಕಾರ್ಯಸೂಚಿಯನ್ನು ಮುಂದಿಡುತ್ತಿದೆ, ಇದು ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ)ಯಲ್ಲಿನ ಕೆಲವು ವಿಭಾಗಗಳನ್ನು ಹೊರಗಿಡುವ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ.

ದೇಶದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವದ ಹಂದರವನ್ನು ಕಾಪಾಡಿಕೊಳ್ಳಲು, ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಮನಸ್ಸಿನ ನಾಗರಿಕರು ಈ ವಿಭಜನಕಾರಿ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲು ಒಗ್ಗೂಡಬೇಕು ಎಂದು ಸಿಪಿಐ(ಎಂ) ಮಹಾಧಿವೇಶನ ಹೇಳಿದೆ.





ಉತ್ಸಾಹದಿಂದ ಆರಂಭವಾದ ಸಿಪಿಐ(ಎಂ) 24ನೇ ಅಖಿಲ ಭಾರತ ಮಹಾಧಿವೇಶನ

ಮಧುರೈ– ಏಪ್ರಿಲ್ 2: ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 24 ನೇ ಸಮ್ಮೇಳನವು ಏಪ್ರಿಲ್ 2ರಂದು ಮದುರೈನ ತಮುಕ್ಕಂ ಮೈದಾನದಲ್ಲಿ ಹಿಂದುತ್ವ ಕಾರ್ಯಸೂಚಿ ಮತ್ತು ನವ ಉದಾರವಾದಿ ಫ್ಯಾಸಿಸಂ ವಿರುದ್ಧದ ಹೋರಾಟವನ್ನು ಸಂಯೋಜಿಸುವ ಕರೆಯೊಂದಿಗೆ ಪ್ರಾರಂಭವಾಯಿತು.

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸಂಯೋಜಕರಾದ ಪ್ರಕಾಶ್ ಕಾರಟ್ ಅವರು ಸಮ್ಮೇಳನವನ್ನು ಉದ್ಘಾಟಿಸಿದರು.

ಸಿಪಿಎಂ ಪಾಲಿಟ್ ಬ್ಯೂರೋ ಸದಸ್ಯ ಮಾಣಿಕ್ ಸರ್ಕಾರ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, ಪಕ್ಷದ 24ನೇ ಮಹಾಧಿವೇಶನವು ಪ್ರತಿಗಾಮಿ ಶಕ್ತಿಗಳನ್ನು ಸೋಲಿಸಲು ಮತ್ತು ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯವನ್ನು ನಿರ್ಮಿಸುವತ್ತ ಸಾಗಲು ನಡೆಯುತ್ತಿರುವ ಹೋರಾಟದಲ್ಲಿ ಒಂದು ಮೈಲಿಗಲ್ಲಾಗಲಿದೆ ಎಂದು ಹೇಳಿದರು.

ಕೇಂದ್ರ ಸಮಿತಿ ಸದಸ್ಯ ಕೆ.ಬಾಲಕೃಷ್ಣನ್ ತಮ್ಮ ಸ್ವಾಗತ ಭಾಷಣದಲ್ಲಿ, ಈ ಮಹಾಧಿವೇಶನವು ದ್ವೇಷದ ರಾಜಕೀಯದಲ್ಲಿ ತೊಡಗಿರುವ ಶಕ್ತಿಗಳನ್ನು ಪ್ರತ್ಯೇಕಿಸಲು ಮತ್ತು ಕಾರ್ಪೊರೇಟ್ ಪರ, ನವ–ಉದಾರವಾದಿ ಆರ್ಥಿಕ ನೀತಿಗಳನ್ನು ಹಿಂದಕ್ಕೆ ತಳ್ಳಲು ಹಕ್ಕುಗಳ ಕಾರ್ಯತಂತ್ರಗಳನ್ನು ರೂಪಿಸಲಿದೆ ಎಂದು ಹೇಳಿದರು.

ಸೌಹಾರ್ದ ಸಂದೇಶಗಳನ್ನು ನೀಡಿ ಮಾತನಾಡಿದ ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜಾ, ಸಿಪಿಐಎಂಎಲ್(ಲಿಬರೇಷನ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ, ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ, ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ಜಿ.ದೇವರಾಜನ್ ಅವರುಗಳು, ಬಿಜೆಪಿ–ಆರೆಸ್ಸೆಸ್ ವಿರುದ್ಧ ಹೋರಾಡಲು, ಪ್ರತ್ಯೇಕಿಸಲು ಮತ್ತು ಸೋಲಿಸಲು ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸುವ ಅಗತ್ಯತೆಯ ಬಗ್ಗೆ ಒತ್ತಿ ಹೇಳಿದರು.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಪೊಲಿಟ್ ಬ್ಯೂರೋ ಸದಸ್ಯರಾದ ಬೃಂದಾ ಕಾರಟ್ ಮತ್ತು ಕರ್ನಾಟಕದ ಪ್ರತಿನಿಧಿಗಳೂ ಸೇರಿದಂತೆ ದೇಶಾದ್ಯಂತ ಬಂದಿರುವ ಪ್ರತಿನಿಧಿಗಳು ಈ ಉದ್ಘಾಟನಾ ಅಧಿವೇಶನದಲ್ಲಿ ಭಾಗವಹಿಸಿದ್ದರು.

ವೆನ್ಮಣಿ ಹುತಾತ್ಮರ ಸ್ಮಾರಕ ಧ್ವಜ

ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾದವು. ವೆನ್ಮಣಿ ಹುತಾತ್ಮರನ್ನು ಸ್ಮರಿಸುತ್ತಾ ಕಲಾವಿದರು ಹಾಡುಗಳನ್ನು ಹಾಡಿದರು. ವೆನ್ಮಣಿ ಹುತಾತ್ಮರ ಸ್ಮಾರಕ ಧ್ವಜವನ್ನು ಕೇಂದ್ರ ಸಮಿತಿ ಸದಸ್ಯರಾದ ಯು.ವಾಸುಕಿಯವರು ಸ್ವೀಕರಿಸಿ, ನಂತರ ಪಕ್ಷದ ಕೇಂದ್ರ ನಿಯಂತ್ರಣ ಆಯೋಗದ ಚೇರ್ಮನ್ ಎ.ಕೆ. ಪದ್ಮನಾಭನ್ ಅವರಿಗೆ ಹಸ್ತಾಂತರಿಸಲಾಯಿತು.

ಸೇಲಂ ಜೈಲಿನಲ್ಲಿ ಹುತಾತ್ಮರಾದವರ ಸ್ಮರಣಾರ್ಥ ಹುತಾತ್ಮರ ಸ್ಮಾರಕ ಜ್ಯೋತಿಯನ್ನು ತಂಡವೊಂದು ಪಾದಯಾತ್ರೆ ಮೂಲಕ ತಂದಿತು.

ಆ ನಂತರ, ಸಮ್ಮೇಳನದ ಉದ್ಘಾಟನೆಯ ಭಾಗವಾಗಿ ಹಿರಿಯ ನಾಯಕ ಬಿಮನ್ ಬಸು ಅವರು ಧ್ವಜಾರೋಹಣ ನೆರವೇರಿಸಿದರು. ನಂತರ, ಪಾಲಿಟ್‌ಬ್ಯುರೋ ಸದಸ್ಯರಾದ ಮಾಣಿಕ್ ಸರ್ಕಾರ್ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಅಧಿವೇಶನ ಪ್ರಾರಂಭವಾಯಿತು. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಕೆ.ಬಾಲಕೃಷ್ಣನ್ ಸ್ವಾಗತ ಭಾಷಣ ಮಾಡಿದರು.

ಮಧುರೈನ ಸಿಪಿಐ(ಎಂ) ಸಂಸದ ವೆಂಕಟೇಶನ್ ಅವರ ಧನ್ಯವಾದದೊಂದಿಗೆ ಉದ್ಘಾಟನಾ ಅಧಿವೇಶನವು ಕೊನೆಗೊಂಡಿತು. ನಂತರ ಧ್ವಜಾರೋಹಣ ಮಾಡಿದ ಬಿಮನ್ ಬಸು, ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾಣಿಕ್ ಸರ್ಕಾರ್, ಉದ್ಘಾಟನಾ ಭಾಷಣ ಮಾಡಿದ ಪ್ರಕಾಶ್ ಕಾರಟ್ ಅವರನ್ನು ಹಾಗೂ ಸೌಹಾರ್ದ ಸಂದೇಶಗಳನ್ನು ನೀಡಿದ ನಾಯಕರನ್ನು ಸ್ವಾಗತ ಸಮಿತಿಯು ಸನ್ಮಾನಿಸಿತು. ನಂತರ, ವೇದಿಕೆಯಲ್ಲಿದ್ದ ನಾಯಕರೆಲ್ಲರೂ ಕೈಹಿಡಿದು ಪರಸ್ಪರ ಶುಭಾಶಯ ಕೋರಿದರು. ಪ್ರತಿನಿಧಿಗಳ ಸಭೆ ಮಧ್ಯಾಹ್ನ ಒಂದು ಗಂಟೆಗೆ ಆರಂಭವಾಯಿತು.

ತಮಿಳುನಾಡಿನ ಪ್ರಮುಖ ಭಾಗಗಳಿಂದ ಹುತಾತ್ಮರ ಜ್ಯೋತಿಗಳು

ಹಲವು ರೀತಿಯ ದಾಳಿ ದಬ್ಬಾಳಿಕೆಗಳ ನಡುವೆಯೂ ಕಮ್ಯುನಿಸ್ಟರು ಬಲಿಷ್ಠವಾಗಿ ನಿಂತಿದ್ದೇವೆ ಎನ್ನುತ್ತಾರೆ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯ ಕೆ.ಬಾಲಕೃಷ್ಣನ್ ಅವರು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಪಾರ ತ್ಯಾಗಗಳನ್ನು ಮಾಡಿದ್ದಾರೆ. ಸ್ವಾತಂತ್ರ್ಯದ ನಂತರವೂ, ಜನರ ಮೂಲಭೂತ ಹಕ್ಕುಗಳು, ಪರಿಶಿಷ್ಟ ಜಾತಿಗಳು, ಬುಡಕಟ್ಟು ಜನಾಂಗದವರು, ರೈತರು ಮತ್ತು ಕೃಷಿ ಕಾರ್ಮಿಕರ ಹಕ್ಕುಗಳು, ಸಮಾಜದಲ್ಲಿ ಚಾಲ್ತಿಯಲ್ಲಿರುವ ಅಸ್ಪೃಶ್ಯತೆಯ ದೌರ್ಜನ್ಯಗಳು ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ಸೇರಿದಂತೆ ವಿವಿಧ ಸಮಸ್ಯೆಗಳಿಗಾಗಿ ಕಮ್ಯುನಿಸ್ಟರು ಹೋರಾಡುತ್ತಲೇ ಇದ್ದೇವೆ. ಅದಕ್ಕಾಗಿ ತೀವ್ರ ದಬ್ಬಾಳಿಕೆಯನ್ನು ಎದುರಿಸಿದ್ದೇವೆ. ಕಮ್ಯುನಿಸ್ಟ್ ಪಕ್ಷವನ್ನು ನಾಶಮಾಡಲು ಪೊಲೀಸರು ವಿವಿಧ ಪ್ರಯತ್ನಗಳನ್ನು ಮಾಡಿದರು. ಪಿತೂರಿ ಪ್ರಕರಣಗಳನ್ನು ದಾಖಲಿಸಲಾಯಿತು. ಅವೆಲ್ಲವನ್ನೂ ಮೀರಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಭವ್ಯವಾಗಿ ಬೆಳೆಯುತ್ತಿದೆ ಎನ್ನುತ್ತಾರೆ ಅವರು.

ಪಿತೂರಿ ಪ್ರಕರಣಗಳಿಗೆ ಹೆದರದ ಚಳುವಳಿ:

"ರೈತರು ಮತ್ತು ಕೃಷಿ ಕಾರ್ಮಿಕರು ಹೋರಾಟ ನಡೆಸುತ್ತಿದ್ದಾಗ ಅವರನ್ನು ತೀವ್ರವಾಗಿ ದಮನಿಸಲಾಯಿತು. ಕೃಷಿ ಜೀತದಾಳು ಪದ್ಧತಿಯ ವಿರುದ್ಧ ಮತ್ತು ಹೆಚ್ಚಿನ ವೇತನಕ್ಕಾಗಿ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ವೆನ್ಮಣಿಯಲ್ಲಿ 44 ಕೃಷಿ ಕಾರ್ಮಿಕರನ್ನು ಸುಟ್ಟುಹಾಕಲಾಯಿತು. ಭತ್ತದ ಪಿತೂರಿ ಪ್ರಕರಣ, ಮಧುರೈ ಪಿತೂರಿ ಪ್ರಕರಣ, ಚೆನ್ನೈ ಪಿತೂರಿ ಪ್ರಕರಣ. ತಂಜಾವೂರು ಪಿತೂರಿ ಪ್ರಕರಣ ಸೇರಿದಂತೆ ಅನೇಕ ಪಿತೂರಿ ಪ್ರಕರಣಗಳನ್ನು ದಾಖಲಿಸಲಾಯಿತು. ಜೈಲಿನೊಳಗೆ ಕಮ್ಯುನಿಸ್ಟರ ಮೇಲೆ ಪೊಲೀಸರು ಮತ್ತು ರೌಡಿಗಳು ತೀವ್ರ ದಾಳಿಗಳನ್ನು ನಡೆಸಿದರು. ಇಷ್ಟೆಲ್ಲಾ ಮಾಡುವುದರಿಂದ ಕಮ್ಯುನಿಸ್ಟ್ ಪಕ್ಷವನ್ನು ನಾಶಮಾಡಬಹುದು ಎಂದು ಅಂದಿನ ಆಡಳಿತಗಾರರು ಭಾವಿಸಿದ್ದರು. ಇದೆಲ್ಲದರ ಕಾರಣದಿಂದಾಗಿ ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಚಳುವಳಿ ಬಲವಾದ ಸಂಘಟನೆಯಾಗಿ ಹೊರಹೊಮ್ಮಿದೆ" ಎಂದು ಕೆ.ಬಾಲಕೃಷ್ಣನ್ ಹೆಮ್ಮೆಯಿಂದ ಹೇಳುತ್ತಾರೆ.

ಇದಕ್ಕೆ ಕಾರಣರಾದ ಹುತಾತ್ಮರನ್ನು ಸ್ಮರಿಸಲು ರಾಜ್ಯದ ಪ್ರಮುಖ ಭಾಗಗಳಿಂದ ಹುತಾತ್ಮರ ಜ್ಯೋತಿಗಳು ಮಧುರೈಗೆ ಬಂದವು. ಚೆನ್ನೈನಿಂದ ಸಿಂಗಾರವೇಲರ್ ಸ್ಮಾರಕ ಜ್ಯೋತಿ, ಸೇಲಂ ಜೈಲು ಹುತಾತ್ಮರು, ಚಿನ್ನಿಯಂಪಾಳಯಂ ಹುತಾತ್ಮರು, ವೆನ್ಮಣಿ ಹುತಾತ್ಮರು, ವಿದ್ಯಾರ್ಥಿ ಹುತಾತ್ಮರಾದ ಸೋಮಸುಂದರಂ–ಸೆಂಬುಲಿಂಗಂ ಮತ್ತು ಮಧುರೈನ ಹುತಾತ್ಮರ ಸ್ಮರಣಾರ್ಥ ಸಮ್ಮೇಳನ ನಡೆಯುವ ಮದುರೈಗೆ ತಮಿಳುನಾಡಿನಾದ್ಯಂತ ಜ್ಯೋತಿಯನ್ನು ತರಲಾಗಿತ್ತು.





ಜನತಾ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಕಡೆಗೆ: ಕಾಮ್ರೇಡ್ ಪ್ರಕಾಶ್ ಕಾರತ್ ಅವರ ಭಾಷಣ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 24ನೇ ಮಹಾಧಿವೇಶನದ ಉದ್ಘಾಟನಾ ಅಧಿವೇಶನದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯುರೊ ಸಂಯೋಜಕರಾದ ಕಾಮ್ರೇಡ್ ಪ್ರಕಾಶ್ ಕಾರಟ್ ಅವರ ಉದ್ಘಾಟನಾ ಭಾಷಣ.

ಪಕ್ಷದ ಮಹಾಧಿವೇಶನ ಎಂಬುದು ಒಂದು ಕಮ್ಯೂನಿಸ್ಟ್ ಪಕ್ಷದಲ್ಲಿನ ಅತ್ಯಂತ ಪ್ರಮುಖವಾದ, ಸರ್ವೋಚ್ಚ ವ್ಯವಸ್ಥೆ. ಈ ಐತಿಹಾಸಿಕ ಕ್ಷಣದಲ್ಲಿ, ಕಮ್ಯುನಿಸ್ಟ್ ಚಳವಳಿಯ ದಿಗ್ಗಜರಾದ ಪಿ.ರಾಮಮೂರ್ತಿ, ಕೆ.ಟಿ.ಕೆ. ತಂಗಮಣಿ, ಎನ್.ಶಂಕರಯ್ಯ ಮತ್ತು ಕೆ.ಪಿ. ಜಾನಕಿ ಅಮ್ಮಾಳ್ ಅವರನ್ನು ನಾವು ಸ್ಮರಿಸುತ್ತೇವೆ, ಇವರೆಲ್ಲರೂ ಮಧುರೈ ಮತ್ತು ತಮಿಳುನಾಡಿನಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ.

ಮಧುರೈನ ಕಮ್ಯುನಿಸ್ಟ್ ಇತಿಹಾಸ

1940ರಲ್ಲಿ ಮಧುರೈನಲ್ಲಿ ಕಮ್ಯೂನಿಸ್ಟ್ ಸಂಘಟನೆ ಬೇರೂರಿದ ಕಾಲದಿಂದ, ಅನೇಕ ತಲೆಮಾರುಗಳ ಕಮ್ಯುನಿಸ್ಟರು ಅವಿಶ್ರಾಂತವಾಗಿ ಶ್ರಮಿಸಿ, ಕಾರ್ಮಿಕರು ರೈತರು ಮತ್ತು ಕೃಷಿ ಕಾರ್ಮಿಕರ ನಡುವೆ ಪಕ್ಷ ಮತ್ತು ಚಳವಳಿಯನ್ನು ಕಟ್ಟಿದ್ದಾರೆ. ಆ ನಿಸ್ವಾರ್ಥ ಸಂಗಾತಿಗಳ ತ್ಯಾಗವನ್ನು ನಾವು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇವೆ. ಜನರ ಕಲ್ಯಾಣಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ಕಾಮ್ರೇಡ್ ಲೀಲಾವತಿ ಅವರ ಸ್ಮರಣಾರ್ಥ ನಾನು ಗೌರವ ಸಲ್ಲಿಸುತ್ತೇನೆ. ಅವರು ನಗರದ ಪುರಸಭೆ ಸದಸ್ಯರಾಗಿದ್ದಾಗ, 1997ರಲ್ಲಿ ಸ್ಥಳೀಯ ಕ್ರಿಮಿನಲ್ ಗ್ಯಾಂಗ್ ಅವರನ್ನು ಬರ್ಬರವಾಗಿ ಹತ್ಯೆ ಮಾಡಿತ್ತು.

ಕಾಮ್ರೇಡ್ ಸೀತಾರಾಮ್ ಯೆಚೂರಿ

ಈ ಪಕ್ಷದ ಸಮ್ಮೇಳನವು ನಮಗೆ ಒಂದು ದುಃಖಕರ ವಾತಾವರಣದಲ್ಲಿ ನಡೆಯುತ್ತಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸೀತಾರಾಂ ಯೆಚೂರಿ ಅವರ ಮಾರ್ಗದರ್ಶನದಲ್ಲಿ ಈ ಸಮಾವೇಶದ ಸಿದ್ಧತೆಗಳು ಪ್ರಾರಂಭವಾದವು, ಅವರು ಇಂದು ನಮ್ಮೊಂದಿಗಿಲ್ಲ. ಈ ಅನಿರೀಕ್ಷಿತ ನಷ್ಟವನ್ನು ಸಹಿಸಿಕೊಂಡು ಪೊಲಿಟ್ ಬ್ಯುರೊ ಮತ್ತು ಕೇಂದ್ರ ಸಮಿತಿಯು ಒಗ್ಗೂಡಿ 24ನೇ ಮಹಾಧಿವೇಶನವನ್ನು ಯಶಸ್ವಿಗೊಳಿಸಲು ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿವೆ. ಮಾರ್ಕ್ಸ್‌ವಾದದ ಸಿದ್ಧಾಂತ ಮತ್ತು ಆಚರಣೆಗೆ ಕಾಮ್ರೇಡ್ ಸೀತಾರಾಮ್ ನೀಡಿದ ವಿಶಿಷ್ಟ ಕೊಡುಗೆಗಳನ್ನು ನಾವು ಎಂದೆಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತೇವೆ.

ರಾಜಕೀಯ ತಂತ್ರಗಳ ದಿಕ್ಸೂಚಿ

ಪಕ್ಷದ ರಾಜಕೀಯ ಚಟುವಟಿಕೆಗಳಿಗೆ ಸರಿಯಾದ ದಿಕ್ಕನ್ನು ಸೂಚಿಸುವ ರಾಜಕೀಯ–ತಂತ್ರದ ಸಿದ್ಧಾಂತವನ್ನು ರೂಪಿಸುವುದು ಪಕ್ಷದ ಮಹಾಧಿವೇಶನದ ಪ್ರಾಥಮಿಕ ಕಾರ್ಯವಾಗಿದೆ. ಇದಕ್ಕಾಗಿ, ಇಂದಿನ ರಾಜಕೀಯ ಪರಿಸ್ಥಿತಿಯ ಆಳವಾದ ಸಾರ, ಆಳುವ ಸರ್ಕಾರ ಮತ್ತು ಪಕ್ಷದ ವರ್ಗಸ್ವರೂಪ ಮತ್ತು ಅಸ್ತಿತ್ವದಲ್ಲಿರುವ ವರ್ಗ ಶಕ್ತಿಗಳ ಸಮತೋಲನವನ್ನು ನಿಖರವಾಗಿ ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ಈ ಕಾರ್ಯವು ಕೆಲವೊಮ್ಮೆ ಸವಾಲಿನದ್ದಾಗಿರಬಹುದು. ಆದರೆ ಇಂದಿನ ದಿನಗಳಲ್ಲಿ ಇದು ತುಂಬಾ ಸ್ಪಷ್ಟವಾಗಿದೆ.

ಮೂರು ಸರಳ ಪ್ರಶ್ನೆಗಳು

ನಾವು ಮೂರು ಪ್ರಶ್ನೆಗಳನ್ನು ಕೇಳಬಹುದು:

(1) ಡೊನಾಲ್ಡ್ ಟ್ರಂಪ್ ಅವರ ಉತ್ತಮ ಸ್ನೇಹಿತ ಎಂದು ಯಾರು ಹೆಮ್ಮೆಪಡುತ್ತಾರೆ?

(2)ಗೌತಮ್ ಅದಾನಿ ಮತ್ತು ಮುಖೇಶ್ ಅಂಬಾನಿಯವರ ಆಪ್ತ ಸ್ನೇಹಿತ ಯಾರು?

(3)ಆರ್‌ಎಸ್‌ಎಸ್‌ಗೆ ಯಾರು ಸಂಪೂರ್ಣ ನಿಷ್ಠರಾಗಿದ್ದಾರೆ?

ಈ ಮೂರು ಪ್ರಶ್ನೆಗಳಿಗೆ ಒಂದೇ ಉತ್ತರವಿದೆ– ನರೇಂದ್ರ ಮೋದಿ ಮತ್ತು ಭಾರತೀಯ ಜನತಾ ಪಕ್ಷ (ಬಿಜೆಪಿ).

ಹಿಂದುತ್ವ–ಕಾರ್ಪೊರೇಟ್ ಮೈತ್ರಿಕೂಟ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು, ಅಮೇರಿಕ ಸಾಮ್ರಾಜ್ಯಶಾಹಿಯೊಂದಿಗೆ ಕೈಜೋಡಿಸಿರುವ ಹಿಂದುತ್ವ–ಕಾರ್ಪೊರೇಟ್ ಮೈತ್ರಿಯನ್ನು ಪ್ರತಿನಿಧಿಸುತ್ತದೆ. ಬಿಜೆಪಿ–ಆರ್‌ಎಸ್‌ಎಸ್ ಮತ್ತು ಅವರು ಬೆಂಬಲಿಸುವ ಈ ಹಿಂದುತ್ವ–ಕಾರ್ಪೊರೇಟ್ ಮೈತ್ರಿಯನ್ನು ಹೋರಾಡಿ ಸೋಲಿಸುವುದು ನಮ್ಮ ಆದ್ಯ ಕರ್ತವ್ಯ. ಈ ಸರಳ ತೀರ್ಮಾನದಿಂದ ಬಿಜೆಪಿ–ಆರ್‌ಎಸ್‌ಎಸ್ ಮೈತ್ರಿಯನ್ನು ಸಮರ್ಥವಾಗಿ ಎದುರಿಸುವುದು, ಅವರನ್ನು ಪ್ರತ್ಯೇಕಿಸುವುದು ಮತ್ತು ಬಲಪಂಥೀಯ ಪಲ್ಲಟವನ್ನು ತಡೆಯುವುದು ಹೇಗೆ ಎಂಬ ಬಹುಮುಖ್ಯ ಪ್ರಶ್ನೆಯು ಉದ್ಭವಿಸುತ್ತದೆ. ಮಾರ್ಕ್ಸ್‌ವಾದಿಗಳಾಗಿ, ಹಿಂದುತ್ವ ಶಕ್ತಿಗಳು ಇಂದು ಸಾಧಿಸಿರುವ ರಾಜಕೀಯ ಪ್ರಾಬಲ್ಯವು ಚುನಾವಣಾ ವಿಜಯಗಳಿಂದ ಮಾತ್ರ ಸಾಧಿಸಲ್ಪಟ್ಟಿಲ್ಲ ಎಂಬುದನ್ನು ನಾವು ಆಳವಾಗಿ ಅರ್ಥಮಾಡಿಕೊಂಡಿದ್ದೇವೆ. ಹಿಂದುತ್ವ ಶಕ್ತಿಗಳು ಸೈದ್ಧಾಂತಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ವೇದಿಕೆಗಳ ಮೇಲೆ ಬೀರುವ ಪ್ರಾಬಲ್ಯದ ಮೂಲಕವೂ ಇದನ್ನು ಸಾಧಿಸಲಾಗಿದೆ. ಇದಲ್ಲದೆ, ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ಅವರು ನಡೆಸುವ ಅಧಿಕಾರಶಾಹಿ ದಾಳಿಗಳ ಮೂಲಕವೂ ಈ ಪ್ರಾಬಲ್ಯವನ್ನು ಕಾಯ್ದುಕೊಳ್ಳಲಾಗುತ್ತದೆ.

ಬಹುಮುಖಿ ಹೋರಾಟವೊಂದೇ ಪರಿಹಾರ

ಈ ಸಮ್ಮೇಳನದಲ್ಲಿ ನಾವು ಅಳವಡಿಸಿಕೊಳ್ಳುವ ರಾಜಕೀಯ–ಯುದ್ಧತಂತ್ರದ ಸಿದ್ಧಾಂತವು ಬಿಜೆಪಿ–ಆರ್‌ಎಸ್‌ಎಸ್ ಮತ್ತು ಹಿಂದುತ್ವ ಶಕ್ತಿಗಳ ವಿರುದ್ಧ ಸಮಗ್ರ, ಬಹುಮುಖಿ ಹೋರಾಟವನ್ನು ಗಣನೆಗೆ ತೆಗೆದುಕೊಳ್ಳಬೇಕು. ಪಕ್ಷ ಮತ್ತು ಎಡಪಂಥೀಯರು ಜನರ ಜೀವನೋಪಾಯವನ್ನು ರಕ್ಷಿಸಲು ಮತ್ತು ನವ ಉದಾರವಾದಿ ನೀತಿಗಳ ದಾಳಿಯ ವಿರುದ್ಧ ವಿವಿಧ ಹೋರಾಟಗಳನ್ನು ನಡೆಸುತ್ತಿದ್ದಾರೆ. ಈ ಹೋರಾಟಗಳಲ್ಲಿ ಸಜ್ಜುಗೊಂಡ ಜನರು ಪ್ರತಿಗಾಮಿ ಮತ್ತು ವಿಭಜಕ ಹಿಂದುತ್ವ ಕೋಮುವಾದದ ವಿರುದ್ಧ ಗಂಭೀರ ಅಭಿಯಾನವನ್ನು ನಡೆಸಿದಾಗ ಮಾತ್ರ ನಿಜವಾದ ರಾಜಕೀಯೀಕರಣವನ್ನು ಸಾಧಿಸುತ್ತಾರೆ. ಹಿಂದುತ್ವ ಕೋಮುವಾದದ ವಿರುದ್ಧದ ಹೋರಾಟ ಮತ್ತು ನವ ಉದಾರವಾದಿ ನೀತಿಗಳ ವಿರುದ್ಧದ ಹೋರಾಟವನ್ನು ಒಗ್ಗೂಡಿಸುವುದು ಇಂದಿನ ಅನಿವಾರ್ಯತೆಯಾಗಿದೆ. ಬಿಜೆಪಿ ವಿರುದ್ಧ ಎಲ್ಲಾ ಜಾತ್ಯತೀತ ಶಕ್ತಿಗಳ ವಿಶಾಲ ಐಕ್ಯತೆಗಾಗಿ ನಾವು ಶ್ರಮಿಸುತ್ತಿರುವ ಈ ಸಮಯದಲ್ಲಿ, ನವ ಉದಾರವಾದಿ ತತ್ವಗಳ ಬಗ್ಗೆ ನಮ್ಮ ದೃಢ ನಿಲುವಿನಿಂದಾಗಿ, ಎಲ್ಲಾ ರೀತಿಯ ಹಿಂದುತ್ವ ಮತ್ತು ಬಹುಸಂಖ್ಯಾತ ಕೋಮುವಾದದ ವಿರುದ್ಧ ದೃಢವಾಗಿ ಮತ್ತು ರಾಜಿಯಿಲ್ಲದೆ ಹೋರಾಡಬಲ್ಲ ಏಕೈಕ ಸ್ಥಿರ ಶಕ್ತಿ ಎಡಪಕ್ಷಗಳು ಎಂಬುದನ್ನು ನಾವು ಆಳವಾಗಿ ನೆನಪಿನಲ್ಲಿಡಬೇಕು.

ನವ–ಫ್ಯಾಸಿಸಂನ ನೆರಳು

ಮೋದಿ ಸರ್ಕಾರವು ತನ್ನ ಮೂರನೇ ಅವಧಿಯಲ್ಲಿ, ಆರೆಸ್ಸೆಸ್ ಚಳುವಳಿಯ ಹಿಂದುತ್ವದ ಅಜೆಂಡಾವನ್ನು ಆಕ್ರಮಣಕಾರಿಯಾಗಿ ಮುಂದಕ್ಕೊಯ್ಯುತ್ತಿದೆ. ಅದೇ ರೀತಿ, ಈ ಆಕ್ರಮಣವು ನವ ಉದಾರವಾದಿ ನೀತಿಗಳನ್ನು ಮತ್ತು ಅಧಿಕಾರಶಾಹಿಯನ್ನು ಮತ್ತಷ್ಟು ಬಲಪಡಿಸುವುದನ್ನು ತನ್ನ ಮುಖ್ಯ ಗುರಿಗಳನ್ನಾಗಿ ಹೊಂದಿದೆ. ಈ ಕ್ರಿಯೆಗಳಲ್ಲಿ, ಅದು ನವ–ಫ್ಯಾಸಿಸಂನ ಕೆಲವು ಗುಣಲಕ್ಷಣಗಳನ್ನು ಪ್ರದರ್ಶಿಸುತ್ತದೆ. ಆರೆಸ್ಸೆಸ್‌ನ ಫ್ಯಾಸಿಸ್ಟ್ ಕಾರ್ಯಸೂಚಿಯನ್ನು ಜಾರಿಗೆ ತರುವುದರಲ್ಲಿ ಮುಸ್ಲಿಂ ಅಲ್ಪಸಂಖ್ಯಾತರನ್ನು ನಿರಂತರವಾಗಿ ಗುರಿಯಾಗಿಸಿಕೊಳ್ಳುವುದೂ ಸೇರಿದೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಸರ್ಕಾರಿ ಯಂತ್ರದ ಬೆಂಬಲದೊಂದಿಗೆ, ಹಿಂದುತ್ವ ಸಂಘಟನೆಗಳು ನಡೆಸುವ ಕೋಮು ಹಿಂಸಾಚಾರದಿಂದಾಗಿ ಅಲ್ಪಸಂಖ್ಯಾತರು ಹೇಳಲಾಗದಷ್ಟು ನೋವು ಅನುಭವಿಸುತ್ತಿದ್ದಾರೆ. ಮುಸ್ಲಿಂ ಸಮುದಾಯದ ವಿರುದ್ಧ ನಿರಂತರ ಹಿಂಸಾಚಾರ ಮತ್ತು ಬೆದರಿಕೆಯ ವಾತಾವರಣವು ಶಾಶ್ವತ ಕೋಮು ವಿಭಜನೆಯನ್ನು ಸೃಷ್ಟಿಸುವ ಮತ್ತು 'ಪ್ಯಾನ್–ಹಿಂದುತ್ವ' ಏಕತೆಯನ್ನು ಸ್ಥಾಪಿಸುವ ಉದ್ದೇಶಪೂರ್ವಕ ಪ್ರಯತ್ನದ ಭಾಗವಾಗಿದೆ.

ಕ್ರೋನಿ ಕ್ಯಾಪಿಟಲಿಸಂನ ಕ್ರೂರ ಮುಖ

ಮೋದಿ ಸರ್ಕಾರವು ಕ್ರೋನಿ ಕ್ಯಾಪಿಟಲಿಸಂಗೆ ಒಂದು ಪ್ರಮುಖ ಉದಾಹರಣೆಯಾಗಿದೆ. ದೊಡ್ಡ ಬಂಡವಾಳಶಾಹಿ ನಿಗಮಗಳ ಲಾಭವನ್ನು ಮತ್ತಷ್ಟು ಹೆಚ್ಚಿಸಲು ಹೊಸ ವಲಯಗಳು ಮತ್ತು ಹೊಸ ಮಾರ್ಗಗಳನ್ನು ತೆರೆಯಲು ಅದು ಶ್ರದ್ಧೆಯಿಂದ ಕೆಲಸ ಮಾಡುತ್ತಿದೆ. ಇದರ ಪರಿಣಾಮವಾಗಿ, ಆರ್ಥಿಕ ಅಸಮಾನತೆಯು ಅಭೂತಪೂರ್ವ ಮಟ್ಟಕ್ಕೆ ಹೆಚ್ಚಿದೆ, ಕೇವಲ ಒಂದು ಶೇಕಡಾ ಜನಸಂಖ್ಯೆಯು ದೇಶದ ಒಟ್ಟು ಸಂಪತ್ತಿನ 40 ಪ್ರತಿಶತವನ್ನು ಹೊಂದಿದೆ. ನಿರುದ್ಯೋಗವು ಅತಿರೇಕವಾಗಿದೆ, ವಿಶೇಷವಾಗಿ ಯುವಜನರಲ್ಲಿ; ಗುತ್ತಿಗೆ ಪದ್ಧತಿಯ ಮೂಲಕ ಕಾರ್ಮಿಕರ ಶ್ರಮವನ್ನು ಹೆಚ್ಚು ಶೋಷಣೆ ಮಾಡಲಾಗುತ್ತದೆ; ಮತ್ತು ಉದ್ಯಮದಲ್ಲಿ ಸೇರಿಸಲಾದ ಒಟ್ಟು ಮೌಲ್ಯದಲ್ಲಿ ವೇತನದ ಪಾಲು ಕುಸಿಯುತ್ತಲೇ ಇದೆ. ಹದಗೆಡುತ್ತಿರುವ ಕೃಷಿ ಬಿಕ್ಕಟ್ಟಿನಿಂದ ರೈತರು ಮತ್ತು ಕೃಷಿ ಕಾರ್ಮಿಕರ ಜೀವನೋಪಾಯವೂ ಪ್ರಶ್ನೆಯಾಗಿದೆ. ದುಡಿಯುವ ಜನರ ವರ್ಗ ಹೋರಾಟಗಳು ಮತ್ತು ಸಾಮಾನ್ಯ ಸಮಸ್ಯೆಗಳ ಹೋರಾಟಗಳು ಮುಂಬರುವ ದಿನಗಳಲ್ಲಿ ತೀವ್ರಗೊಳ್ಳುವುದರಿಂದ, ಆ ಹೋರಾಟಗಳಿಗೆ ಸರಿಯಾದ ರಾಜಕೀಯ ನಿರ್ದೇಶನವನ್ನು ನೀಡಲು ನಾವು ಸಂಪೂರ್ಣವಾಗಿ ಸಿದ್ಧರಾಗಿರಬೇಕು.

ಕಾರ್ಮಿಕ ವಿರೋಧಿ ಕಾನೂನುಗಳ ವಿರುದ್ಧ ಸಮರ

ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವ ನಾಲ್ಕು ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರಲು ಸರ್ಕಾರವು ಸಕ್ರಿಯವಾಗಿ ಪ್ರಯತ್ನಿಸುತ್ತಿದೆ. ಈ ಕಾರ್ಮಿಕ ವರ್ಗ ವಿರೋಧಿ ಕಾನೂನುಗಳ ವಿರುದ್ಧ ಒಗ್ಗೂಡಿ ಹೋರಾಡುವುದು ನಮ್ಮೆಲ್ಲರ ತುರ್ತು ಕರ್ತವ್ಯವಾಗಿದೆ.

ಈ ನಾಲ್ಕು ಕಾರ್ಮಿಕ ನಿಯಮಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಕೇಂದ್ರ ಕಾರ್ಮಿಕ ಸಂಘಗಳು ಮೇ 20 ರಂದು ಒಂದು ದಿನದ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿವೆ. ಎಡ ಪಕ್ಷಗಳು ಮತ್ತು ಎಲ್ಲಾ ವರ್ಗ ಮತ್ತು ಸಾರ್ವಜನಿಕ ಸಂಘಟನೆಗಳು ಮುಷ್ಕರವನ್ನು ಯಶಸ್ವಿಗೊಳಿಸಲು ಶಕ್ತಿಮೀರಿ ಶ್ರಮಿಸುತ್ತವೆ.

ಪ್ರಜಾಪ್ರಭುತ್ವದ ಮೇಲೆ ಸರ್ವಾಧಿಕಾರಿ ದಾಳಿ

ಲೋಕಸಭೆಯಲ್ಲಿ ಬಿಜೆಪಿ ತನ್ನ ಸ್ವಂತ ಬಹುಮತವನ್ನು ಕಳೆದುಕೊಂಡಿದ್ದರೂ ಮತ್ತು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು ಸಂಸತ್ತಿನ ಎರಡೂ ಸದನಗಳಲ್ಲಿ ಮೂರನೇ ಎರಡರಷ್ಟು ಬಹುಮತವನ್ನು ಗಳಿಸದಿದ್ದರೂ, ಭಾರತ ಸರ್ಕಾರ ಮತ್ತು ಸಂವಿಧಾನವನ್ನು ತನ್ನ ಇಚ್ಛೆಯಂತೆ ಬದಲಾಯಿಸುವ ಮೋದಿ ಸರ್ಕಾರದ ಅಧಿಕಾರಶಾಹಿ ಪ್ರಯತ್ನಗಳು ನಿಂತಿಲ್ಲ. ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಸಾಂವಿಧಾನಿಕ ತಿದ್ದುಪಡಿ ಮಸೂದೆಯು ಒಕ್ಕೂಟ ವ್ಯವಸ್ಥೆ ಮತ್ತು ರಾಜ್ಯಗಳ ಹಕ್ಕುಗಳ ಮೇಲಿನ ನೇರ ದಾಳಿಯಾಗಿದೆ. ಸಂಸತ್ತನ್ನು ನಿಯಂತ್ರಿಸಲು, ಉನ್ನತ ನ್ಯಾಯಾಂಗವನ್ನು ದುರ್ಬಲಗೊಳಿಸಲು ಮತ್ತು ಚುನಾವಣಾ ಆಯೋಗದ ಸ್ವಾತಂತ್ರ್ಯವನ್ನು ಕಡಿಮೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ವಿರೋಧ ಪಕ್ಷದ ನಾಯಕರ ವಿರುದ್ಧ ಸೇಡು ತೀರಿಸಿಕೊಳ್ಳಲು ಯುಎಪಿಎ ಮತ್ತು ಪಿಎಂಎಲ್ಎ ನಂತಹ ಕಠಿಣ ಕಾನೂನುಗಳನ್ನು ಬಳಸಲಾಗುತ್ತಿದೆ. ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಇಬ್ಬರು ಚುನಾಯಿತ ಮುಖ್ಯಮಂತ್ರಿಗಳನ್ನು ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ಹಾಕಲಾಗಿದೆ. ಅಧಿಕಾರಶಾಹಿ ಮತ್ತು ಕೇಂದ್ರೀಕರಣದ ಕಡೆಗೆ ಈ ಒಲವು ಒಕ್ಕೂಟ ತತ್ವ ಮತ್ತು ರಾಜ್ಯಗಳ ಹಕ್ಕುಗಳನ್ನು ತುಳಿಯುತ್ತದೆ. ಬಿಜೆಪಿಯೇತರ ರಾಜ್ಯ ಸರ್ಕಾರಗಳಿಗೆ ನಿಧಿ ಹಂಚಿಕೆ ಮಾಡುವಲ್ಲಿ ಸ್ಪಷ್ಟ ತಾರತಮ್ಯವಿದೆ.

ಪುಟ 10 ಕ್ಕೆ

ಜನರಿಗಾಗಿ ರಾಜಿಯಿಲ್ಲದ ಹೋರಾಟವು ಸಿಪಿಐ(ಎಂ)ನ ವಿಶಿಷ್ಟತೆ: – ಎನ್.ರಾಮ್

ಸೀತಾರಾಮ್ ಯೆಚೂರಿ ನಗರ (ಮಧುರೈ), ಏಪ್ರಿಲ್, 2– "ಚುನಾವಣಾ ಮೈತ್ರಿ ಲೆಕ್ಕಾಚಾರಗಳನ್ನು ಮೀರಿ ಜನರಿಗಾಗಿ ರಾಜಿಯಿಲ್ಲದ ಹೋರಾಟಗಳನ್ನು ನಡೆಸುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಶಿಷ್ಟತೆಯಾಗಿದೆ" ಎಂದು ಹಿರಿಯ ಪತ್ರಕರ್ತ ಎನ್. ರಾಮ್ ಶ್ಲಾಘಿಸಿದರು. ಸಿಪಿಐ(ಎಂ)ನ 24ನೇ ಅಖಿಲ ಭಾರತ ಸಮ್ಮೇಳನವು ಏಪ್ರಿಲ್ 2ರಂದು ಬುಧವಾರ ಮಧುರೈನಲ್ಲಿ ಅದ್ದೂರಿಯಾಗಿ ಪ್ರಾರಂಭವಾಯಿತು. ಇದಕ್ಕೂ ಮುನ್ನ ಮಂಗಳವಾರ ಸಂಜೆ ಹಿರಿಯ ಪತ್ರಕರ್ತ ಎನ್.ರಾಮ್ ಅವರು ಸಮ್ಮೇಳನ ಸಭಾಂಗಣದಲ್ಲಿ "ಜನರ ಪ್ರಜಾಪ್ರಭುತ್ವ ಹಾದಿ" ಇತಿಹಾಸದ ವಸ್ತು ಪ್ರದರ್ಶನ ಮತ್ತು ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದರು.

ಮಧುರೈನಲ್ಲಿ ನಡೆಯಲಿರುವ ಸಿಪಿಐ(ಎಂ)ನ 24ನೇ ಅಖಿಲ ಭಾರತ ಸಮ್ಮೇಳನವು ರಾಜಕೀಯವಾಗಿ ಮಹತ್ವಪೂರ್ಣವಾಗಿದೆ. ಕರಡು ರಾಜಕೀಯ ನಿರ್ಣಯದಲ್ಲಿ ಹಿಂದುತ್ವ–ಕಾರ್ಪೊರೇಟ್ ಮೈತ್ರಿಯು ನವ–ಫ್ಯಾಸಿಸ್ಟ್ ಲಕ್ಷಣಗಳನ್ನು ಹೊಂದಿದೆ ಎಂದು ಹೇಳಲಾಗಿದೆ. ಈ ಅಂಶವು ಬಹಳ ಮುಖ್ಯವಾಗಿದೆ. ಸಮ್ಮೇಳನದಲ್ಲಿ ಈ ಬಗ್ಗೆ ಚಿಂತನಶೀಲ ಚರ್ಚೆ ನಡೆಯಲಿದೆ. ಇದು ಸಮ್ಮೇಳನದ ಮುಖ್ಯ ವಿಷಯವೂ ಆಗಲಿದೆ. ಎಡಪಕ್ಷಗಳು ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಬಹುದು. ಒಕ್ಕೂಟ ತತ್ವದ ಪರಿಕಲ್ಪನೆ, ಕಾರ್ಮಿಕ ಸಂಘಟನೆಯ ಘೋಷಣೆಗಳು, ಕಾರ್ಮಿಕರ ಕಲ್ಯಾಣ ಹಕ್ಕುಗಳು, ಜನರಿಗೆ ಕಲ್ಯಾಣ ಯೋಜನೆಗಳನ್ನು ಒದಗಿಸುವುದು ಸೇರಿದಂತೆ ವಿವಿಧ ವಿಷಯಗಳನ್ನು ಎತ್ತುವ ಮೂಲಕ ನಿರಂತರ ಹೋರಾಟ ನಡೆಸುವವರು ಕಮ್ಯುನಿಸ್ಟರು ಎಂದರು. ಅವರು ತಮ್ಮ ನಿರಂತರ ಹೋರಾಟಕ್ಕೆ ಒಂದು ರೂಪವನ್ನೂ ನೀಡುತ್ತಾರೆ, ಹೋರಾಡುತ್ತಲೇ ಇರುತ್ತಾರೆ. ಇತರ ಪಕ್ಷಗಳಿಗೂ ಕಮ್ಯುನಿಸ್ಟರಿಗೂ ಇರುವ ವ್ಯತ್ಯಾಸವೇ ಇದು.

ಚುನಾವಣಾ ವಿಷಯಕ್ಕೆ ಸಂಬಂಧಿಸಿದಂತೆ ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿದ್ದರೂ, ಸಿಪಿಐ(ಎಂ) ತನ್ನದೇ ಆದ ಪಕ್ಷದ ಕಾರ್ಯಕ್ರಮವನ್ನು ಜಾರಿಗೆ ತರಲು, ಆಡಳಿತಗಾರರ ಮೇಲೆ ಒತ್ತಡ ಹೇರಲು ಪಕ್ಷವು ಬದ್ಧವಾಗಿದೆ. ಸ್ವಂತ ಪಕ್ಷದ ನಿಲುವು ಮುಖ್ಯ. ಅದೇ ವಿಶಿಷ್ಟವಾದದ್ದು. ಮಧುರೈನಲ್ಲಿ ನಡೆಯುತ್ತಿರುವ 24ನೇ ಸಮ್ಮೇಳನ ಬಹಳ ಮಹತ್ವದ್ದಾಗಿದೆ. ಕೋಲ್ಕತ್ತಾದಲ್ಲಿ ನಾಲ್ಕು ಅಖಿಲ ಭಾರತ ಸಮ್ಮೇಳನಗಳು ನಡೆದಿವೆ. 1953 ಮತ್ತು 1972ರಲ್ಲಿ ಮಧುರೈನಲ್ಲಿ ಅಖಿಲ ಭಾರತ ಸಮ್ಮೇಳನ ನಡೆದಿದ್ದವು. ಪ್ರಸ್ತುತ ಮೂರನೇ ಬಾರಿಗೆ ಮಧುರೈನಲ್ಲಿ ನಡೆಯುತ್ತಿದೆ. ಈ ಸಮ್ಮೇಳನದಲ್ಲಿ ತೆಗೆದುಕೊಳ್ಳುವ ನಿರ್ಣಯಗಳನ್ನು ಇಡೀ ದೇಶವೇ ಕಾತುರದಿಂದ ಕಾಯುತ್ತಿದೆ." ಎಂದು ಎನ್. ರಾಮ್ ಹೇಳಿದರು.

ಜನತಾ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಕಡೆಗೆ: ಕಾಮ್ರೆಡ್ ಪ್ರಕಾಶ್ ಕಾರತ್ ಅವರ ಭಾಷಣ....... ಪುಟ 9 ರಿಂದ

ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ

ಬಿಜೆಪಿ–ಆರ್‌ಎಸ್‌ಎಸ್ ಕೂಟವು, ಭಾರತದಲ್ಲಿ ಸಾಮಾಜಿಕ ಸಂಬಂಧಗಳ ಆಧಾರವಾಗಿರುವ ಜಾತಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಉಪ–ಜಾತಿ ಗುರುತುಗಳನ್ನು ಬಹಳ ಕೌಶಲ್ಯದಿಂದ ಬಳಸುತ್ತಿದೆ. ಮನುವಾದ ಮೌಲ್ಯಗಳು ಸಾಮಾಜಿಕ ಮತ್ತು ಸಾಂಸ್ಕೃತಿಕ ವೇದಿಕೆಗಳಲ್ಲಿ ಕಪಟವಾಗಿ ನುಸುಳುತ್ತಿವೆ. ಮಹಿಳೆಯರು, ದಲಿತರು ಮತ್ತು ಆದಿವಾಸಿಗಳ ಹಕ್ಕುಗಳ ಮೇಲೆ ದಾಳಿ ಮಾಡುವ ಮನುವಾದ–ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧದ ಹೋರಾಟವು ಹಿಂದುತ್ವ ಶಕ್ತಿಗಳ ವಿರುದ್ಧದ ನಮ್ಮ ಹೋರಾಟದ ಅವಿಭಾಜ್ಯ ಅಂಗವಾಗಿದೆ.

ಪಕ್ಷದ ಸ್ವತಂತ್ರ ಬಲವನ್ನು ಹೆಚ್ಚಿಸೋಣ

ಸಿಪಿಐ(ಎಂ)ನ ಸ್ವತಂತ್ರ ಬಲವನ್ನು ಹೆಚ್ಚಿಸುವುದು ಹೇಗೆ ಎಂಬ ಬಹುಮುಖ್ಯ ವಿಷಯದ ಕುರಿತು ಪಕ್ಷದ ಸಮಾವೇಶದಲ್ಲಿ ವಿವರವಾಗಿ ಚರ್ಚಿಸಲಾಗುವುದು. ದೇಶಾದ್ಯಂತ, ವರ್ಗ ಮತ್ತು ಸಾರ್ವಜನಿಕ ಸಮಸ್ಯೆಗಳ ಕುರಿತು ಸ್ಥಳೀಯ ಹೋರಾಟಗಳನ್ನು ಪ್ರಾರಂಭಿಸಲು, ತಳಮಟ್ಟದಲ್ಲಿ ಪಕ್ಷವನ್ನು ಬಲವಾಗಿ ಕಟ್ಟಲು ಮತ್ತು ಪಕ್ಷದ ಸಂಘಟನೆಯ ಕಾರ್ಯವನ್ನು ಸುಧಾರಿಸಲು ನಾವು ಸಂಘಟಿತ ಪ್ರಯತ್ನಗಳನ್ನು ಮಾಡಬೇಕು.

ಕೇರಳ ಮುಂಚೂಣಿಯಲ್ಲಿ

ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸುವಲ್ಲಿ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಸರ್ಕಾರ ಮುಂಚೂಣಿಯಲ್ಲಿದೆ. ಎಲ್‌ಡಿಎಫ್ ಸರ್ಕಾರ ಪರ್ಯಾಯ ನೀತಿಗಳನ್ನು ಜಾರಿಗೆ ತರಲು ಪ್ರಯತ್ನಿಸುತ್ತಿರುವುದರಿಂದ, ಅದು ಕೇಂದ್ರ ಸರ್ಕಾರದಿಂದ ತಾರತಮ್ಯ ಮತ್ತು ಹಗೆತನವನ್ನು ಎದುರಿಸುತ್ತಲೇ ಇದೆ. ಒಕ್ಕೂಟ ಮತ್ತು ರಾಜ್ಯಗಳ ಹಕ್ಕುಗಳನ್ನು ರಕ್ಷಿಸಲು ಎಲ್‌ಡಿಎಫ್ ಮತ್ತು ಕೇರಳದ ಜನರು ನಡೆಸಿದ ನಿರಂತರ ಹೋರಾಟವು ಒಕ್ಕೂಟದ ರಕ್ಷಣೆಯಲ್ಲಿ ಮತ್ತು ಅಧಿಕಾರಶಾಹಿಯ ವಿರುದ್ಧದ ಅಖಿಲ ಭಾರತ ಹೋರಾಟದಲ್ಲಿ ಪ್ರಮುಖ ಪ್ರೇರಕ ಶಕ್ತಿಯಾಗಿದೆ.

ಸಾಮ್ರಾಜ್ಯಶಾಹಿಯ ಹೊಸ ಅಧ್ಯಾಯ

ಡೊನಾಲ್ಡ್ ಟ್ರಂಪ್ ಆಳ್ವಿಕೆಯು ಅಮೇರಿಕನ್ ಸಾಮ್ರಾಜ್ಯಶಾಹಿ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಗುರುತಿಸುತ್ತದೆ. ಇದು ಸಾಮ್ರಾಜ್ಯಶಾಹಿ ಆಕ್ರಮಣದ ಅತ್ಯಂತ ಸ್ಪಷ್ಟ ರೂಪವಾಗಿದೆ. ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ನಿಕಟ ಮಿತ್ರರಾಷ್ಟ್ರಗಳ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು ಅವರ ಸಾಮಾನ್ಯ ನೀತಿಯಾಗಿದೆ. ಟ್ರಂಪ್, ಗಾಜಾದಿಂದ ಪ್ಯಾಲೆಸ್ಟೀನಿಯನ್ನರನ್ನು ಅಳಿಸಿಹಾಕುವ ನೆತನ್ಯಾಹು ಅವರ ಯೋಜನೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾರೆ. ಇದಲ್ಲದೆ, ಅವರು ವಿಶ್ವದ ಅನೇಕ ದಕ್ಷಿಣ ದೇಶಗಳ ವಿರುದ್ಧ ಆಕ್ರಮಣಕಾರಿ ಕ್ರಮಗಳನ್ನು ಮುಂದುವರೆಸಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿಯೂ ಸಹ, ಪ್ರಧಾನಿ ಮೋದಿ ಅವರು ಟ್ರಂಪ್‌ಗೆ ತಮ್ಮ ನಿಷ್ಠೆಯನ್ನು ವಿನಮ್ರವಾಗಿ ಬಹಿರಂಗವಾಗಿ ಘೋಷಿಸುತ್ತಾರೆ.

ರಾಷ್ಟ್ರೀಯ ಹಿತಾಸಕ್ತಿಯ ವಿರುದ್ಧ ರಾಜಿ

ಇದರ ದುಷ್ಪರಿಣಾಮಗಳು ನಮ್ಮ ದೇಶಕ್ಕೆ ಬಹಳ ಗಂಭೀರವಾಗಿರುತ್ತದೆ. ಮೋದಿ ಸರ್ಕಾರ ಈಗಾಗಲೇ ಸುಂಕಗಳು, ಇಂಧನ ಪೂರೈಕೆ ಮತ್ತು ಮಿಲಿಟರಿ ಉಪಕರಣಗಳ ಖರೀದಿಯ ಮೇಲಿನ ಭಾರತದ ಪ್ರಮುಖ ಹಿತಾಸಕ್ತಿಗಳನ್ನು ಬಹಿರಂಗವಾಗಿ ರಾಜಿ ಮಾಡಿಕೊಳ್ಳುತ್ತಿದೆ. ಮೋದಿ ಆಡಳಿತದ ಈ ಧೋರಣೆ ಮತ್ತು ಯುಎಸ್ ಜೊತೆಗಿನ ಅವರ ನಿಕಟ ಸಂಬಂಧದ ವಿರುದ್ಧ ಒಂದು ಹೊಸ ವಿರೋಧಿ ರಂಗವು ಹೊರಹೊಮ್ಮುತ್ತಿದೆ. ಭಾರತದ ಸಾರ್ವಭೌಮ ಹಿತಾಸಕ್ತಿಗಳಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದರ ವಿರುದ್ಧ ಸಿಪಿಐ(ಎಂ) ಮತ್ತು ಎಡಪಂಥೀಯರು ಯಾವಾಗಲೂ ಮುಂಚೂಣಿಯಲ್ಲಿರುತ್ತಾರೆ. ಸಾಮ್ರಾಜ್ಯಶಾಹಿಯ ಲೂಟಿ ಮತ್ತು ಬಿಜೆಪಿ ಆಡಳಿತಗಾರರ ಗುಲಾಮಗಿರಿಯ ಮನೋಭಾವದ ವಿರುದ್ಧ ಜನರನ್ನು ಸಜ್ಜುಗೊಳಿಸಲು ನಾವು ಮುಂದುವರಿಯುತ್ತೇವೆ.

ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ತೀವ್ರಗೊಳಿಸೋಣ

ಟ್ರಂಪ್ ನೇತೃತ್ವದ ಅಮೆರಿಕದ ಸಾಮ್ರಾಜ್ಯಶಾಹಿಯು ಆರ್ಥಿಕ ಮತ್ತು ವ್ಯಾಪಾರ ಯುದ್ಧಗಳು, ರಾಜಕೀಯ ಮತ್ತು ಮಿಲಿಟರಿ ಹಸ್ತಕ್ಷೇಪಗಳ ಮೂಲಕ ಪ್ರಪಂಚದಾದ್ಯಂತದ ದೇಶಗಳ ವಿರುದ್ಧ ಹೊಸ ದಾಳಿಗಳನ್ನು ನಡೆಸಲು ಸಜ್ಜಾಗಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ತಮ್ಮ ಸಾಮ್ರಾಜ್ಯಶಾಹಿ ವಿರೋಧಿ ಆಂದೋಲನಗಳನ್ನು ತೀವ್ರಗೊಳಿಸುವ ಮತ್ತು ಮೋದಿ ಸರಕಾರದ ಸಾಮ್ರಾಜ್ಯಶಾಹಿ ಪರ ನೀತಿಗಳನ್ನು ಬಯಲಿಗೆಳೆಯುವ ಸಮಯ ಈಗ ಬಂದಿದೆ.

ಪ್ಯಾಲೆಸ್ತೇನ್‌ಗೆ ನಮ್ಮ ಬೆಂಬಲ

ಈ ಸಮ್ಮೇಳನದ ವೇದಿಕೆಯಿಂದ, ಕಳೆದ 17 ತಿಂಗಳುಗಳಿಂದ ಇಸ್ರೇಲ್‌ನ ಕ್ರೂರ ಝಿಯೋನಿಸ್ಟ್ ಆಡಳಿತವು ನಡೆಸುತ್ತಿರುವ ನರಮೇಧವನ್ನು ಧೈರ್ಯದಿಂದ ಎದುರಿಸುತ್ತಿರುವ ಗಾಜಾದ ಪ್ಯಾಲೆಸ್ಟೀನಿಯನ್ ಜನರಿಗೆ ನಾವು ನಮ್ಮ ಸಂಪೂರ್ಣ ಬೆಂಬಲ ಮತ್ತು ಸಂಪೂರ್ಣ ಒಗ್ಗಟ್ಟನ್ನು ವ್ಯಕ್ತಪಡಿಸುತ್ತೇವೆ. ಪ್ಯಾಲೇಸ್ಟಿನಿಯನ್ ಸಮಸ್ಯೆಯ ಬಗ್ಗೆ ಮೋದಿ ಸರ್ಕಾರದ ನಾಚಿಕೆಗೇಡಿನ ವಿಶ್ವಾಸಘಾತುಕತನ ಮತ್ತು ಇಸ್ರೇಲ್‌ಗೆ ಅದರ ಕುರುಡು ಬೆಂಬಲವನ್ನು ನಾವು ಬಲವಾಗಿ ಖಂಡಿಸುತ್ತೇವೆ.

ಕ್ಯೂಬಾದ ಶೌರ್ಯಕ್ಕೆ ನಮನ

ಅರವತ್ತು ವರ್ಷಗಳಿಗೂ ಹೆಚ್ಚು ಕಾಲ ಅಮೆರಿಕ ಸಾಮ್ರಾಜ್ಯಶಾಹಿಯು ಹೇರಿದ ಅಮಾನವೀಯ ಆರ್ಥಿಕ ದಿಗ್ಬಂಧನವನ್ನು ವೀರಾವೇಶದಿಂದ ವಿರೋಧಿಸುತ್ತಿರುವ ಕ್ಯೂಬಾದ ಧೀರ ಜನರಿಗೆ ಮತ್ತು ಕ್ಯೂಬಾದ ಸರ್ಕಾರಕ್ಕೆ ನಾವು ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ನಾವು ಯಾವಾಗಲೂ ಸಮಾಜವಾದಿ ಕ್ಯೂಬಾದೊಂದಿಗೆ ದೃಢವಾಗಿ ನಿಲ್ಲುತ್ತೇವೆ.

ಎಡ ಐಕ್ಯತೆ ಅಗತ್ಯ

ಎಡ ಐಕ್ಯತೆಯನ್ನು ಬಲಪಡಿಸಲು ಮತ್ತು ಎಡ ರಾಜಕೀಯ ಹಸ್ತಕ್ಷೇಪವನ್ನು ವಿಸ್ತರಿಸಲು ಇದು ಸರಿಯಾದ ಸಮಯ. ನವ ಉದಾರವಾದಿ ಬಂಡವಾಳಶಾಹಿಯ ವಿರುದ್ಧದ ಏಕೈಕ ಸ್ಥಿರ ಶಕ್ತಿ ಎಡಪಂಥೀಯರು. ಅವರು ದುಡಿಯುವ ಜನರ ಹಿತಾಸಕ್ತಿಗಳ ನಿಷ್ಠಾವಂತ ರಕ್ಷಕರೂ ಆಗಿದ್ದಾರೆ. ಹಿಂದುತ್ವ ನವ–ಫ್ಯಾಸಿಸಂ ವಿರುದ್ಧ ಧೈರ್ಯದಿಂದ ಹೋರಾಡಲು ಮತ್ತು ಎದುರಿಸಲು ಸೈದ್ಧಾಂತಿಕ ಸಂಪನ್ಮೂಲಗಳು ಮತ್ತು ಆತ್ಮವಿಶ್ವಾಸವನ್ನು ಹೊಂದಿರುವುದು ಎಡಪಕ್ಷಗಳು ಮಾತ್ರ. ನಮ್ಮ ದೇಶದ ಮೇಲೆ ಸಾಮ್ರಾಜ್ಯಶಾಹಿ ವಿನ್ಯಾಸಗಳ ವಿರುದ್ಧದ ಹೋರಾಟವನ್ನು ಮುನ್ನಡೆಸುವ ಸಾಮರ್ಥ್ಯ ಎಡಪಕ್ಷಗಳಿಗೆ ಇದೆ. ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ನಿರ್ಮಿಸಲು ಎಲ್ಲಾ ಎಡ ಶಕ್ತಿಗಳೊಂದಿಗೆ ಕೆಲಸ ಮಾಡುವುದನ್ನು ಸಿಪಿಐ(ಎಂ) ಮುಂದುವರಿಸುತ್ತದೆ.

ಜಾತ್ಯತೀತ ಶಕ್ತಿಗಳೊಂದಿಗೆ ಕೈಜೋಡಿಸೋಣ

ಬಿಜೆಪಿ–ಆರ್‌ಎಸ್‌ಎಸ್‌ಗೆ ವಿರುದ್ಧದ ಹೋರಾಟ ಯಶಸ್ವಿಯಾಗಬೇಕಾದರೆ, ಹೆಚ್ಚು ವಿಶಾಲವಾದ ಏಕತೆಯನ್ನು ನಿರ್ಮಿಸಲು ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಕೈಜೋಡಿಸುವ ತನ್ನ ದೃಢ ನಿಲುವನ್ನು ಸಿಪಿಐ(ಎಂ) ಪುನರುಚ್ಚರಿಸುತ್ತದೆ.

ಮಧುರೈನಿಂದ ಒಕ್ಕೊರಲಿನ ಧ್ವನಿ

ಮಧುರೈನಿಂದ ಈ ಶಕ್ತಿಯುತ ಕರೆ ಸ್ಪಷ್ಟವಾಗಿ ಪ್ರತಿಧ್ವನಿಸಲಿ:

ಪ್ರತಿಗಾಮಿತ್ವದ ಕರಾಳ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಎಲ್ಲಾ ಎಡ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಶಕ್ತಿಗಳು ಒಂದಾಗಬೇಕು.

ಜಾತ್ಯತೀತ, ಪ್ರಜಾಪ್ರಭುತ್ವ ಮತ್ತು ಪ್ರಗತಿಪರ ನೆಲೆಯಲ್ಲಿ 'ನವ ಭಾರತ'ವನ್ನು ಕಟ್ಟಲು ನಾವೆಲ್ಲರೂ ಒಗ್ಗೂಡಿ ಕೆಲಸ ಮಾಡೋಣ.

ಜನತಾ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಕಡೆಗೆ ಮುನ್ನಡೆಯೋಣ.

ಒಕ್ಕೂಟ ತತ್ವ ಭಾರತದ ಶಕ್ತಿ......... ಪುಟ 16 ರಿಂದ

ನಿರ್ಮಾಣದತ್ತ ಹೆಜ್ಜೆಗಳೆಂದು ಪರಿಗಣಿಸಲಾಗಿದೆ.

ಫ್ಯಾಸಿಸ್ಟ್ ಬಿಜೆಪಿ ಆಡಳಿತದ ವಿರುದ್ಧದ ಹೋರಾಟದಲ್ಲಿ ಒಟ್ಟಾಗಿದ್ದೇವೆ: ಎಂ.ಕೆ.ಸ್ಟಾಲಿನ್

ಸಿಪಿಐ(ಎಂ)ನ ಮಾಜಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರ ಕೊಡುಗೆಗಳನ್ನು ಸ್ಮರಿಸಿದ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, "ಬಿಜೆಪಿ ಮತ್ತು ಸಂಘಪರಿವಾರ ಸಂಘಟನೆಗಳ ವಿರುದ್ಧದ ಹೋರಾಟದಲ್ಲಿ ಒಂದಾಗಲು ಪ್ರಜಾಪ್ರಭುತ್ವ ಶಕ್ತಿಗಳಿಗೆ ಕರೆ ನೀಡಿದರು.

"ಆಳುವ ಪಕ್ಷಕ್ಕೆ ಒಕ್ಕೂಟ ತತ್ವದ ಬಗ್ಗೆ ಅಲರ್ಜಿ ಇದೆ. 2012ರಲ್ಲಿ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರಿಯಾ ಆಯೋಗ ಮತ್ತು ಪುಂಚಿ ಆಯೋಗದ ಶಿಫಾರಸುಗಳನ್ನು ಅಂಗೀಕರಿಸುವಂತೆ ಕರೆನೀಡಿದ್ದರು. ನಾನು ಮೋದಿ ಅವರನ್ನು ಕೇಳುತ್ತೇನೆ, ನಿಮ್ಮ ಮೂರು ಅವಧಿಗಳಲ್ಲಿ, ಈ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ನೀವು ಏನು ಮಾಡಿದ್ದೀರಿ?" ಎಂದು ಸ್ಟಾಲಿನ್ ಪ್ರಶ್ನಿಸಿದರು.

ಪ್ರಧಾನ ಮಂತ್ರಿಗಳು "ಒಂದು ರಾಷ್ಟ್ರ, ಒಂದು ಚುನಾವಣೆ, ಒಂದು ಸಂಸ್ಕೃತಿ" ಎಂಬಿತ್ಯಾದಿ ಘೋಷಣೆಗಳ ಮೂಲಕ ರಾಜ್ಯಗಳು, ಜನಾಂಗ, ಭಾಷೆಗಳು, ಸಾಂಸ್ಕೃತಿಕ ವೈವಿಧ್ಯತೆ ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ನಾಶಮಾಡಿ ಒಬ್ಬ ಸರ್ವೋಚ್ಚ ನಾಯಕನೊಂದಿಗೆ ಏಕಘಟಕ ವ್ಯವಸ್ಥೆಯನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಇದು ಫ್ಯಾಸಿಸಂಗೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಇಂತಹ ಪ್ರಯತ್ನಗಳನ್ನು ನಾಶಮಾಡುವ ಒಂದೇ ದಾರಿಯೆಂದರೆ, ಸತತ ಪ್ರಚಾರ ಮತ್ತು ಕೇಂದ್ರದಲ್ಲಿ ಆಳ್ವಿಕೆಯನ್ನು ಬದಲಿಸುವುದು. ನಾವು (ಡಿಎಂಕೆ) ಮತ್ತು ಸಿಪಿಐ(ಎಂ) ಫ್ಯಾಸಿಸ್ಟ್ ಬಿಜೆಪಿ ಆಡಳಿತದ ವಿರುದ್ಧದ ಹೋರಾಟದಲ್ಲಿ ಒಟ್ಟಾಗಿದ್ದೇವೆ." ಎಂದು ಅವರು ಹೇಳಿದರು.

ಭಾರತೀಯ ಒಕ್ಕೂಟಕ್ಕೆ ಬೆದರಿಕೆ: ಎಂ.ಸಿ. ಸುಧಾಕರ್

ಕರ್ನಾಟಕದ ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ತಮ್ಮ ಭಾಷಣದಲ್ಲಿ, "ದಕ್ಷಿಣದ ಎಲ್ಲಾ ರಾಜ್ಯಗಳು ಅನ್ಯಾಯಕ್ಕೆ ಒಳಗಾಗಿವೆ. ನಾವು ಒಟ್ಟಾಗಿ ಹೋರಾಡಬೇಕಾಗಿದೆ. ನ್ಯಾಯಕ್ಕಾಗಿ ನಮ್ಮ ಕೂಗನ್ನು ಸಾಮೂಹಿಕವಾಗಿ ವ್ಯಕ್ತಪಡಿಸಲು ನಾವು ಇಲ್ಲಿದ್ದೇವೆ. ಸಹಕಾರಿ ಒಕ್ಕೂಟದ ನೀತಿ ಒಂದು ಆಯ್ಕೆಯಲ್ಲ. ಇದು ನಮ್ಮ ಸಂವಿಧಾನದ ಆತ್ಮ. ಇದು ಕೇವಲ ನೀತಿ ವಿಷಯವಲ್ಲ. ಇದು ಭಾರತೀಯ ಒಕ್ಕೂಟಕ್ಕೆ ಬೆದರಿಕೆ" ಎಂದು ಹೇಳಿದರು.

ಸಂಘಪರಿವಾರದ ಕೋಮು ಧ್ರುವೀಕರಣದ ದುಷ್ಟ ಪ್ರಯತ್ನಗಳ ವಿರುದ್ಧ ವ್ಯಾಪಕ ಅಭಿಯಾನ–ಸಿಪಿಐ(ಎಂ) ಮಹಾಧಿವೇಶನದ ಕರೆ

ದೇಶದ ವಿವಿಧ ಭಾಗಗಳಲ್ಲಿ ಆರ್‌ಎಸ್‌ಎಸ್–ಬಿಜೆಪಿ ಮತ್ತು ಸಂಘಪರಿವಾರ ನಡೆಸುತ್ತಿರುವ ಕೋಮುವಾದಿ ದಾಳಿಗಳ ಸರಣಿ ತೀವ್ರಗೊಂಡಿದೆ ಎಂದಿರುವ ಸಿಪಿಐ(ಎಂ)ನ 24 ನೇ ಮಹಾಧಿವೇಶನ, ಅದನ್ನು ಖಂಡಿಸುತ್ತ, ಇವು ಕೋಮುವಾದಿ ದ್ವೇಷದ ಆಧಾರದ ಮೇಲೆ ಸಮಾಜವನ್ನು ಧ್ರುವೀಕರಿಸುವ ಅದರ ಅವಿರತ ಅಭಿಯಾನದ ಭಾಗ ಎಂದು ಹೇಳಿದೆ.

24 ನೇ ಮಹಾಧಿವೇಶನದ ನಿರ್ಣಯ

ಬಹುಸಂಖ್ಯಾಕ ಸಮುದಾಯದಲ್ಲಿ ತನ್ನ ಹಿಂದುತ್ವ ಕಾರ್ಯಸೂಚಿಗೆ ಬೆಂಬಲವನ್ನು ಕಾಯ್ದುಕೊಳ್ಳಲು ಮತ್ತು ಬಲಪಡಿಸಲು ಮತ್ತು ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲೂ ಇರುವ ಬಿಜೆಪಿ ಸರ್ಕಾರಗಳ ವೈಫಲ್ಯಗಳು ಹೊತ್ತಿಸುತ್ತಿರುವ ಹೆಚ್ಚೆಚ್ಚು ಅಸಮಾಧಾನವನ್ನು ನಿವಾರಿಸಲು ಇದೊಂದೇ ಮಾರ್ಗ ಎಂದೇ ಸಂಘಪರಿವಾರ ತಿಳಿದುಕೊಂಡಿದೆ ಎಂದು 24ನೇ ಮಹಾಧಿವೇಶನ ಎಪ್ರಿಲ್ 3ರಂದು ಅಂಗೀಕರಿಸಿರುವ ನಿರ್ಣಯ ಹೇಳುತ್ತದೆ.

ಆದ್ದರಿಂದ, ಈ ಹಿಂದೆ ಬಳಸಲಾಗಿದ್ದ ಪ್ರಶ್ನೆಗಳ ಜೊತೆಗೆ ಹೊಸ ಪ್ರಶ್ನೆಗಳನ್ನು ಎತ್ತುವ ಧ್ರುವೀಕರಣದ ಕೋಮುವಾದಿ ಅಭಿಯಾನಗಳ ರಭಸವನ್ನು ನಾವು ನೋಡುತ್ತಿದ್ದೇವೆ ಎಂದಿರುವ ನಿರ್ಣಯ ಮುಂದುವರೆದು ಹೀಗೆ ಹೇಳಿದೆ:

ರಾಮನವಮಿ ಮತ್ತು ಹನುಮಾನ್ ಜಯಂತಿಯಂತಹ ಹಿಂದೂ ಹಬ್ಬಗಳನ್ನು ಬಳಸಿಕೊಂಡು ಮುಸ್ಲಿಮರ ಮೇಲೆ ಅವರ ಪ್ರದೇಶಗಳಲ್ಲಿ ಮತ್ತು ಮಸೀದಿಗಳ ಬಳಿ ದಾಳಿಗಳು ಹೆಚ್ಚಾಗುತ್ತಿವೆ. ರಂಜಾನ್ ತಿಂಗಳ ಒಂದು ಶುಕ್ರವಾರದಂದು ಬಂದಿರುವ ಹೋಳಿ ಹಬ್ಬದಂದು ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಬೆದರಿಕೆಗಳು ಮತ್ತು ದಂಡನಾತ್ಮಕ ಕ್ರಮಗಳು ಒಮ್ಮೊಂದೊಮ್ಮೆಲೇ ಹೆಚ್ಚಿರುವುದು ಕಂಡುಬಂತು.

ಮಕ್ಕಳನ್ನು ಸಹ ಬಿಡಲಾಗುತ್ತಿಲ್ಲ ಎಂಬುದು ಇತ್ತೀಚಿನ ದಾಳಿಗಳ ಒಂದು ಅತ್ಯಂತ ಕಳವಳಕಾರಿ ಲಕ್ಷಣ. ಇತ್ತೀಚೆಗೆ ರಾಜಸ್ಥಾನದ ಅಲ್ವಾರ್‌ನಲ್ಲಿ ಒಂದು ತಿಂಗಳ ಹೆಣ್ಣು ಮಗುವನ್ನು ಪೊಲೀಸರು ತುಳಿದು ಕೊಂದರು ಮತ್ತು ಮಹಾರಾಷ್ಟ್ರದ ಮಾಲ್ವಾನ್‌ನಲ್ಲಿ 15 ವರ್ಷದ ಬಾಲಕನನ್ನು ಪಾಕಿಸ್ತಾನ ಪರ ಘೋಷಣೆಗಳನ್ನು ಕೂಗಿದ್ದಾನೆ ಎಂಬ ದಾರಿ ತಪ್ಪಿಸುವ, ಸಾಬೀತಾಗದ ಆರೋಪದ ಮೇಲೆ ಜೈಲಿಗೆ ಹಾಕಲಾಯಿತು.

ಇತಿಹಾಸವನ್ನು ವಿರೂಪಗೊಳಿಸಲು ಮತ್ತು ಮುಸ್ಲಿಂ ವಿರೋಧಿ ಪೂರ್ವಾಗ್ರಹ ಮತ್ತು ದ್ವೇಷವನ್ನು ಉಲ್ಬಣಗೊಳಿಸಲೆಂದು ವಿನ್ಯಾಸಗೊಳಿಸಲಾದ ಚಲನಚಿತ್ರಗಳನ್ನು ಬಿಜೆಪಿ ಸರ್ಕಾರಗಳು ಪ್ರಾಯೋಜಿಸುತ್ತಿವೆ. ಇದರಲ್ಲಿ ತೀರಾ ಇತ್ತೀಚಿನದು "ಛಾವಾ", ಇದು ಔರಂಗಜೇಬನನ್ನು ಮತ್ತು ಆ ಮೂಲಕ ಆತನ ಸಮುದಾಯಕ್ಕೆ ಸೇರಿದ ಎಲ್ಲಾ ಸದಸ್ಯರನ್ನು ರಕ್ಕಸರೆಂಬಂತೆ ಚಿತ್ರಿಸುತ್ತದೆ. ಮಹಾರಾಷ್ಟ್ರದ ಬಿಜೆಪಿ ಸಚಿವರು ಇದನ್ನು ಬಳಸಿಕೊಂಡು, ಯಾವಾಗಲೂ ಎಲ್ಲರನ್ನೂ ಒಳಗೊಳ್ಳುತ್ತ ಬಂದಿರುವ ಜಾತ್ರೆಗಳು ಮತ್ತು ಯಾತ್ರೆಗಳಿಂದ ಮುಸ್ಲಿಮರನ್ನು ಹೊರಗಿಡುವಂತೆ ಪ್ರೋತ್ಸಾಹಿಸಿದ್ದಾರೆ. ನಾಗಪುರದಲ್ಲಿ ನಡೆದ ಘರ್ಷಣೆಗಳು ಈ ಅಭಿಯಾನದ ಫಲಿತಾಂಶವಾಗಿದೆ, ಇದರಲ್ಲಿ ಅನೇಕ ಮುಸ್ಲಿಮರ ಬಂಧನಗಳು ನಡೆದವು ಮತ್ತು ಒಬ್ಬ ಮುಸ್ಲಿಂ ನಾಯಕನ ಮನೆಯ ಮೇಲೆ ಬುಲ್ಡೋಜರ್ ಹರಿಯ ಬಿಡಲಾಯಿತು.

ಇತ್ತೀಚಿನ ಅವಧಿಯಲ್ಲಿ ಆರ್‌ಎಸ್‌ಎಸ್ ಸದಸ್ಯರು ಮತ್ತು ಅವರ ಅನುಯಾಯಿಗಳು ಮಸೀದಿಗಳ ಮೇಲೆ, ಅವನ್ನು ದೇವಾಲಯಗಳನ್ನು ಕೆಡವಿ ನಿರ್ಮಿಸಲಾಗಿದೆ ಎಂದು ದಾಳಿಮಾಡುವ ಪ್ರಯತ್ನಗಳನ್ನು ಬೆಂಬಲಿಸುವಂತೆ ನ್ಯಾಯಾಲಯಗಳನ್ನು ಮುಂದೊತ್ತಲು ಪದೇ ಪದೇ ಪ್ರಯತ್ನಿಸಿರುವುದು ಕಂಡು ಬಂದಿದೆ. ಅತ್ಯಂತ ದುರದೃಷ್ಟದ ಸಂಗತಿಯೆಂದರೆ, ಅನೇಕ ಕೆಳ ನ್ಯಾಯಾಲಯಗಳು ಮತ್ತು ಭಾರತದ ಮಾಜಿ ಮುಖ್ಯ ನ್ಯಾಯಾಧೀಶರು ಡಿ.ವೈ. ಚಂದ್ರಚೂಡ್‌ರವರ ಟಿಪ್ಪಣಿಗಳು ಮತ್ತು ಆದೇಶಗಳು ಕೂಡ ಬೆಂಕಿಗೆ ತುಪ್ಪ ಸುರಿದವು. ಇದು ಅನೇಕ ಸ್ಥಳಗಳಲ್ಲಿ ಕೋಮು ಧ್ರುವೀಕರಣಕ್ಕೆ ಮತ್ತು ಐದು ಯುವ ಮುಸ್ಲಿಮರನ್ನು ಗುಂಡಿಕ್ಕಿ ಕೊಂದ ಸಂಭಲ್‌ನ ದುರಂತ ಘಟನೆಗಳಿಗೆ ಕಾರಣವಾಗಿದೆ. ಈಗ ಸಂಭಲ್‌ನಲ್ಲಿ ಲಕ್ಷಾಂತರ ಜನರು, ಮುಸ್ಲಿಮರಿಗಿಂತ ಹೆಚ್ಚಾಗಿ ಹಿಂದೂಗಳು ಶತಮಾನಗಳಿಂದ ಭಾಗವಹಿಸುತ್ತಿದ್ದ ಜಾತ್ರೆಯನ್ನು ಸಹ ರಾಷ್ಟ್ರವಿರೋಧಿ ವ್ಯಕ್ತಿಯ ಆಚರಣೆಗೆ ಅವಕಾಶ ನೀಡುವುದಿಲ್ಲ ಎಂಬ ಹೆಸರಿನಲ್ಲಿ ನಿಷೇಧಿಸಲಾಗಿದೆ. ಇದು ಅನೇಕ ಸಮುದಾಯಗಳನ್ನು ಒಟ್ಟುಗೂಡಿಸಿದ ಸಮ್ಮಿಶ್ರ ಆಚರಣೆಗಳ ಮೇಲಿನ ಒಂದು ಗಮನಾರ್ಹ ದಾಳಿಯಾಗಿದೆ.



ಉತ್ತರಾಖಂಡದ ಯುಸಿಸಿಯಂತಹ ಹೊಸ ಕಾನೂನುಗಳು ಮಹಿಳೆಯರು ಮತ್ತು ಯುವ ದಂಪತಿಗಳ ಹಕ್ಕುಗಳ ಮೇಲೆ ದಾಳಿ ಮಾಡುತ್ತಲೇ, ಮುಸ್ಲಿಂ ವೈಯಕ್ತಿಕ ಕಾನೂನುಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಿವೆ ಮತ್ತು ಮಹಿಳೆ ಒಬ್ಬ ಹಿಂದೂ ಆಗಿದ್ದು, ಪುರುಷ ಮುಸ್ಲಿಂ ಆಗಿರುವ ಅಂತರ್–ಧರ್ಮೀಯ ವಿವಾಹಗಳ ಮೇಲೆ ದಾಳಿಮಾಡುವ ಹೆಚ್ಚು ಕಠಿಣವಾದ ಮತಾಂತರ ವಿರೋಧಿ ಕಾನೂನುಗಳನ್ನು ಉತ್ತರ ಪ್ರದೇಶ, ಗುಜರಾತ್, ಮಧ್ಯಪ್ರದೇಶ ಇತ್ಯಾದಿ ಸರ್ಕಾರಗಳು ಅಂಗೀಕರಿಸಿವೆ. ಅಂತಹ ವಿವಾಹಗಳಲ್ಲಿ ತೊಡಗುವ ಪುರುಷರಿಗೆ ಮರಣದಂಡನೆ ವಿಧಿಸಬೇಕೆಂದು ಸಹ ಪ್ರಸ್ತಾಪಿಸಲಾಗುತ್ತಿದೆ.

ಸಿಪಿಐ(ಎಂ)ನ 24ನೇ ಮಹಾಧಿವೇಶನವು ಸಂಘಪರಿವಾರದ ಕೋಮು ಧ್ರುವೀಕರಣದ ದುಷ್ಟ ಪ್ರಯತ್ನದ ವಿರುದ್ಧ ಮತ್ತು ಆರೆಸ್ಸೆಸ್‌ನ ನಿಜವಾದ ಹಿಂದುತ್ವವಾದಿ ಕಾರ್ಯಸೂಚಿಯನ್ನು ಬಯಲಿಗೆಳೆಯಲು, ಮುಸ್ಲಿಮರು ಮತ್ತು ಇತರ ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ದಾಳಿಗಳ ವಿರುದ್ಧ ಪರಿಣಾಮಕಾರಿ ಅಭಿಯಾನಗಳನ್ನು ಆಯೋಜಿಸಲು ಪಕ್ಷದ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಈ ದಾಳಿಗಳನ್ನು ಬಲವಾಗಿ ಎದುರಿಸಲು ವ್ಯಾಪಕ ವಿಶಾಲ ಜನವಿಭಾಗಗಳನ್ನು ಮತ್ತು ಜಾತ್ಯತೀತ, ಪ್ರಜಾಪ್ರಭುತ್ವ ಸಂಘಟನೆಗಳನ್ನು ಅಭಿಯಾನಗಳಲ್ಲಿ ತೊಡಗಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಮಹಾಧಿವೇಶನ ಪಕ್ಷಕ್ಕೆ ಕರೆ ನೀಡಿದೆ.

ಕೇರಳದ ಪ್ರಜಾಸತ್ತಾತ್ಮಕ ಸಾಧನೆಗಳನ್ನು ಹರಡಲು, ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರವನ್ನು ರಕ್ಷಿಸಲು ಮತ್ತು ಒಕ್ಕೂಟ ಸರಕಾರದ ಕುತಂತ್ರಗಳನ್ನು ಬಯಲಿಗೆಳೆಯಲು, ಶಕ್ತಿಶಾಲಿಯಾಗಿ ಅಣಿನೆರೆಯಬೇಕು: 24ನೇ ಮಹಾಧಿವೇಶನದ ಕರೆ

ಹಿಂದುತ್ವ ಸಿದ್ಧಾಂತವನ್ನು ವಿರೋಧಿಸುವುದು ಮತ್ತು ಜಾತ್ಯತೀತತೆಯನ್ನು ಎತ್ತಿಹಿಡಿಯುವುದು ಹಾಗೂ ಅದೇ ಸಮಯದಲ್ಲಿ ಕೇಂದ್ರ ಸರ್ಕಾರದ ನವ ಉದಾರವಾದಿ ನೀತಿಗಳಿಗೆ ಪರ್ಯಾಯವನ್ನು ಒದಗಿಸುವುದು ಎಡ ಪ್ರಜಾಪ್ರಭುತ್ವವಾದಿ ರಂಗ (ಎಲ್‌ಡಿಎಫ್) ನೇತೃತ್ವದ ಕೇರಳದ ರಾಜ್ಯ ಸರ್ಕಾರದ ವಿಶಿಷ್ಟ ಲಕ್ಷಣ ಎಂದು ಪುನರುಚ್ಚರಿಸುತ್ತ, ಸಿಪಿಐ(ಎಂ)ನ 24ನೇ ಮಹಾಧಿವೇಶನ, ಕೇಂದ್ರದಲ್ಲಿರುವ ಬಿಜೆಪಿ–ಎನ್‌ಡಿಎ ಸರ್ಕಾರವು ರಾಜ್ಯದ ವಿರುದ್ಧ ವಾಸ್ತವಿಕವಾಗಿ ಆರ್ಥಿಕ ದಿಗ್ಬಂಧನವನ್ನೇ ವಿಧಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ ಎಂದು ಹೇಳಿದೆ. ದುರದೃಷ್ಟವಶಾತ್, ಕಾಂಗ್ರೆಸ್ ವಿರೋಧವೂ ಈ ಅಸ್ಥಿರಗೊಳಿಸುವ ಕಸರತ್ತುಗಳಲ್ಲಿ ಸೇರಿಕೊಂಡಿದೆ. ಈ ಹಿನ್ನೆಲೆಯಲ್ಲಿ ಕೇರಳದ ಎಲ್‌ಡಿಎಫ್ ಸರ್ಕಾರವನ್ನು ರಕ್ಷಿಸಲು ಅಣಿನೆರೆಯಬೇಕು ಎಂದು ಎಲ್ಲಾ ಪ್ರಜಾಪ್ರಭುತ್ವವಾದಿ ವಿಭಾಗಗಳಿಗೆ ಮನವಿ ಮಾಡುವ ಒಂದು ನಿರ್ಣಯವನ್ನು ಎಪ್ರಿಲ್ 3ರಂದು ಮಹಾಧಿವೇಶನ ಅಂಗೀಕರಿಸಿದೆ.



ಕೇರಳದಲ್ಲಿ ಅಧಿಕಾರಕ್ಕೆ ಬಂದ ಎಡ ಸರ್ಕಾರಗಳು ಸತತವಾಗಿ ಅನುಸರಿಸುತ್ತ ಬಂದಿರುವ ಪರ್ಯಾಯ ಅಭಿವೃದ್ಧಿ ನೀತಿಗಳು ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿಗೆ ಪುನರ್ವಿತರಣೆಯ ಕಾರ್ಯತಂತ್ರದ ಮೇಲೆ ಗಮನ ಕೇಂದ್ರೀಕರಿಸಿವೆ. ಭೂ ಸುಧಾರಣೆಗಳನ್ನು ಜಾರಿಗೆ ತರಲಾಗಿದೆ. ಕಾರ್ಮಿಕ ಸಂಘಗಳು ಮತ್ತು ಕನಿಷ್ಠ ವೇತನ ಕಾನೂನುಗಳು ಅತ್ಯಧಿಕ ವೇತನವನ್ನು ಖಚಿತಪಡಿಸಿವೆ. ಸರ್ಕಾರದ ನೀತಿಗಳು ಸಾರ್ವತ್ರಿಕ ಶಿಕ್ಷಣ, ಆರೋಗ್ಯಪಾಲನೆ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸಿವೆ. 2025–26ರಲ್ಲಿ ಸಂಪೂರ್ಣ ಬಡತನವನ್ನು ನಿರ್ಮೂಲನೆ ಮಾಡಲಾಗುವುದು. ಕೇರಳವು ತನ್ನ ಸಾಮಾನ್ಯ ನಾಗರಿಕರಿಗೆ ಘನತೆಯ ಮತ್ತು ಉತ್ತಮ ಜೀವನವನ್ನು ಖಚಿತಪಡಿಸಿದೆ.

ಕೇರಳವು ಸಾಮಾಜಿಕ ಮತ್ತು ಕಲ್ಯಾಣ ಸಾಧನೆಗಳಲ್ಲಿ ಭಾರತದಲ್ಲಿ ಅಗ್ರಣಿಯಾಗಿದೆ ಮತ್ತು ಕಳೆದ ಮೂರು ದಶಕಗಳಲ್ಲಿ ಅದರ ಜಿಡಿಪಿ ಬೆಳವಣಿಗೆಯು ದೇಶದ ಜಿಡಿಪಿ ಬೆಳವಣಿಗೆಗಿಂತ ಹೆಚ್ಚಾಗಿದೆ. ಪ್ರಸ್ತುತ ಅದು ವಿದ್ಯಾವಂತರಲ್ಲಿ ನಿರುದ್ಯೋಗದ ಸವಾಲನ್ನು ಪರಿಹರಿಸಲು ಪ್ರಯತ್ನಿಸುತ್ತಿದೆ. ಇದಕ್ಕೆ ಅರ್ಥವ್ಯವಸ್ಥೆಯ ತಾಂತ್ರಿಕ ನೆಲೆಯನ್ನು ಮುಂದುವರಿದ ವೈಜ್ಞಾನಿಕ ಜ್ಞಾನ ಮತ್ತು ಹೆಚ್ಚಿನ ಉತ್ಪಾದಕತೆಯ ಆಧಾರದ ಮೇಲೆ ಪರಿವರ್ತಿಸುವ ಅಗತ್ಯವಿದೆ. ಅದನ್ನು ಸಾಧಿಸಲು, ಕೇರಳದ ಜ್ಞಾನ ಮತ್ತು ಕೌಶಲ್ಯವನ್ನು ತೀವ್ರವಾಗಿ ಆಧರಿಸಿರುವ ಉದ್ದಿಮೆಗಳು ಆಕರ್ಷಕ ಹೂಡಿಕೆ ತಾಣವಾಗಬೇಕು. ಹೊಸ ಪೀಳಿಗೆಯ ನವೋದ್ಯಮಗಳು (ಸ್ಟಾರ್ಟ್–ಅಪ್) ವ್ಯಾಪಕ ಪ್ರಮಾಣದಲ್ಲಿ ಹುಟ್ಟಿಕೊಳ್ಳಬೇಕು. ಕೇರಳವು ಒಂದು ಜ್ಞಾನಾಧರಿತ ಅರ್ಥವ್ಯವಸ್ಥೆಯಾಗಬೇಕು.

24 ನೇ ಮಹಾಧಿವೇಶನದ ನಿರ್ಣಯ

ಪ್ರಸ್ತುತ ಎಲ್‌ಡಿಎಫ್ ಸರ್ಕಾರದ ಅಡಿಯಲ್ಲಿ ರಾಜ್ಯವು ಅಂತಹ ಪರಿವರ್ತನೆಗೆ ಇರುವ ಪ್ರಮುಖ ಅಡೆತಡೆಗಳನ್ನು ನಿವಾರಿಸಲು ಈ ಕೆಳಗಿನ ಉಪಕ್ರಮಗಳ ಮೂಲಕ ಪ್ರಮುಖ ಹೆಜ್ಜೆಗಳನ್ನು ಇಡುತ್ತಿದೆ:

(1) ಕೇರಳವನ್ನು ಒಂದು ಆಕರ್ಷಕ ಹೂಡಿಕೆ ತಾಣವನ್ನಾಗಿ ಮಾಡುವುದು.

(2) ವಿಶೇಷ ಎಸ್‌ಪಿವಿ(ವಿಶೇಷೋದ್ದೇಶ ವಾಹಕ)ಗಳಿಂದ ಬಜೆಟ್‌ನ ಆಚೆ ಸಂಪನ್ಮೂಲ ಕ್ರೋಢೀಕರಣದ ಮೂಲಕ ಮೂಲಸೌಕರ್ಯ ಕೊರತೆಯನ್ನು ನಿವಾರಿಸುವುದು.

(3) ಉನ್ನತ ಶಿಕ್ಷಣ ವಲಯವನ್ನು ಆಮೂಲಾಗ್ರವಾಗಿ ಉತ್ತಮಗೊಳಿಸುವುದು.

(4) ವಿದ್ಯಾರ್ಥಿಗಳು ಮತ್ತು ನಿರುದ್ಯೋಗಿಗಳಿಗೆ ಕೌಶಲ್ಯ ನೀಡಲು ಜ್ಞಾನ ಕೇರಳ ಜನತಾ ಅಭಿಯಾನವನ್ನು ಪ್ರಾರಂಭಿಸುವುದು.

ಈ ಮೇಲಿನ ಒಟ್ಟು ಚೌಕಟ್ಟಿನ ಪಲ್ಲಟದ ಅರ್ಥ ರಾಜ್ಯವು ತನ್ನ ಅಭಿವೃದ್ಧಿಯ ಪುನರ್ವಿತರಣಾ ಕಾರ್ಯತಂತ್ರದಿಂದ ದೂರ ಸರಿಯುತ್ತದೆ ಎಂದೇನೂ ಅಲ್ಲ. ಸಾರ್ವಜನಿಕ ವಲಯದ ಘಟಕಗಳು, ಸಾರ್ವಜನಿಕ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯವನ್ನು ಬಲಪಡಿಸಲಾಗುವುದು. ಪ್ರಜಾಸತ್ತಾತ್ಮಕ ಹಕ್ಕುಗಳು ಅಥವಾ ಕಾರ್ಮಿಕ ಹಕ್ಕುಗಳನ್ನು ಮೊಟಕುಗೊಳಿಸಲಾಗುವುದಿಲ್ಲ. ಮುಂದೆಯೂ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಮತ್ತು ಭಾಗವಹಿಸುವಿಕೆಯು ಸಾಮಾಜಿಕ ಮತ್ತು ಸಣ್ಣ ಪ್ರಮಾಣದ ವಲಯಗಳಲ್ಲಿ ನಮ್ಮ ಮಧ್ಯಪ್ರವೇಶದ ಮುಖ್ಯ ಲಕ್ಷಣವಾಗಿರುತ್ತದೆ. ಎಲ್ಲಾ ರೀತಿಯ ಜಾತಿ ಮತ್ತು ಲಿಂಗ ತಾರತಮ್ಯಗಳ ವಿರುದ್ಧ ಮತ್ತು ಜಾತ್ಯತೀತ ಮತ್ತು ವೈಜ್ಞಾನಿಕ ಮೌಲ್ಯಗಳಿಗಾಗಿ ಹೋರಾಟ ಮುಂದುವರಿಯುತ್ತದೆ.

ಪುಟ 15 ಕ್ಕೆ

ಮೋದಿ ಸರ್ಕಾರದ 'ಒಂದು ರಾಷ್ಟ್ರ, ಒಂದು ಚುನಾವಣೆ' ಪ್ರಜಾಪ್ರಭುತ್ವ ವಿರೋಧಿ ಮತ್ತು ಒಕ್ಕೂಟ ವಿರೋಧಿ ಧಾವಂತ

ಒಂದು ಕೇಂದ್ರೀಕೃತ ಏಕಘಟಕ ಪ್ರಭುತ್ವವನ್ನು ಸೃಷ್ಟಿಸಲು ಬಯಸುವ ಆರ್‌ಎಸ್‌ಎಸ್–ಬಿಜೆಪಿಯ 'ಒಂದು ರಾಷ್ಟ್ರ, ಒಂದು ಚುನಾವಣೆ'ಯ ಧಾವಂತವನ್ನು ಮಹಾಧಿವೇಶನ ಬಲವಾಗಿ ವಿರೋಧಿಸಿದೆ. ಇದು 'ಒಂದು ರಾಷ್ಟ್ರ, ಒಂದು ಧರ್ಮ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ನಾಯಕ' ಎಂಬ ಅವರ ಘೋಷಣೆಯ ವಿಸ್ತರಣೆಯಾಗಿದೆ. ಅವರು ಹಿಟ್ಲರ್‌ನ ಫ್ಯಾಸಿಸ್ಟ್ ಯುಗದ ಈ ಘೋಷಣೆಯನ್ನು ಎತ್ತಿಕೊಂಡು ಮಾರ್ಪಡಿಸಿದ್ದಾರೆ ಎಂದು ನಿರ್ಣಯ ಹೇಳುತ್ತದೆ.

ಏಕಕಾಲದಲ್ಲಿ ಚುನಾವಣೆಗಳು ಬಹಳಷ್ಟು ಹಣವನ್ನು ಉಳಿಸುತ್ತದೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಆಗಾಗ್ಗೆ ಅಸ್ತವ್ಯಸ್ತಗೊಳ್ಳದಂತೆ ತಡೆಯುತ್ತದೆ ಎಂದು ಬಿಜೆಪಿ ನಾಯಕರು ತಮ್ಮ ಹಳಸಲು ವಾದಗಳನ್ನು ಬಳಸುತ್ತಿದ್ದಾರೆ. 2024ರ ಸಂಸದೀಯ ಚುನಾವಣೆಗಳಿಗೆ, ಸಂಸತ್ತು ಭಾರತದ ಚುನಾವಣಾ ಆಯೋಗಕ್ಕೆ ನೀಡಿದ ಒಟ್ಟು ಹಂಚಿಕೆ 466 ಕೋಟಿ ರೂ.ಗಳಷ್ಟಿತ್ತು. ರಾಜ್ಯಗಳು ಸಾಗಾಟದ ಅವಶ್ಯಕತೆಗಳಿಗಾಗಿ ಇನ್ನೂ ಸ್ವಲ್ಪ ಮೊತ್ತವನ್ನು ಖರ್ಚು ಮಾಡುತ್ತವೆ. ಆದರೆ ಇವೆಲ್ಲವೂ ತುಂಬಾ ದೊಡ್ಡ ಮೊತ್ತವೇನಲ್ಲ. ಇತರ ವರ್ಷಗಳಲ್ಲಿ ಈ ವೆಚ್ಚವು ಇನ್ನೂ ಕಡಿಮೆ. ಇನ್ನು ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ, 1967ರಿಂದ ಇಂದಿನವರೆಗೆ ಭಾರತದಲ್ಲಿ ಕಾಲಕಾಲಕ್ಕೆ ಮತ್ತು ಆಗಾಗ್ಗೆ ಚುನಾವಣೆಗಳು ನಡೆದಿವೆ. ಅವು ಅಭಿವೃದ್ಧಿಯ ಆವೇಗವನ್ನು ನಿಲ್ಲಿಸಿವೆ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ.

'ಒಂದು ರಾಷ್ಟ್ರ, ಒಂದು ಚುನಾವಣೆ' ಮಾದರಿಯು ಸಂವಿಧಾನದ ಎರಡು ಮೂಲಭೂತ ಲಕ್ಷಣಗಳನ್ನು –ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವವನ್ನು– ದುರ್ಬಲಗೊಳಿಸುತ್ತದೆ. ಕೇಶವಾನಂದ ಭಾರತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು, ಸಂಸತ್ತಿಗೆ ಸಂವಿಧಾನದ ಮೂಲರಚನೆಯನ್ನು ಬದಲಾಯಿಸುವ ಅಧಿಕಾರವಿಲ್ಲ ಎಂದು ಹೇಳುತ್ತದೆ. ಆದರೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದಂದಿನಿಂದ ಈ ಕಲ್ಪನೆಯನ್ನು ಮುಂದಿಟ್ಟಿದ್ದಾರೆ, 2020ರಲ್ಲಿ 'ಒಂದು ರಾಷ್ಟ್ರ, ಒಂದು ಚುನಾವಣೆ' "ಚರ್ಚೆಯ ವಿಷಯವಲ್ಲ, ಬದಲಿಗೆ ಭಾರತಕ್ಕೆ ಒಂದು ಆವಶ್ಯಕತೆ" ಎಂದು ಅವರು ಘೋಷಿಸಿದರು.

24 ನೇ ಮಹಾಧಿವೇಶನದ ನಿರ್ಣಯ

ವಾಸ್ತವವಾಗಿ, 'ಒಂದು ರಾಷ್ಟ್ರ, ಒಂದು ಚುನಾವಣೆ' ಪ್ರಸ್ತಾಪದಿಂದಾಗಿ ಕೆಲವು ಶಾಸಕಾಂಗ ಸಭೆಗಳ ಜೀವಿತಾವಧಿಯನ್ನು, ಅವುಗಳನ್ನು ಲೋಕಸಭಾ ಚುನಾವಣೆಯೊಂದಿಗೆ ಹೊಂದಿಸಲು ಮೊಟಕುಗೊಳಿಸಿದಂತಾಗುತ್ತದೆ. ಇದಲ್ಲದೆ, ಒಂದು ರಾಜ್ಯ ಸರ್ಕಾರ ಬಿದ್ದು ವಿಧಾನಸಭೆಯನ್ನು ವಿಸರ್ಜಿಸಬೇಕಾದರೆ, ನಂತರ ನಡೆಯುವ ಮಧ್ಯಂತರ ಚುನಾವಣೆಯು ವಿಧಾನಸಭೆಯ ಉಳಿದ ಅವಧಿಗೆ ಮಾತ್ರ ಇರುತ್ತದೆ. ಇದೆಲ್ಲವೂ ಸಂವಿಧಾನದಲ್ಲಿ ಕಲ್ಪಿಸಿದಂತೆ ಐದು ವರ್ಷಗಳ ಅವಧಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ಉಲ್ಲಂಘಿಸುತ್ತದೆ.

ಎಲ್ಲಾ ಪಂಚಾಯತ್‌ಗಳು ಮತ್ತು ಪುರಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಕ್ರಮದಿಂದ ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ ಇನ್ನಷ್ಟು ಸ್ಪಷ್ಟವಾಗುತ್ತದೆ. ಇದು ಹಠಮಾರಿ ಕೇಂದ್ರೀಕರಣವಾಗಿದ್ದು, ರಾಜ್ಯ ಸರ್ಕಾರಗಳ ಅಡಿಯಲ್ಲಿ ವಿಕೇಂದ್ರೀಕೃತ ನಿರ್ಧಾರ ತೆಗೆದುಕೊಳ್ಳುವ ಸ್ಥಳೀಯ ಸಂಸ್ಥೆಗಳ ಉದ್ದೇಶಕ್ಕೇ ವಿರುದ್ಧವಾಗಿದೆ.

ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳನ್ನು ಒಟ್ಟಿಗೆ ನಡೆಸಲು ಸಂವಿಧಾನದಲ್ಲಿ ಒಂದು ಪ್ರಮುಖ ತಿದ್ದುಪಡಿಯ ಅಗತ್ಯವಿರುತ್ತದೆ. ಸಂವಿಧಾನಕ್ಕೆ 83ನೇ ವಿಧಿ (ಸದನದ ಅವಧಿ), 85ನೇ ವಿಧಿ (ಲೋಕಸಭೆಯ ವಿಸರ್ಜನೆ), 172ನೇ ವಿಧಿ (ರಾಜ್ಯ ಶಾಸಕಾಂಗಗಳ ಅವಧಿ), 174ನೇ ವಿಧಿ (ರಾಜ್ಯ ಶಾಸಕಾಂಗಗಳ ವಿಸರ್ಜನೆ), 356ನೇ ವಿಧಿ (ಸಾಂವಿಧಾನಿಕ ವ್ಯವಸ್ಥೆಯ ವೈಫಲ್ಯ) ಇವುಗಳಿಗೆ ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ, ಜೊತೆಗೆ ಜನತಾ ಪ್ರಾತಿನಿಧ್ಯ ಕಾಯ್ದೆ ಮತ್ತು ಇತರ ನಿಯಮಗಳಿಗೆ ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ.

ಮಹಾಧಿವೇಶನವು ಏಕಕಾಲದಲ್ಲಿ ಚುನಾವಣೆಗಳನ್ನು ತರುವ ಯಾವುದೇ ಕೃತಕ ಪ್ರಯತ್ನವನ್ನು ಸಂಪೂರ್ಣವಾಗಿ ವಿರೋಧಿಸುವುದಾಗಿ ಹೇಳುತ್ತ, ಈ ಉದ್ದೇಶಕ್ಕಾಗಿ ಸಂವಿಧಾನವನ್ನು ತಿದ್ದುಪಡಿ ಮಾಡುವ ಯಾವುದೇ ಕ್ರಮವನ್ನು ಬಲವಾಗಿ ವಿರೋಧಿಸುವುದಾಗಿ ಹೇಳಿದೆ. ಪ್ರಜಾಪ್ರಭುತ್ವ, ಬಹುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಗೌರವಿಸುವ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಇದನ್ನು ದೃಢವಾಗಿ ವಿರೋಧಿಸಬೇಕು ಮತ್ತು ಈ ಕೇಡುಂಟು ಮಾಡುವ ನಡೆಯನ್ನು ಒಗ್ಗಟ್ಟಿನಿಂದ ತಡೆಯಬೇಕು. ಈ ಪ್ರಜಾಪ್ರಭುತ್ವ ವಿರೋಧಿ ಮತ್ತು ಒಕ್ಕೂಟ ವಿರೋಧಿ ಧಾವಂತವನ್ನು ವಿರೋಧಿಸಬೇಕು ಎಂದು ಮಹಾಧಿವೇಶನ ಭಾರತದ ಜನರಿಗೆ ಕರೆ ನೀಡಿದೆ.

ಚುನಾವಣಾ ಕ್ಷೇತ್ರ ಮರು ವಿಂಗಡಣೆ ಸಮತ್ವದಿಂದ ಮತ್ತು ನ್ಯಾಯಯುತವಾಗಿ ನಡೆಯಬೇಕು

ಸಂಸತ್ತಿನಲ್ಲಿ ಯಾವುದೇ ರಾಜ್ಯದ ಪ್ರಾತಿನಿಧ್ಯದ ಅನುಪಾತದ ಪಾಲನ್ನು ಇಳಿಸುವ ಅಥವಾ ಕಡಿಮೆ ಮಾಡುವ ಯಾವುದೇ ಕ್ಷೇತ್ರ ಮರುವಿಂಗಡಣಾ ಪ್ರಕ್ರಿಯೆಯನ್ನು ದೃಢವಾಗಿ ವಿರೋಧಿಸುವುದಾಗಿ ಎಪ್ರಿಲ್ 4ರಂದು ಸಿಪಿಐ(ಎಂ)ನ 24ನೇ ಮಹಾಧಿವೇಶನ ಅಂಗೀಕರಿಸಿರುವ ನಿರ್ಣಯ ಹೇಳಿದೆ. ಈ ಬಹುಮಹತ್ವದ ವಿಷಯದ ಬಗ್ಗೆ ಒಂದು ವಿಶಾಲ ಒಮ್ಮತವನ್ನು ಕಟ್ಟಲು ರಾಜಕೀಯ ಪಕ್ಷಗಳು ಮತ್ತು ರಾಜ್ಯ ಸರ್ಕಾರಗಳೊಂದಿಗೆ ವಿಸ್ತೃತ ಸಮಾಲೋಚನೆಗಳಲ್ಲಿ ತೊಡಗಬೇಕು ಎಂದು ಈ ನಿರ್ಣಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಸಂಸತ್ತು ಮತ್ತು ಶಾಸಕಾಂಗ ಸಭೆಗಳಲ್ಲಿನ ಸ್ಥಾನಗಳ ಸಂಖ್ಯೆಯನ್ನು ಸ್ತಂಭನಗೊಳಿಸಿರುವ ಅವಧಿ ಮುಂದಿನ ವರ್ಷ ಕೊನೆಗೊಳ್ಳಲಿರುವ ಕಾರಣ, 2026ರ ನಂತರ ನಡೆಸುವ ಮೊದಲ ಜನಗಣತಿಯ ನಂತರ ಹೊಸ ಸುತ್ತಿನ ಕ್ಷೇತ್ರ ಮರುವಿಂಗಡಣೆಯ ಅಗತ್ಯವಾಗುತ್ತದೆ. 1976ರಲ್ಲಿ ತುರ್ತುಪರಿಸ್ಥಿತಿಯ ಸಮಯದಲ್ಲಿ ಜಾರಿಗೆ ತರಲಾದ 42ನೇ ಸಂವಿಧಾನ ತಿದ್ದುಪಡಿಯು ಆರಂಭದಲ್ಲಿ ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಉತ್ತೇಜಿಸಲು ಸೀಟು ಹಂಚಿಕೆಯನ್ನು ಆಗಿದ್ದ ಮಟ್ಟದಲ್ಲಿ ಸ್ತಂಭನಗೊಳಿಸಿತು. ಈ ಸ್ತಂಭನವನ್ನು ನಂತರ ವಾಜಪೇಯಿ ಸರ್ಕಾರವು 2026ರ ವರೆಗೆ ವಿಸ್ತರಿಸಿತು.

ಚಾರಿತ್ರಿಕವಾಗಿ, 1952, 1963 ಮತ್ತು 1973ರಲ್ಲಿ ಕ್ಷೇತ್ರ ಮರುವಿಂಗಡಣೆಯ ಅಭ್ಯಾಸವನ್ನು ನಡೆಸಲಾಯಿತು. ಆದರೆ, 1976ರ ಸ್ತಂಭನದ ನಂತರ, ಜನಸಂಖ್ಯೆ ಆಧಾರಿತ ಪುನರ್‌ವಿಂಗಡಣೆಯ ಕುರಿತಾದ ಕಳವಳಗಳನ್ನು ಪರಿಹರಿಸಲು ನಂತರದ ಹೊಂದಾಣಿಕೆಗಳನ್ನು ಮುಂದೂಡಲಾಯಿತು. 2001ರ ಜನಗಣತಿಯ ಹೊರತಾಗಿಯೂ, ದಕ್ಷಿಣ ರಾಜ್ಯಗಳ ಬಲವಾದ ವಿರೋಧದಿಂದಾಗಿ ಸ್ತಂಭನವು ಜಾರಿಯಲ್ಲಿತ್ತು, ಅವರ ಪ್ರಾತಿನಿಧ್ಯದಲ್ಲಿ ನ್ಯಾಯಯುತವಲ್ಲದ ಕಡಿತವನ್ನು ಉಂಟುಮಾಡಬಹುದು ಎಂಬ ಭಯದಿಂದ ಅವು ವಿರೋಧಿಸಿದವು.

ಸ್ತಂಭನದ ಅವಧಿ ಮುಗಿಯುತ್ತಿದ್ದಂತೆ, ಹೊಸ ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯು ರಾಜಕೀಯ ಪ್ರಾತಿನಿಧ್ಯವನ್ನು ಗಮನಾರ್ಹವಾಗಿ ಮರುರೂಪಿಸಬಹುದು, ಇದು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಒಡಿಶಾ, ಪಶ್ಚಿಮ ಬಂಗಾಳ, ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಂತಹ ರಾಜ್ಯಗಳ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ. ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿರುವ ಈ ರಾಜ್ಯಗಳಲ್ಲಿ ಹಲವು ಪ್ರಾತಿನಿಧ್ಯವನ್ನು ಕಳೆದುಕೊಳ್ಳುವ ಅಪಾಯವನ್ನು ಹೊಂದಿವೆ, ಆದರೆ ಹೆಚ್ಚಿನ ಜನಸಂಖ್ಯಾ ಬೆಳವಣಿಗೆಯ ದರಗಳನ್ನು ಹೊಂದಿರುವ ರಾಜ್ಯಗಳು ಇದರ ಅನರ್ಹ ಪ್ರಯೋಜನವನ್ನು ಪಡೆಯಬಹುದು. ಒಟ್ಟಾರೆ ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಿದರೂ ಸಹ, ಸಂಪೂರ್ಣವಾಗಿ ಜನಸಂಖ್ಯೆ ಆಧಾರಿತ ವಿಧಾನವು ಉತ್ತರ ಪ್ರದೇಶದಂತಹ ರಾಜ್ಯಗಳಿಗೆ ಅಗತ್ಯಕ್ಕಿಂತ ಹೆಚ್ಚು ಅನುಕೂಲಕರವಾದ ಹಂಚಿಕೆಗಳಿಗೆ ಕಾರಣವಾಗುತ್ತದೆ.

24 ನೇ ಮಹಾಧಿವೇಶನದ ನಿರ್ಣಯ

ರಾಷ್ಟ್ರೀಯ ಐಕ್ಯತೆ ಮತ್ತು ಸಾಮರಸ್ಯವನ್ನು ಕಾಯ್ದುಕೊಳ್ಳುತ್ತಲೇ ಎಲ್ಲಾ ರಾಜ್ಯಗಳ ಹಕ್ಕುಗಳನ್ನು ಗೌರವಿಸುವ ಒಂದು ಸಮತ್ವಪೂರ್ಣ ಮತ್ತು ನ್ಯಾಯಯುತವಾದ ಒಕ್ಕೂಟದ ಚೌಕಟ್ಟಿಗೆ ಬದ್ಧವಾಗಿದ್ದು, ಸಿಪಿಐ(ಎಂ)ನ 24ನೇ ಮಹಾಧಿವೇಶನವು ಈ ಕೆಳಗಿನ ನಿರ್ಣಯಗಳನ್ನು ಮಾಡುವುದಾಗಿ ಹೇಳಿದೆ:

1. ಯಾವುದೇ ಕ್ಷೇತ್ರ ಮರುವಿಂಗಡಣೆಯ ಚೌಕಟ್ಟು ಯಾವುದೇ ನಿರ್ದಿಷ್ಟ ಪ್ರದೇಶ ಅಥವಾ ರಾಜ್ಯಕ್ಕೆ ಪ್ರಮಾಣದ ಪ್ರಮಾಣ ಮೀರಿದ ಪ್ರಯೋಜನವನ್ನು ಕೊಡದಂತೆ ತಡೆಯಬೇಕು ಮತ್ತು ಜನಸಂಖ್ಯಾ ಬೆಳವಣಿಗೆಯನ್ನು ಯಶಸ್ವಿಯಾಗಿ ನಿಯಂತ್ರಿಸಿರುವ ರಾಜ್ಯಗಳ ಹಿತಾಸಕ್ತಿಗಳನ್ನು ರಕ್ಷಿಸಬೇಕು.
2. ಸಂಸದೀಯ ಪ್ರಾತಿನಿಧ್ಯವನ್ನು ವಿಸ್ತರಿಸಲು ರಾಜ್ಯಗಳ ನಡುವೆ ಅಸ್ತಿತ್ವದಲ್ಲಿರುವ ಪ್ರಮಾಣಾತ್ಮಕ ಸೀಟು ಹಂಚಿಕೆಯನ್ನು ಕಾಯ್ದುಕೊಳ್ಳುತ್ತಾ, ನ್ಯಾಯಯುತ ಮತ್ತು ಸಮತೋಲನದ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಒಂದು ಪ್ರಮಾಣಾತ್ಮಕ ಸೀಟು ಹೆಚ್ಚಳವನ್ನು ಅಳವಡಿಸಿಕೊಳ್ಳಬೇಕು.
3. ಪ್ರಸ್ತುತ ವಿವಿಧ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಬುಡಕಟ್ಟು ಸ್ಥಾನಗಳ ಅನುಪಾತವನ್ನು ಕಾಯ್ದುಕೊಳ್ಳಬೇಕು.
4. ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯು ಸಮತ್ವ, ಒಕ್ಕೂಟ ವ್ಯವಸ್ಥೆ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಐಕ್ಯತೆಯ ತತ್ವಗಳನ್ನು ಎತ್ತಿಹಿಡಿಯುವಂತೆ ಭಾರತ ಸರ್ಕಾರವು ಎಲ್ಲಾ ರಾಜ್ಯಗಳೊಂದಿಗೆ ಸಮಗ್ರ ಸಮಾಲೋಚನೆಗಳನ್ನು ನಡೆಸಬೇಕು.
5. ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯ ಬಗ್ಗೆ ಒಂದು ವಿಶಾಲ ಒಮ್ಮತವಿಲ್ಲದಿದ್ದಲ್ಲಿ, ಒಕ್ಕೂಟದ ಸಮಗ್ರತೆಯನ್ನು ಕಾಪಾಡಲು ಸೀಟು ಹಂಚಿಕೆಯ ಮೇಲಿನ ಸ್ತಂಭನವನ್ನು ಮತ್ತಷ್ಟು ವಿಸ್ತರಿಸಬೇಕು.

3ನೇ ದಿನದ ಪತ್ರಿಕಾ ಪ್ರಕಟಣೆ–ಏಪ್ರಿಲ್ 4, 2025

ಏಪ್ರಿಲ್ 3ರಂದು ಪ್ರಾರಂಭವಾದ 24ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ ಮತ್ತು ರಾಜಕೀಯ ವಿಮರ್ಶಾ ವರದಿಯ ಮೇಲಿನ ಚರ್ಚೆಗಳು. ಎಪ್ರಿಲ್ 4ರಂದು ಮುಂದುವರೆದವು. ಮಧ್ಯಾಹ್ನದವರೆಗೆ 36 ಪ್ರತಿನಿಧಿಗಳು ಈ ಚರ್ಚೆಯಲ್ಲಿ ಭಾಗವಹಿಸಿದ್ದರು.

3ನೇ ದಿನದ ಮಧ್ಯಾಹ್ನದವರೆಗೆ ಇನ್ನೂ 5 ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರಕ್ಕೆ ಬೆಂಬಲ ವ್ಯಕ್ತಪಡಿಸುವ ನಿರ್ಣಯವನ್ನು ಪೊಲಿಟ್ ಬ್ಯೂರೋ ಸದಸ್ಯ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಮೊಹಮ್ಮದ್ ಸಲೀಂ ಮಂಡಿಸಿದರು. ಇದನ್ನು ಕೇಂದ್ರ ಸಮಿತಿಯ ಸದಸ್ಯ ಮತ್ತು ತ್ರಿಪುರ ರಾಜ್ಯ ಸಮಿತಿಯ ಕಾರ್ಯದರ್ಶಿ ಜಿತೇಂದ್ರ ಚೌಧರಿ ಅನುಮೋದಿಸಿದರು.

ಚುನಾವಣಾ ಕ್ಷೇತ್ರ ಮರುವಿಂಗಡಣೆಯ ಕುರಿತ ನಿರ್ಣಯವನ್ನು ಪೊಲಿಟ್ ಬ್ಯೂರೋ ಸದಸ್ಯ ಜಿ. ರಾಮಕೃಷ್ಣನ್ ಮಂಡಿಸಿದರು ಮತ್ತು ಹಿಮಾಚಲ ಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಸಂಜಯ್ ಚೌಹಾಣ್ ಅನುಮೋದಿಸಿದರು.

ಚುನಾವಣೆಗಳಲ್ಲಿ ಸ್ವತಂತ್ರ, ನ್ಯಾಯಯುತ ಮತ್ತು ಸಮಾನ ಅವಕಾಶದ ನಿರ್ಣಯವನ್ನು ಪೊಲಿಟ್ ಬ್ಯೂರೋ ಸದಸ್ಯ ನೀಲೋತ್ಪಲ್ ಬಸು ಮಂಡಿಸಿದರು ಮತ್ತು ಆಂಧ್ರಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ ವಿ. ಶ್ರೀನಿವಾಸರಾವ್ ಅನುಮೋದಿಸಿದರು.

ಸಾರ್ವತ್ರಿಕ ಜನಗಣತಿ ಮತ್ತು ಜಾತಿ ಜನಗಣತಿಯನ್ನು ತಕ್ಷಣ ನಡೆಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಕೇಂದ್ರ ಸಮಿತಿ ಸದಸ್ಯ ಅವದೇಶ್ ಕುಮಾರ್ ಮಂಡಿಸಿದರು ಮತ್ತು ಟಿ.ಜ್ಯೋತಿ ಅನುಮೋದಿಸಿದರು.

'ಒಂದು ರಾಷ್ಟ್ರ–ಒಂದು ಚುನಾವಣೆ'ಯನ್ನು ವಿರೋಧಿಸುವ ನಿರ್ಣಯವನ್ನು ಪೊಲಿಟ್ ಬ್ಯೂರೋ ಸದಸ್ಯ ಅಶೋಕ್ ಧವಳೆ ಮಂಡಿಸಿದರು ಮತ್ತು ಕೇಂದ್ರ ಸಮಿತಿ ಸದಸ್ಯ ಮತ್ತು ಲೋಕಸಭೆಯ ಸಂಸತ್ ಸದಸ್ಯ ಅಮ್ರಾ ರಾಮ್ ಅನುಮೋದಿಸಿದರು.

ಎಲ್ಲಾ ನಿರ್ಣಯಗಳನ್ನು ಮಹಾಧಿವೇಶನ ಸರ್ವಾನುಮತದಿಂದ ಅಂಗೀಕರಿಸಿತು.

ಪ್ಯಾಲೆಸ್ಟೈನ್‌ಗೆ ಸೌಹಾರ್ದ ವ್ಯಕ್ತಪಡಿಸುವ ಮತ್ತು ಗಾಜಾದ ಮೇಲಿನ ಇಸ್ರೇಲಿ ನರಮೇಧ ದಾಳಿಯನ್ನು ಖಂಡಿಸುವ ವಿಶೇಷ ನಿರ್ಣಯವನ್ನು ಪೊಲಿಟ್ ಬ್ಯೂರೋ ಸದಸ್ಯ ಎಂ.ಎ.ಬೇಬಿ ಮಂಡಿಸಿದರು ಮತ್ತು ಪೊಲಿಟ್ ಬ್ಯೂರೋ ಸದಸ್ಯ ಜಿ.ರಾಮಕೃಷ್ಣನ್ ಅನುಮೋದಿಸಿದರು. ಇಸ್ರೇಲ್ ಮತ್ತು ಅಮೆರಿಕವನ್ನು ಖಂಡಿಸಿ ಮತ್ತು ಸ್ವತಂತ್ರ ಪ್ಯಾಲೆಸ್ಟೈನ್ ಬೇಕು ಎನ್ನುವ ಘೋಷಣೆಗಳನ್ನು ಕೂಗುತ್ತಾ ಸಮಸ್ತ ಪ್ರತಿನಿಧಿಗಳು ಎದ್ದು ನಿಂತು ಇದನ್ನು ಸರ್ವಾನುಮತದಿಂದ ಅಂಗೀಕರಿಸಿದರು.

ಮರಳಿ ಬರುತ್ತಿದೆ ಚಿಂತಕರ ಬೇಟೆಯಾಡುವ ಮೆಕಾರ್ಥಿವಾದ



ಅಮೆರಿಕದಲ್ಲಿ 'ಕಮ್ಯುನಿಸ್ಟ್ ಅಪಾಯ'ದ ಹುಯಿಲೆಬ್ಬಿಸಿದ 1950ರ ದಶಕದ ಮೆಕ್ಕಾರ್ಥಿ ಕಾಲದ ವಿದ್ಯಮಾನ ಮತ್ತು ಟ್ರಂಪ್ ಈಗ ಪ್ರಾರಂಭಿಸಿರುವ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ದಮನಕಾರೀ ಕ್ರಮಗಳಲ್ಲಿ ಬಹಳಷ್ಟು ಹೋಲಿಕೆಗಳಿವೆ ಎಂಬುದು ಅನೇಕರ ಅಭಿಪ್ರಾಯ. ವಾಸ್ತವವಾಗಿ, ಈಗಿನ ಟ್ರಂಪ್ ಬೇಟೆಯು ಹಲವು ರೀತಿಗಳಲ್ಲಿ ಮೆಕ್ಕಾರ್ಥಿ ಕಾಲದ ಚಿಂತಕರ ಬೇಟೆಗಿಂತಲೂ ಹೆಚ್ಚು ಕೆಟ್ಟದ್ದಾಗಿದೆ. ಮೆಕ್ಕಾರ್ಥಿವಾದವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಯ ಒಂದು ನಿರ್ದಿಷ್ಟ ಕಾರ್ಯತಂತ್ರದ ಭಾಗವಾಗಿತ್ತು. ಆದರೆ, ಪ್ರಸ್ತುತ ಟ್ರಂಪ್ ದಾಳಿಯ ಸಂದರ್ಭವು ಸಾಮ್ರಾಜ್ಯಶಾಹಿಯ ನೈತಿಕ ದಿವಾಳಿತನವನ್ನೇ ಸೂಚಿಸುತ್ತದೆ. ಚಿಂತನೆಯ ಮೇಲೆ ಈಗ ನಡೆಯುತ್ತಿರುವ ನವ-ಫ್ಯಾಸಿಸ್ಟ್ ದಾಳಿಯು 1950ರ ದಶಕದ ಮೆಕ್ಕಾರ್ಥಿಯ ದಾಳಿಗಿಂತಲೂ ವ್ಯಾಪಕವಾಗಿದೆ, ಇವನ್ನು ನವ-ಫ್ಯಾಸಿಸ್ಟ್ ಅಲ್ಲದ ಆಡಳಿತಗಳನ್ನು ಹೊಂದಿರುವ ಇತರೆ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿಯೂ ಸಹ ನಾವೀಗ ನೋಡುತ್ತಿದ್ದೇವೆ. ಅವೀಗ ದಮನಕಾರಿ ಮಿಲಿಟರಿವಾದದ ಹಂತವನ್ನು ಪ್ರವೇಶಿಸುತ್ತಿವೆ. ಇದು ವಿಶ್ವದ ಜನತೆಗೆ ಕೇಡಿನ ಒಂದು ಸೂಚನೆಯೇ ಸರಿ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಅಮೆರಿಕದಲ್ಲಿ ಟ್ರಂಪ್ ಆಡಳಿತವು ವಾಕ್ ಸ್ವಾತಂತ್ರ್ಯದ ಮೇಲೆ ಪ್ರಸ್ತುತ ಹೇರಿರುವ ನಿರ್ಬಂಧವು 1950ರ ದಶಕದ ಒಂದು ಕಳವಳಕಾರಿ ವಿದ್ಯಮಾನವನ್ನು ನೆನಪಿಸುತ್ತದೆ. ಆಗ, ರಿಪಬ್ಲಿಕನ್ ಸೆನೆಟರ್ ಜೋಸೆಫ್ ಮೆಕ್ಕಾರ್ಥಿಯು ಹಲವಾರು ಕಮ್ಯೂನಿಸ್ಟರು ಮತ್ತು ಗೂಢಚಾರರಿಂದ ದೇಶಕ್ಕೆ ಅಪಾಯವಿದೆ ಎಂಬ ಒಂದು ಹುಯಿಲನ್ನೆಬ್ಬಿಸಿದ. ಕಮ್ಯೂನಿಸಂ ಭೀತಿಯಿಂದ ನಡುಗುತ್ತಿದ್ದ ಅಮೆರಿಕದ ಸರ್ಕಾರವು ಎಡ ಚಿಂತನೆ ಹೊಂದಿದ್ದ ವ್ಯಕ್ತಿಗಳನ್ನು ಹುಡುಕಿ ಹುಡುಕಿ ಅವರನ್ನು ಶಿಕ್ಷೆಗೆ ಗುರಿಪಡಿಸಿತು. ಕಮ್ಯೂನಿಸ್ಟ್ ಎಂದು ಆರೋಪಿಸಿ ಒಂದು ಇಡೀ ತಲೆಮಾರಿನ ಕಲಾವಿದರು ಮತ್ತು ಬುದ್ಧಿಜೀವಿಗಳನ್ನು ಶಿಕ್ಷೆಗೆ ಗುರಿಪಡಿಸಲಾಯಿತಷ್ಟೇ ಅಲ್ಲ, ಇದು ತರುವಾಯದ ದಶಕಗಳಲ್ಲಿ ಆ ದೇಶದ ಸೃಜನಶೀಲ ಜೀವನದ ಮೇಲೆ ಒಂದು ಆಳವಾದ ನಕಾರಾತ್ಮಕ ಮುದ್ರೆಯನ್ನು ಒತ್ತಿಬಿಟ್ಟಿತ್ತು. ಈ ರೀತಿಯ ಬೇಟೆಗೆ ಗುರಿಯಾದವರಲ್ಲಿ ಚಾರ್ಲ್ಸ್ ಚಾಪ್ಲಿನ್, ಬರ್ಟೋಲ್ಟ್ ಬ್ರೆಕ್ಟ್, ಡ್ಯಾಶಿಯಲ್ ಹ್ಯಾಮೆಟ್, ಡಾಲ್ಟನ್ ಟ್ರಂಬೊ(ಸಿನೆಮಾ ಕತೆಗಾರ) ಮುಂತಾದ ಕಲಾವಿದರು ಮತ್ತು ಲೇಖಕರಿಂದ ಹಿಡಿದು ಅರ್ಥಶಾಸ್ತ್ರಜ್ಞರು ಮತ್ತು ಅಧ್ಯಯನಕಾರರಾದ ಲಾರೆನ್ಸ್ ಕ್ಲೈನ್, ರಿಚರ್ಡ್ ಗುಡ್ವಿನ್, ಇ ಹೆಚ್ ನಾರ್ಮನ್, ಡೇನಿಯಲ್ ಥಾರ್ನರ್, ಮೋಸೆಸ್ ಫಿನ್ಲೇ ಮತ್ತು ಪೌರಸ್ತ್ಯ ಶಿಕ್ಷಣ ತಜ್ಞ ಓವನ್ ಲ್ಯಾಟಿಮೋರ್‌ರಂತವರ ವರೆಗೆ ಹಲವಾರು ಹೆಸರಾಂತ ವ್ಯಕ್ತಿಗಳನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಪರಮಾಣು ಬಾಂಬ್ ನಿರ್ಮಿಸುವ ಮ್ಯಾನ್‌ಹ್ಯಾಟನ್ ಯೋಜನೆಯನ್ನು ಮುನ್ನಡೆಸಿದ ಜೆ ರಾಬರ್ಟ್ ಓಪನ್‌ಹೈಮರ್; ಬ್ರೆಟನ್ ವುಡ್ಸ್ ವ್ಯವಸ್ಥೆಯನ್ನು ಸ್ಥಾಪಿಸಿದ ಹ್ಯಾರಿ ಡೆಕ್ಟರ್ ವೈಟ್ (ಜೆ ಎಂ ಕೀನ್ಸ್ ಅವರ ಜೊತೆಯಲ್ಲಿ) ಅವರಂತಹ ಗಣ್ಯ ಸಾರ್ವಜನಿಕ ವ್ಯಕ್ತಿಗಳನ್ನು ಸಹ ಬಿಟ್ಟಿರಲಿಲ್ಲ: ಅವರನ್ನು ಅಮೆರಿಕದಲ್ಲಿ ಕಮ್ಯುನಿಸಂನ ಪ್ರಭಾವವನ್ನು ತನಿಖೆ ಮಾಡಲು ಸ್ಥಾಪಿಸಲಾದ ಸಮಿತಿಗಳಲ್ಲಿ ಒಂದಿಲ್ಲೊಂದು ಸಮಿತಿಯ ಮುಂದೆ ಹಾಜರಾಗುವಂತೆ ಮಾಡಲಾಯಿತು. ಬುದ್ಧಿಜೀವಿಗಳ ಇಂತಹ ಬೇಟೆಯಿಂದ ಅಮೆರಿಕಕ್ಕೆ ಆದ ನಷ್ಟ ಅಪಾರ. ಎಷ್ಟೆಂದರೆ, ಅಮೆರಿಕದೊಳಗೆ ಪೂರ್ವ ಮತ್ತು ಆಗ್ನೇಯ ಏಷ್ಯಾದ ಬಗ್ಗೆ ಆಳವಾದ ಜ್ಞಾನ ಹೊಂದಿದ್ದ ತಜ್ಞರನ್ನು ಮೆಕ್ಕಾರ್ಥಿಸಂ ಹೊಸಕಿಹಾಕಿದ ಕಾರಣದಿಂದಾಗಿ ಅಮೆರಿಕವು ವಿಯೆಟ್ನಾಂ ಯುದ್ಧದಲ್ಲಿ ಸಿಲುಕಿಕೊಂಡಿತು ಎನ್ನಲಾಗಿದೆ. ಈ ದೇಶಗಳ ಬಗ್ಗೆ ವಸ್ತುನಿಷ್ಠ ಅಧ್ಯಯನ-ವಿಶ್ಲೇಷಣೆ ಆ ಸಮಯದಲ್ಲಿ ಒಂದು ವೇಳೆ ಲಭಿಸಿದ್ದರೆ, ಅಮೆರಿಕವು ಅದರಿಂದ ಲಾಭ ಪಡೆಯಬಹುದಿತ್ತು ಮತ್ತು ಅದು ತನ್ನನ್ನು ತಾನೇ ಕೆಸರಿನಲ್ಲಿ ಹೂತುಹೋಗುವುದನ್ನು ತಪ್ಪಿಸಿಕೊಳ್ಳಬಹುದಿತ್ತು ಎಂದು ಕೆಲವರು ಹೇಳುತ್ತಾರೆ.

ಮೆಕ್ಕಾರ್ಥಿ ಕಾಲದ ವಿದ್ಯಮಾನ ಮತ್ತು ಟ್ರಂಪ್ ಈಗ ಪ್ರಾರಂಭಿಸಿರುವ ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವ ದಮನಕಾರೀ ಕ್ರಮಗಳಲ್ಲಿ ಬಹಳಷ್ಟು ಹೋಲಿಕೆಗಳಿವೆ ಎಂಬುದು ಅನೇಕರ ಅಭಿಪ್ರಾಯ ಎಂಬುದನ್ನು ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಬ್ರೂಸ್ ಹಿಗ್ಗಿನ್ಸ್ (ಮಂತ್ಲಿ ರಿವ್ಯೂ ಆನ್‌ಲೈನ್, ಮಾರ್ಚ್ 21) ವ್ಯಕ್ತಪಡಿಸಿದ್ದಾರೆ. ಮೇಲ್ನೋಟದಲ್ಲಿ ಈ ಎರಡೂ ವಿದ್ಯಮಾನಗಳೂ ಒಂದೇ ರೀತಿಯವು ಎಂದು ಹೇಳುವುದು





ಉತ್ಪ್ರೇಕ್ಷೆಯಾಗುತ್ತದೆ ಎಂದು ತೋರಬಹುದು. ಹೇಳಿ ಕೇಳಿ ಈವರೆಗೆ ನಡೆದಿರುವ ಕೇವಲ ಬೆರಳೆಣಿಕೆಯ ಬಂಧನ ಮತ್ತು ಗಡೀಪಾರು ಪ್ರಕರಣಗಳ ಬಗ್ಗೆ ಏಕೆ ತಲೆಕೆಡಿಸಿಕೊಳ್ಳಬೇಕು ಮತ್ತು ಅವು ಮೆಕ್ಕಾರ್ಥಿ ಕಾಲದ ಬೇಟೆ-ಕಿರುಕುಳಗಳಿಗೆ ಸಮನೆಂದು ಏಕೆ ಸೂಚಿಸಬೇಕು? ಹಾಗೆಯೇ, ಈವರೆಗೆ ಈ ರೀತಿಯ ಶಿಕ್ಷೆಗೆ ಗುರಿಯಾಗಿರುವವರು ಅಮೆರಿಕೇತರ ನಾಗರಿಕರು, ವೀಸಾದ ಮೇಲೆ ಆ ದೇಶದಲ್ಲಿರುವವರು ಅಥವಾ ಗ್ರೀನ್ ಕಾರ್ಡ್ ಹೊಂದಿರುವವರು, ಇದು ಖಂಡಿತವಾಗಿಯೂ ಮೆಕ್ಕಾರ್ಥಿ ಕಾಲದ ಅನುಭವಕ್ಕಿಂತ ಭಿನ್ನವಾಗಿದೆ, ಆಗ ಕೇವಲ "ಹೊರಗಿನವರು" ಮಾತ್ರವಲ್ಲದೆ ಅಮೆರಿಕದ ನಾಗರಿಕರೂ ಸಹ ಒಂದು ರೀತಿಯ ಅಗ್ನಿ ಪರೀಕ್ಷೆಗೆ ಮತ್ತು ಶಿಕ್ಷೆಗಳಿಗೆ ಒಳಗಾಗಿದ್ದರು ಎಂದು ಹೇಳಬಹುದು.

ಕೇವಲ ಆರಂಭವಷ್ಟೇ

ಆದರೆ, ಇಂತಹ ವಿಚಾರಗಳು ಹೆಚ್ಚು ಸಮಾಧಾನ ಕೊಡಲಾರವು. ಏಕೆಂದರೆ, ಮಹಮೂದ್ ಖಲೀಲ್ ರೀತಿಯ ಪ್ರಕರಣಗಳು ಕೇವಲ ಆರಂಭವಷ್ಟೇ. ಇದೇ ರೀತಿಯ ಸಾವಿರಾರು ಪ್ರಕರಣಗಳ ಮೇಲೆ ಕ್ರಮ ಜರುಗಿಸಲಾಗುತ್ತದೆ ಎಂಬುದನ್ನು ಸ್ವತಃ ಟ್ರಂಪ್ ಅವರೇ ಸ್ಪಷ್ಟಪಡಿಸಿದ್ದಾರೆ. ಮಹಮೂದ್ ಖಲೀಲ್, ಒಬ್ಬ ಗ್ರೀನ್ ಕಾರ್ಡ್ ಹೊಂದಿದವ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾಗಿರುವ ಅಮೇರಿಕನ್ ಪ್ರಜೆಯನ್ನು (ಅವಳೀಗ ಎಂಟು ತಿಂಗಳ ಗರ್ಭಿಣಿ) ಮದುವೆಯಾಗಿದ್ದವ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಗಾಜಾದಲ್ಲಿ ನಡೆಯುತ್ತಿರುವ ನರಮೇಧದ ವಿರುದ್ಧ ಕೊಲಂಬಿಯಾ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಪ್ರತಿಭಟನಾ ಪ್ರದರ್ಶನಗಳನ್ನು ಮುನ್ನಡೆಸಿದ ಕಾರಣದಿಂದಾಗಿ, "ಭಯೋತ್ಪಾದಕರ" ಜೊತೆ ಸಂಪರ್ಕ ಹೊಂದಿದ ಆರೋಪದ ಮೇಲೆ ಖಲೀಲ್ ಅವರನ್ನು ಬಂಧಿಸಲಾಗಿದೆ ಮತ್ತು ಅವರು ಗಡೀಪಾರು ಶಿಕ್ಷೆಗೆ ಒಳಗಾಗಲಿದ್ದಾರೆ. ಅದೇ ರೀತಿಯಲ್ಲಿ, ವೀಸಾ ಮತ್ತು ಗ್ರೀನ್ ಕಾರ್ಡ್ ಹೊಂದಿರುವವರನ್ನು ಒಮ್ಮೆ ದೊಡ್ಡ ಪ್ರಮಾಣದಲ್ಲಿ ಗಡೀಪಾರು ಮಾಡಿದರೆ, ಆಗ, ಗಾಜಾ ಮಾದರಿಯ ನರಮೇಧಗಳ ವಿರುದ್ಧ ಮತ್ತು ಅಂತಹ ಗಡೀಪಾರು ಕ್ರಮಗಳ ವಿರುದ್ಧವಾಗಿ ಪ್ರತಿಭಟನೆಗಳಲ್ಲಿ ತೊಡಗುವ ಅಮೆರಿಕದ ನಾಗರಿಕರು ಇಂಥ ಶಿಕ್ಷೆಯ ಕ್ರಮಗಳಿಂದ ತಪ್ಪಿಸಿಕೊಳ್ಳಲಾಗದು. ವಿದೇಶಿ "ಭಯೋತ್ಪಾದಕ" ಚಟುವಟಿಕೆಗಳನ್ನು ಬೆಂಬಲಿಸಿದ ಆರೋಪದ ಮೇಲೆ ಅವರೂ ಸಹ ಶಿಕ್ಷೆಗೆ ಗುರಿಯಾಗುತ್ತಾರೆ. ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ, ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಕ್ಕಾಗಿ ಜನರನ್ನು ಶಿಕ್ಷೆಗೊಳಪಡಿಸುವ ಪ್ರಕ್ರಿಯೆಯು ಒಮ್ಮೆ ಆರಂಭವಾದರೆ, ಅದು ಕೇವಲ ಒಂದು ವಿಭಾಗಕ್ಕೆ ಮಾತ್ರವೇ ಸೀಮಿತವಾಗಿರುತ್ತದೆ ಮತ್ತು ಉಳಿದವರನ್ನು ತಟ್ಟುವುದಿಲ್ಲ ಎಂದು ಹೇಳಲಾಗದು. ಆದ್ದರಿಂದ, ನಾವು ಮೆಕ್ಕಾರ್ಥಿ ಕಾಲದ ವಿದ್ಯಮಾನದ ಆರಂಭದ ಹಂತದಲ್ಲಿದ್ದೇವೆ ಎಂದು ಭಾವಿಸುವುದು ಯುಕ್ತವಾಗುತ್ತದೆ.



ವಾಸ್ತವವಾಗಿ, ಭಯಹುಟ್ಟಿಸುವ ಈ ಬೇಟೆಯು ಹಲವು ರೀತಿಗಳಲ್ಲಿ ಮೆಕ್ಕಾರ್ಥಿ ಕಾಲದಲ್ಲಿ ಆರಂಭಿಸಿದ ಬೇಟೆಗಿಂತಲೂ ಹೆಚ್ಚು ಕೆಟ್ಟದ್ದಾಗಿದೆ. ಮೊದಲನೆಯದಾಗಿ, 1952ರ ಯುಎಸ್ ವಲಸೆ ಮತ್ತು ರಾಷ್ಟ್ರೀಯತೆ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಮಹಮೂದ್ ಖಲೀಲ್ ಅವರನ್ನು ಗಡೀಪಾರು ಮಾಡಲು ಆದೇಶಿಸಲಾಗುತ್ತಿದೆ. ಈ ನಿಬಂಧನೆಯು, "ಅಮೆರಿಕದಲ್ಲಿ ವ್ಯಕ್ತಿಯ ಉಪಸ್ಥಿತಿ ಅಥವಾ ಚಟುವಟಿಕೆಗಳು ಯುಎಸ್‌ಗೆ ಗಂಭೀರ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ ಎಂದು ವಿದೇಶಾಂಗ ಕಾರ್ಯದರ್ಶಿಯು ನಂಬುವಂಥಹ ಸಮಂಜಸ ಕಾರಣವನ್ನು ಹೊಂದಿರುವ ವಿದೇಶಿಯರನ್ನು ಗಡೀಪಾರು ಮಾಡಬಹುದು" ಎಂದು ಹೇಳುತ್ತದೆ. ಈ ನಿಬಂಧನೆಯ ಮೊರೆಹೋದಾಗ, ವೀಸಾ ಹೊಂದಿರುವವರು ಅಥವಾ ಗ್ರೀನ್ ಕಾರ್ಡ್ ಹೊಂದಿರುವವರು ಯಾವುದೇ ದೇಶದವರಾಗಿರಲಿ, ಯುಎಸ್‌ನ ವಿದೇಶಾಂಗ ನೀತಿಯನ್ನು ಟೀಕಿಸುವುದು ಸಾಧ್ಯವಿಲ್ಲ. ಉದಾಹರಣೆಗೆ, ಖಲೀಲ್ ಪ್ರಕರಣದಲ್ಲಿ, ಅವರು "ಭಯೋತ್ಪಾದಕ" ಸಂಘಟನೆಯಾದ ಹಮಾಸ್‌ಗೆ ಹತ್ತಿರವಾಗಿದ್ದಾರೆ (ಇದಕ್ಕೆ ಯಾವುದೇ ಪುರಾವೆಗಳನ್ನು ನೀಡಲಾಗಿಲ್ಲ) ಎಂದು ಮಾತ್ರವಲ್ಲದೆ, ಅವರ ವಿರುದ್ಧ "ಯೆಹೂದ್ಯ-ವಿರೋಧಿ" ಆರೋಪವೂ ಇದೆ. ಯುಎಸ್ ವಿದೇಶಾಂಗ ನೀತಿಯ ಈ "ಯೆಹೂದ್ಯ-ವಿರೋಧಿ" ನಿಲುವು ಅದು ವಿಶ್ವಾದ್ಯಂತ ಹೋರಾಡಲು ಉದ್ದೇಶಿಸಿರುವ ಗುಣಲಕ್ಷಣಗಳಲ್ಲಿ ಒಂದಾಗಿದೆ. ಗಾಜಾದ ಮೇಲೆ ಇಸ್ರೇಲ್ ನಡೆಸುತ್ತಿರುವ ನರಮೇಧದ ವಿರೋಧವನ್ನು "ಯೆಹೂದ್ಯ-ವಿರೋಧಿ" ಎಂದು ಹಣೆಪಟ್ಟಿ ಹಚ್ಚಲಾಗುತ್ತದೆ ಮತ್ತು ಈ ವಿರೋಧವನ್ನು ಯುಎಸ್ ವಿದೇಶಾಂಗ ನೀತಿಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುವ ಅಂಶವೆಂದು ಭಾವಿಸಲಾಗುತ್ತದೆ. ಮಾತ್ರವಲ್ಲ, ಯುಎಸ್ ವಿದೇಶಾಂಗ ನೀತಿಯ ಯಾವುದೇ ಅಂಶವನ್ನು ಟೀಕಿಸುವ ಯಾವುದೇ "ಅನ್ಯ"ರ ವಿರುದ್ಧವೂ ಇದೇ ಆರೋಪವನ್ನು ಮಾಡಬಹುದು ಮತ್ತು ಅಮೆರಿಕದ ವಿದೇಶಾಂಗ ನೀತಿಯ ವಿರುದ್ಧದ ಪ್ರದರ್ಶನಗಳಲ್ಲಿ ಭಾಗವಹಿಸುವ ಮೂಲಕ ಅಂತಹ "ಅನ್ಯ"ರಿಗೆ "ಸಹಾಯ ಮತ್ತು ಪ್ರೋತ್ಸಾಹ" ನೀಡುವ ಅಮೆರಿಕದ ನಾಗರಿಕರನ್ನೂ ಸಹ ವಿಚಾರಣೆಗೆ ಗುರಿಪಡಿಸಲು ನಿಸ್ಸಂದೇಹವಾಗಿ ಎಳೆದೊಯ್ಯಬಹುದು. ಅಂದರೆ, ಈ ನಿಬಂಧನೆಯನ್ನು ("ಯೆಹೂದ್ಯ-ವಿರೋಧಿ") ಅಮೆರಿಕದ ಸಾಮ್ರಾಜ್ಯಶಾಹಿಯು ಜಗತ್ತಿನ ಬೇರೆಡೆಗಳಲ್ಲಿ ಕೈಗೊಳ್ಳುವ ಕೃತ್ಯಗಳ ಕ್ರೌರ್ಯವನ್ನು ಮರೆಮಾಚುವ ಕ್ರಮವಾಗಿ ಬಳಸಿಕೊಳ್ಳಲಾಗುತ್ತದೆ.

ವ್ಯಾಪಕ ಬೇಟೆ

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಪ್ರಸ್ತುತ ಬೇಟೆಯ ವ್ಯಾಪ್ತಿಯು ವೆಕ್ಕಾರ್ಥಿ ಕಾಲದ ಬೇಟೆಗಿಂತಲೂ ಹೆಚ್ಚು ವ್ಯಾಪಕವಾಗಿದೆ. ಅಂದರೆ, ಮೆಕ್ಕಾರ್ಥಿ ಕಾಲದಲ್ಲಿ ಆಗಿದ್ದಂತೆ ಕೇವಲ ಕಮ್ಯುನಿಸ್ಟರು ಮತ್ತು ಅವರ ಮೇಲೆ ಅನುಕಂಪವುಳ್ಳ ಜನ ವಿಭಾಗದ ವಿರುದ್ಧ ಮಾತ್ರ ಈ ಬೇಟೆಯು ಗುರಿ ಇಟ್ಟಿಲ್ಲ. ಬದಲಿಗೆ, ಅದು ಅಮೆರಿಕದ ವಿದೇಶಾಂಗ ನೀತಿಯನ್ನು ಟೀಕೆ ಮಾಡುವ ಧೈರ್ಯ ತೋರುವ ಎಲ್ಲರ ವಿರುದ್ಧವೂ ಗುರಿ ಇಟ್ಟಿದೆ. ಮತ್ತು ಎಲ್ಲಕ್ಕಿಂತಲೂ ಮಿಗಿಲಾಗಿ, ಆಕ್ರಮಣಕಾರಿ ಮತ್ತು ವಿಸ್ತರಣಾವಾದಿ ಇಸ್ರೇಲಿ ವಲಸಿಗ-ವಸಾಹತುಶಾಹಿಯ ಮೂಲಕ ಇಡೀ

ಪುಟ 14 ಕ್ಕೆ



ಮೇ 20ರ ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಮತ್ತು ಸಕ್ರಿಯ ಬೆಂಬಲ

ಸಿಪಿಐ(ಎಂ) 24ನೇ ಮಹಾಧಿವೇಶನದ ನಿರ್ಣಯ

ಮೋದಿ ನೇತೃತ್ವದ ಬಿಜೆಪಿ–ಎನ್‌ಡಿಎ ಸರ್ಕಾರದ ನಾಲ್ಕು ಕಾರ್ಮಿಕ ಸಂಹಿತೆಗಳ ಅನುಷ್ಠಾನವನ್ನು ವಿರೋಧಿಸಿ, ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ಅಖಿಲ ಭಾರತ ವಲಯವಾರು ಒಕ್ಕೂಟಗಳ ಜಂಟಿ ವೇದಿಕೆ ಕರೆ ನೀಡಿರುವ ಮೇ 20, 2025ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿಪಿಐ(ಎಂ)ನ 24ನೇ ಮಹಾಧಿವೇಶನ ತನ್ನ ಸಂಪೂರ್ಣ ಮತ್ತು ಸಕ್ರಿಯ ಬೆಂಬಲವನ್ನು ನೀಡಲು ನಿರ್ಧರಿಸಿದೆ. ಈ ಕುರಿತು ಮಹಾಧಿವೇಶನದ ಮೊದಲ ದಿನದಂದು ಒಂದು ನಿರ್ಣಯವನ್ನು ಅದು ಅಂಗೀಕರಿಸಿತು.

'ಕಾರ್ಮಿಕ ಕಾನೂನು ಸುಧಾರಣೆಗಳು' ಎಂದು ಹೇಳಿಕೊಂಡು ಅಸ್ತಿತ್ವದಲ್ಲಿರುವ 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಲಾಗಿದೆ ಮತ್ತು ಅವನ್ನು ನಾಲ್ಕು ಕಾರ್ಮಿಕ ಸಂಹಿತೆಗಳು ಒಳಗೊಂಡಿರುತ್ತವೆ ಎಂದು ಹೇಳಲಾಗಿದೆ. ಇದು ಮೋದಿ ಸರ್ಕಾರವು ಆಕ್ರಮಣಕಾರಿಯಾಗಿ ಅನುಸರಿಸುತ್ತಿರುವ ನವ ಉದಾರವಾದಿ ಕಾರ್ಯಸೂಚಿಯ ಒಂದು ಭಾಗವಾಗಿದೆ ಎಂದು ಅಭಿಪ್ರಾಯ ಪಟ್ಟಿರುವ ಮಹಾಧಿವೇಶನ, ಇವುಗಳನ್ನು ಕಾರ್ಮಿಕ ವರ್ಗ ಶ್ರಮಪಟ್ಟು ಗೆದ್ದುಕೊಂಡಿರುವ ಕೆಲಸದ ಅವಧಿ, ಕನಿಷ್ಠ ವೇತನ, ಸಾಮಾಜಿಕ ಭದ್ರತೆಗೆ ಸಂಬಂಧಪಟ್ಟು ಮೂಲಭೂತ ಹಕ್ಕುಗಳನ್ನು, ಮುಖ್ಯವಾಗಿ ಕಾರ್ಮಿಕರ ಸಂಘಟನೆಯ ಹಕ್ಕು ಮತ್ತು ಮುಷ್ಕರ ಮಾಡುವ ಹಕ್ಕು ಸೇರಿದಂತೆ ಸಾಮೂಹಿಕ ಕಾರ್ಯಾಚರಣೆಯ ಹಕ್ಕನ್ನು ತೀವ್ರವಾಗಿ ಮೊಟಕುಗೊಳಿಸುವುದಕ್ಕಾಗಿಯೇ ತರಲಾಗುತ್ತಿದೆ ಎಂದು ಹೇಳಿದೆ.

ಕಾರ್ಮಿಕ ಕಾನೂನುಗಳನ್ನು ಸರಳೀಕರಿಸಲು ಮತ್ತು ಅವುಗಳ ವ್ಯಾಪ್ತಿಯನ್ನು ಸಾರ್ವತ್ರಿಕಗೊಳಿಸಲು ಇವನ್ನು ತರಲಾಗುತ್ತಿದೆ ಎಂಬ ಮೋದಿ ಸರ್ಕಾರದ ದಾವೆಗಳಿಗೆ ತದ್ವಿರುದ್ಧವಾಗಿ, ವಾಸ್ತವವಾಗಿ ಈ ಕಾರ್ಮಿಕ ಸಂಹಿತೆಗಳು ಅಸ್ತಿತ್ವದಲ್ಲಿರುವ ಕಾರ್ಮಿಕ ಕಾನೂನುಗಳ ಅಡಿಯಲ್ಲಿ ರಕ್ಷಣಾ ಕ್ರಮಗಳನ್ನು ಹೊಂದಿರುವ ಸಂಘಟಿತ ವಲಯದಲ್ಲಿರುವ ಕಾರ್ಮಿಕರೂ ಸೇರಿದಂತೆ, ಕಾರ್ಮಿಕರ ಬಹುದೊಡ್ಡ ವಿಭಾಗಗಳನ್ನು ಇಂತಹ ರಕ್ಷಣಾ ಕ್ರಮಗಳಿಂದ ಹೊರಗಿಡಲಾಗುತ್ತಿದೆ. ಸಾಮಾಜಿಕ ಭದ್ರತಾ ಸಂಹಿತೆಯು ನೌಕರರ ಭವಿಷ್ಯನಿಧಿ(ಇಪಿಎಫ್) ಮತ್ತು ಇಎಸ್‌ಐ ನಂತಹ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಕೈಯಾಡಿಸಲು, ಅವನ್ನು ದುರ್ಬಲಗೊಳಿಸಲು ಮತ್ತು ಸಂಬಂಧಿತ ಕಾಯ್ದೆಗಳಿಗೆ ಯಾವುದೇ ಸಂಸತ್ತಿನ ತಿದ್ದುಪಡಿಯ ಅಗತ್ಯವಿಲ್ಲದೆಯೇ ಮಾಲಕರು ಈ ಯೋಜನೆಗಳಿಂದ ಹೊರಬರಲು ಅವಕಾಶ ನೀಡುತ್ತದೆ. ದಲಿತರು, ಆದಿವಾಸಿಗಳು ಮತ್ತು ಒಬಿಸಿ ಕಾರ್ಮಿಕರೇ ಹೆಚ್ಚಾಗಿ ದುಡಿಯುತ್ತಿರುವ ಬೀಡಿ, ಕಬ್ಬಿಣದ ಅದಿರು, ಮೈಕಾ, ಸುಣ್ಣದ ಕಲ್ಲು, ಡಾಲಮೈಟ್ ಗಣಿಗಳಂತಹ ಕೈಗಾರಿಕೆಗಳಲ್ಲಿ ಲಕ್ಷಾಂತರ ಕಾರ್ಮಿಕರ ಸಾಮಾಜಿಕ ಭದ್ರತೆಗೆ ಆಯಾಯ ವಲಯಗಳ ನಿರ್ದಿಷ್ಟ ಕಾಯ್ದೆಗಳಿವೆ. ಈಗ ಸರ್ಕಾರವು ಅವುಗಳಿಗೆ ಸಂಬಂಧಪಟ್ಟ ಉಪಕರ(ಸೆಸ್)ಗಳ ಸಂಗ್ರಹಕ್ಕಾಗಿ ಸಂಬಂಧಿಸಿದ ಎಲ್ಲಾ ನಿಬಂಧನೆಗಳನ್ನು ರದ್ದುಗೊಳಿಸಿರುವುದರಿಂದ ಈ ಭದ್ರತಾ ಕ್ರಮಗಳೆಲ್ಲ ಈಗ ಅನಿಶ್ಚಿತತೆಗೆ ಸಿಲುಕುತ್ತವೆ.

24 ನೇ ಮಹಾಧಿವೇಶನದ ನಿರ್ಣಯ

ಇದಲ್ಲದೆ, ಮೋದಿ ಸರ್ಕಾರವು ಯುಎಪಿಎ, ಪಿಎಂಎಲ್‌ಎ ಮತ್ತು ಬಿಎನ್‌ಎಸ್ ನಂತಹ ಕಾಯಿದೆಗಳ ಅಡಿಯಲ್ಲಿನ ನಿಬಂಧನೆಗಳನ್ನು ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ನಿಗ್ರಹಿಸಲು ಬಳಸುತ್ತಿದೆ. ದೂರು ದಾಖಲಿಸುವುದು ಅಥವಾ ಕಾರ್ಮಿಕ ಇಲಾಖೆಗೆ ಪ್ರಾತಿನಿಧಿಕ ಮನವಿಗಳನ್ನು ನೀಡುವಂತಹ ಸಾಮೂಹಿಕ ಕಾರ್ಯಾಚರಣೆಗಳನ್ನು ಬಿಎನ್‌ಎಸ್‌ನ ಸೆಕ್ಷನ್ 111 ರ ಅಡಿಯಲ್ಲಿ 'ಸಂಘಟಿತ ಅಪರಾಧ' ಎಂದು ವ್ಯಾಖ್ಯಾನಿಸಲಾಗುತ್ತದೆ ಮತ್ತು ಕಾರ್ಮಿಕ ಸಂಘಗಳ ನಾಯಕರನ್ನು ಜಾಮೀನು ಇಲ್ಲದೆ ಜೈಲಿಗೆ ಹಾಕಲಾಗುತ್ತದೆ.

ಅದೇ ಸಮಯದಲ್ಲಿ, ಜನ ವಿಶ್ವಾಸ್ ಕಾಯ್ದೆಯ ಮೂಲಕ, ಸರ್ಕಾರವು 41 ಶಾಸನಗಳ ಅಡಿಯಲ್ಲಿ 180 ಅಪರಾಧಗಳನ್ನು ನಿರಪರಾಧೀಕರಣ(ಡಿಕ್ರಿಮಿನಲೈಸ್) ಗೊಳಿಸಿದೆ, ಉಲ್ಲಂಘನೆಗಳಿಗೆ ಮಾಲಿಕರಿಗೆ ವಿಧಿಸುವ ಜೈಲು ಶಿಕ್ಷೆಯ ನಿಬಂಧನೆಯನ್ನು ಹಿಂತೆಗೆದುಕೊಂಡಿದೆ ಮತ್ತು ಅವರಿಗೆ ಶಿಕ್ಷೆಯನ್ನು ದಂಡಕ್ಕೆ ಸೀಮಿತಗೊಳಿಸಿದೆ. ಕಳೆದ ಕೇಂದ್ರ ಬಜೆಟ್‌ನಲ್ಲಿ 100ಕ್ಕೂ ಹೆಚ್ಚು ನಿಬಂಧನೆಗಳನ್ನು ಇನ್ನು ಮುಂದೆ ಅಪರಾಧಗಳಾಗಿ ಪರಿಗಣಿಸುವುದಿಲ್ಲ ಎಂದು ಸೂಚಿಸಿದೆ.

'ಸುಗಮ ವ್ಯಾಪಾರ'ದ ಹೆಸರಿನಲ್ಲಿ ಜಾರಿಗೆ ತರಲಾಗುತ್ತಿರುವ ಕಾರ್ಮಿಕ ಸಂಹಿತೆಗಳು ಮತ್ತು ಇತರ ಎಲ್ಲಾ ಕ್ರಮಗಳು ಕಾರ್ಮಿಕ ವರ್ಗದ ಸಂಘಟಿತ ಶಕ್ತಿಯಾದ ಕಾರ್ಮಿಕ ಸಂಘಗಳನ್ನು ದುರ್ಬಲಗೊಳಿಸುವ ಮತ್ತು ಕಾರ್ಮಿಕರ ಮೇಲೆ ವಾಸ್ತವವಾಗಿ ಗುಲಾಮಗಿರಿಯ ಪರಿಸ್ಥಿತಿಗಳನ್ನೇ ಹೇರುವ ಮೂಲಕ ದೇಶೀ ಮತ್ತು ವಿದೇಶಿ ದೊಡ್ಡ ಕಾರ್ಪೊರೇಟ್‌ಗಳಿಂದ ಲಂಗುಲಗಾಮಿಲ್ಲದ ಶೋಷಣೆಗೆ ಅನುವು ಮಾಡಿಕೊಡುವ ಪ್ರಯತ್ನಗಳಲ್ಲದೆ ಬೇರೇನೂ ಅಲ್ಲ ಎಂದು ಸಿಪಿಐ(ಎಂ) ಮಹಾಧಿವೇಶನ ಹೇಳಿದೆ.

ನವಉದಾರವಾದ ಆರಂಭವಾದಂದಿನಿಂದಲೂ ಬಂಡವಾಳಶಾಹಿ ವರ್ಗದ ಪರವಾಗಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಪ್ರಯತ್ನಗಳು ತೀವ್ರಗೊಂಡಿವೆ. 2019ರಲ್ಲಿ ಅಧಿಕಾರಕ್ಕೆ ಮರಳಿದ ಕೂಡಲೇ ಮೋದಿ ಸರ್ಕಾರವು ಕಾನೂನುಗಳನ್ನು ಸಂಹಿತೆಗಳಾಗಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ ಮತ್ತು 2019–20 ರಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಅಂಗೀಕರಿಸಿದೆ. ಆದರೆ ಇಲ್ಲಿಯವರೆಗೆ ಅದಕ್ಕೆ ಈ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ, ಇದಕ್ಕೆ ಪ್ರಮುಖ ಕಾರಣವೆಂದರೆ ಕಾರ್ಮಿಕ ವರ್ಗದ ಐಕ್ಯ ಚಳುವಳಿಯ ತೀವ್ರ ಪ್ರತಿರೋಧ.

ಈ ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸುವ ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ಸಂಪೂರ್ಣವಾಗಿ ಬೆಂಬಲಿಸುವುದಾಗಿ ನಿರ್ಧರಿಸಿರುವ ಸಿಪಿಐ(ಎಂ)ನ 24ನೇ ಮಹಾಧಿವೇಶನ ಮೇ 20, 2025ರಂದು ನಡೆಯಲಿರುವ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಸಕ್ರಿಯವಾಗಿ ಬೆಂಬಲಿಸುವಂತೆ ತನ್ನ ಎಲ್ಲಾ ಸಮಿತಿಗಳು ಮತ್ತು ಶಾಖೆಗಳಿಗೆ ಕರೆ ನೀಡಿದೆ.

ಮರಳಿ ಬರುತ್ತಿದೆ ಚಿಂತಕರ ಬೇಟೆಯಾಡುವ.....

ಪುಟ 13 ರಿಂದ

ಪಶ್ಚಿಮ ಏಷ್ಯಾವನ್ನು ನಿಯಂತ್ರಿಸುವ ಅಮೆರಿಕದ ವಿದೇಶಾಂಗ ನೀತಿಯನ್ನು ಟೀಕೆಮಾಡುವ ಧೈರ್ಯ ತೋರುವ ಎಲ್ಲರ ವಿರುದ್ಧವೂ ಗುರಿ ಇಟ್ಟಿದೆ.



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಎರಡನೆಯದಾಗಿ, ಶೀತಲ ಸಮರದ ಸಂದರ್ಭದಲ್ಲಿ ಮೆಕ್ಕಾರ್ಥಿವಾದವನ್ನು ಹರಿಯ ಬಿಡಲಾಯಿತು. ಶೀತಲ ಸಮರವು ಸ್ವತಃ ಎರಡನೇ ಮಹಾಯುದ್ಧದ ಸಮಯದಲ್ಲಿ ಸೋವಿಯತ್ ಒಕ್ಕೂಟವು ಗಳಿಸಿದ್ದ ಪ್ರತಿಷ್ಠೆ ಮತ್ತು ಆಕರ್ಷಣೆಯ ವಿರುದ್ಧವಾಗಿ ಸಾಮ್ರಾಜ್ಯಶಾಹಿಯು ನಡೆಸಿದ ಕಾಳಗದ ಒಂದು ಭಾಗವಾಗಿತ್ತು. ಯುದ್ಧದಿಂದಾಗಿ ಹೇಳಲಾಗದಷ್ಟು ಹಾನಿಗೆ ಒಳಗಾಗಿದ್ದ ಸೋವಿಯತ್ ಒಕ್ಕೂಟವು ಆಕ್ರಮಣಕಾರಿ ಉದ್ದೇಶಗಳನ್ನು ಹೊಂದಿರಲಿಲ್ಲವಾದರೂ, ಸಾಮ್ರಾಜ್ಯಶಾಹಿಯು ಸೋವಿಯತ್ ಆಕ್ರಮಣದ ಒಂದು ಗುಮ್ಮವನ್ನು ಸೃಷ್ಟಿಸಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಮೆಕ್ಕಾರ್ಥಿವಾದವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಯ ಒಂದು ನಿರ್ದಿಷ್ಟ ಕಾರ್ಯತಂತ್ರದ ಭಾಗವಾಗಿತ್ತು. ಆದರೆ, ಟ್ರಂಪ್ ಅವರ ಪ್ರಸ್ತುತ ದಾಳಿಯು ಯಾವುದೇ ನಿರ್ದಿಷ್ಟ ಶಕ್ತಿಯಿಂದ ಸಾಮ್ರಾಜ್ಯಶಾಹಿಗೆ ಯಾವುದೇ ನಿರ್ದಿಷ್ಟ ಬೆದರಿಕೆ ಎದುರಾಗಿದೆ ಎಂಬ ಕಾರಣವನ್ನು ಕೊಡಲಾಗದ ಪರಿಸ್ಥಿತಿಯಲ್ಲಿ ಬರುತ್ತಿದೆ. ನವ–ಉದಾರವಾದಿ ವ್ಯವಸ್ಥೆಯಿಂದ ಉಂಟಾದ ಬಿಕ್ಕಟ್ಟಿನಿಂದ ಹತಾಶೆಗೆ ತಳ್ಳಲ್ಪಟ್ಟ ದೇಶಗಳ ಸಂಖ್ಯೆ ಬಹಳ ದೊಡ್ಡದಾಗಿದ್ದು, ಅವು ತಮ್ಮ ಮೇಲೆ ಹೇರಲಾದ ಆರ್ಥಿಕ ವ್ಯವಸ್ಥೆಗಳಿಂದ ಅಲ್ಪ–ಸ್ವಲ್ಪ ಪರಿಹಾರವನ್ನು ಹುಡುಕುತ್ತಿರುವ ಸನ್ನಿವೇಶದಲ್ಲಿ ಅವು ಯಾವ ಬೆದರಿಕೆಯನ್ನೂ ಒಡ್ಡುವ ಸ್ಥಿತಿಯಲ್ಲಿ ಇಲ್ಲ. ಹೀಗಿರುವಾಗ, ಸಾಮ್ರಾಜ್ಯಶಾಹಿಯು ತನ್ನ ಆಕ್ರಮಣಕೋರತನವನ್ನು ಮುಚ್ಚಿಹಾಕುವ ಒಂದು ಸರಳ ಉದ್ದೇಶವನ್ನು ಈ ದಾಳಿ ಹೊಂದಿದೆ ಎಂಬುದೇ ವಾಸ್ತವ. ಹಾಗಾಗಿ, ಟ್ರಂಪ್ ಅವರ ದಾಳಿಯ ಸಂದರ್ಭವು ಸಾಮ್ರಾಜ್ಯಶಾಹಿಯ ನೈತಿಕ ದಿವಾಳಿತನ ಆಗಿದೆಯೇ ಹೊರತು, ಸಾಮ್ರಾಜ್ಯಶಾಹಿಯಲ್ಲದ ಯಾವುದೇ ನಿರ್ದಿಷ್ಟ ಶಕ್ತಿಯ ನೈತಿಕ ಸ್ಥಾನಮಾನದ ಹಠಾತ್ತಾಗಿ ಹೆಚ್ಚಿದೆ ಎಂದೇನೂ ಅಲ್ಲ.

ಮೂರನೆಯದಾಗಿ, ವಾಕ್ ಸ್ವಾತಂತ್ರ್ಯದ ಮೇಲಿನ ಟ್ರಂಪ್ ಅವರ ದಾಳಿಯು ಮೆಕ್ಕಾರ್ಥಿವಾದಕ್ಕಿಂತಲೂ ವಿಶಾಲವಾದ ಗುರಿಯನ್ನು ಹೊಂದಿದೆ ಎಂಬುದನ್ನು, ಟ್ರಂಪ್ ಆಡಳಿತವು ಯುಎಸ್ ವಿಶ್ವವಿದ್ಯಾನಿಲಯಗಳು ತಮ್ಮ ವ್ಯವಹಾರಗಳನ್ನು ಹೇಗೆ ನಿರ್ವಹಿಸಬೇಕೆಂದು ನಿರ್ದೇಶಿಸುತ್ತಿರುವ ಮತ್ತು ಈ ನಿರ್ದೇಶನಗಳನ್ನು ಪಾಲಿಸದಿದ್ದರೆ ಸರ್ಕಾರ ಒದಗಿಸುವ ಹಣವನ್ನು ತಡೆಹಿಡಿಯುತ್ತಿರುವ ಸಂಪೂರ್ಣ ಅಸಾಂವಿಧಾನಿಕ ವಿಧಾನವು ದೃಢಪಡಿಸುತ್ತದೆ. ಕೊಲಂಬಿಯಾ ವಿಶ್ವವಿದ್ಯಾಲಯವು ತನ್ನ ಕಾರ್ಯಚಟುವಟಿಕೆಯಲ್ಲಿ ಹಲವಾರು ಬದಲಾವಣೆಗಳನ್ನು ಕೈಗೊಳ್ಳಬೇಕೆಂಬ ಟ್ರಂಪ್ ಆಡಳಿತದ ಆಗ್ರಹಕ್ಕೆ ಒಪ್ಪದಿದ್ದಾಗ, ಫೆಡರಲ್ ಸರ್ಕಾರವು ಒದಗಿಸುತ್ತಿದ್ದ $450 ಮಿಲಿಯನ್ ಹಣವನ್ನು ತಡೆಹಿಡಿಯಿತು. ಆನಂತರದಲ್ಲಿ ವಿಶ್ವವಿದ್ಯಾನಿಲಯವು ಇದಕ್ಕೆ ಒಪ್ಪಿಕೊಂಡಿದೆ ಎಂದು ಈಗ ವರದಿಯಾಗಿದೆ. ಟ್ರಂಪ್ ಆಡಳಿತದ ಈ ಕ್ರಮವು ಶೈಕ್ಷಣಿಕ ಸ್ವಾತಂತ್ರ್ಯವನ್ನು ಬಹಳವಾಗಿ ಮೊಟಕುಗೊಳಿಸುತ್ತದೆ. ವಿಶ್ವವಿದ್ಯಾನಿಲಯಗಳನ್ನು ಸರ್ಕಾರಕ್ಕೆ ತೃಪ್ತಿಯಾಗುವಂತೆ ನಡೆಸಬೇಕು ಎಂಬ ಷರತ್ತಿನ ಮೇಲೆ ಫೆಡರಲ್ ನಿಧಿಗಳನ್ನು ಒದಗಿಸುವ ಕ್ರಮವು ಒಂದು ವಿಶ್ವವಿದ್ಯಾನಿಲಯದ ಸ್ವಾಯತ್ತತೆಯ ಉಲ್ಲಂಘನೆಯಷ್ಟೇ ಅಲ್ಲ, ಅದರ ಶೈಕ್ಷಣಿಕ ವಾತಾವರಣವನ್ನು ಹಾಳುಗೆಡಹುವ ಕ್ರಮವೂ ಆಗುತ್ತದೆ. ಇದು, ವಿಶ್ವವಿದ್ಯಾನಿಲಯಗಳು ಸೃಜನಶೀಲ ಹಾಗೂ ವಿಮರ್ಶಾತ್ಮಕ ಚಿಂತನೆಗಳಿಗೆ ತಾಣಗಳಾಗುವ ಬದಲು ಸರ್ಕಾರದ ಅಂಗಗಳಾಗುವಂತೆ ನಿರ್ಬಂಧಿಸುತ್ತದೆ. ಮೆಕ್ಕಾರ್ಥಿವಾದಕ್ಕೆ ಹೋಲಿಸಿದರೆ ಇದು ನಿಜಕ್ಕೂ ಹೊಸದೇ ಹೌದು.

ದಮನಕಾರಿ ಮಿಲಿಟರಿವಾದದತ್ತ

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಚಿಂತನೆಯ ಮೇಲೆ ಈಗ ನಡೆಯುತ್ತಿರುವ ನವ–ಫ್ಯಾಸಿಸ್ಟ್ ದಾಳಿಯು 1950ರ ದಶಕದ ಮೆಕ್ಕಾರ್ಥಿಯ ದಾಳಿಗಿಂತಲೂ ವ್ಯಾಪಕವಾಗಿದೆ ಎಂಬುದನ್ನು ನಾವೀಗ ನೋಡುತ್ತಿದ್ದೇವೆ. ನವ–ಫ್ಯಾಸಿಸ್ಟ್ ಅಲ್ಲದ ಆಡಳಿತಗಳನ್ನು ಹೊಂದಿರುವ ಇತರೆ ಸಾಮ್ರಾಜ್ಯಶಾಹಿ ದೇಶಗಳಲ್ಲಿಯೂ ಸಹ, ವಿಮರ್ಶಾತ್ಮಕ ಚಿಂತನೆ ಮತ್ತು ವಾಕ್ ಸ್ವಾತಂತ್ರ್ಯಗಳು ದಾಳಿಗೆ ಒಳಗಾಗುತ್ತಿವೆ. ಉದಾಹರಣೆಗೆ, ಯುರೋಪಿನಲ್ಲಿ ರಷ್ಯಾದ ವಿಸ್ತರಣಾವಾದದ ಬೆದರಿಕೆ ಉಂಟಾಗಿದೆ ಎಂಬ ಸಂಪೂರ್ಣವಾಗಿಯೂ ಆಧಾರರಹಿತವಾದ ಡಂಗುರವನ್ನು ಬಾರಿಸಲಾಗುತ್ತಿದೆ (ವಾಸ್ತವವೆಂದರೆ, ನ್ಯಾಟೋ ವಿಸ್ತರಣೆ ರಷ್ಯಾದ ಗಡಿಗಳವರೆಗೂ ಆಗಿದೆ ಮತ್ತು ಲಿಥುವೇನಿಯಾದಲ್ಲಿ ಜರ್ಮನ್ ಪಡೆಗಳನ್ನು ನಿಯೋಜಿಸಲಾಗಿದೆ). ಆದರೆ, ➚

ಸಿಪಿಐ(ಎಂ) 24ನೇ ಮಹಾಧಿವೇಶನ: ರಾಜಕೀಯ ನಿರ್ಣಯದ ಮೇಲೆ ಚರ್ಚೆ





ಸಿಪಿಐ(ಎಂ)ನ 24ನೇ ಮಹಾಧಿವೇಶನದ ಪ್ರತಿನಿಧಿ ಅಧಿವೇಶನವು ಏಪ್ರಿಲ್ 2, 2025ರಂದು ಮಧ್ಯಾಹ್ನ ಪ್ರಾರಂಭವಾಯಿತು. 729 ಪ್ರತಿನಿಧಿಗಳು ಮತ್ತು 79 ವೀಕ್ಷಕರು ಮಹಾಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ. ಕೇಂದ್ರ ಸಮಿತಿಯ ಪರವಾಗಿ, ಪೊಲಿಟ್ ಬ್ಯೂರೋದ ಸಂಯೋಜಕರಾದ ಪ್ರಕಾಶ್ ಕಾರಟ್ ಅವರು ಏಪ್ರಿಲ್ 2, 2025ರಂದು ಮಧ್ಯಾಹ್ನದ ಅಧಿವೇಶನದಲ್ಲಿ 24ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ ಮತ್ತು ರಾಜಕೀಯ ವಿಮರ್ಶೆಯನ್ನು ಮಂಡಿಸಿದರು ಎಂದು ಏಪ್ರಿಲ್ 3 ರಂದು ನೀಡಿದ ಮಹಾಧಿವೇಶನದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಬಿಡುಗಡೆ ಮಾಡಿದರು.

ಕರಡು ರಾಜಕೀಯ ನಿರ್ಣಯದ ಮುಖ್ಯ ಒತ್ತು ಹಿಂದುತ್ವ ಶಕ್ತಿಗಳ ಹೆಚ್ಚುತ್ತಿರುವ ಬೆದರಿಕೆಗೆ ಎದುರಾಗಿ ಹೋರಾಡುವ ಮಾರ್ಗಗಳ ಮೇಲೆ ಇದೆ. ಕಾರ್ಪೊರೇಟ್‌ಗಳೊಂದಿಗೆ ನಂಟು ಹೊಂದಿರುವ ಕೋಮುವಾದಿ ಶಕ್ತಿಗಳು ತಮ್ಮ ವಿಭಜಕ ಸಿದ್ಧಾಂತವನ್ನು ಹರಡುತ್ತಿವೆ. ಬಿಜೆಪಿ ನೇತೃತ್ವದ ಸರ್ಕಾರವು ಕೇಂದ್ರದಲ್ಲಿ ಸತತ ಮೂರು ಅವಧಿಗೆ ಅಧಿಕಾರದಲ್ಲಿರುವುದರಿಂದ, ಆರ್‌ಎಸ್‌ಎಸ್ ಮತ್ತು ಸಂಘಪರಿವಾರವು ಪ್ರಭುತ್ವ ಅಧಿಕಾರ ಲಭ್ಯಗೊಂಡಿರುವುದನ್ನು ಪ್ರಭುತ್ವದ ಎಲ್ಲಾ ಅಂಗಗಳೊಳಗೆ ನುಸುಳಿ ಇಡೀ ಸಮಾಜವನ್ನು ಕೋಮುವಾದೀಕರಿಸಲು ಬಳಸುತ್ತಿದೆ. ಹಿಂದುತ್ವದ ಬೆದರಿಕೆಯನ್ನು ಸಮಗ್ರವಾಗಿ ಮುಖಾಮುಖಿಯಾಗಿ ಎದುರಿಸಲು, ಚುನಾವಣಾ ರಂಗದಲ್ಲಿ ಹೋರಾಡುವುದರ ಜೊತೆಗೆ ಆರ್ಥಿಕ, ಸಾಮಾಜಿಕ, ಸೈದ್ಧಾಂತಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿಯೂ ಹೋರಾಡಬೇಕು ಎಂದು ಕರಡು ನಿರ್ಣಯ ವಿಶ್ಲೇಷಿಸುತ್ತದೆ.

ಹಿಂದುತ್ವ ಶಕ್ತಿಗಳ ಎದುರು ಹೋರಾಡಲು, ಪಕ್ಷದ ಸ್ವತಂತ್ರ ಶಕ್ತಿಯನ್ನು ಕಟ್ಟುವುದು ಅತ್ಯಗತ್ಯ ಎಂದು ಕರಡು ನಿರ್ಣಯವು ಹೇಳುತ್ತದೆ. ಇದಕ್ಕಾಗಿ, ಪಕ್ಷವು ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಬಲಪಡಿಸಬೇಕೆಂದು ಅದು ಕರೆ ನೀಡುತ್ತದೆ.

ಎಡ ಐಕ್ಯತೆಯನ್ನು ಬಲಪಡಿಸುವ ಮತ್ತು ಆರ್‌ಎಸ್‌ಎಸ್–ಬಿಜೆಪಿಯ ಹಿಂದುತ್ವ ಕೋಮುವಾದಿ ನೀತಿಗಳ ವಿರುದ್ಧದ ಹೋರಾಟಕ್ಕೆ ಸೇರಲು ಸಿದ್ಧವಾಗಿರುವ ಎಲ್ಲಾ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳನ್ನು, ಶಕ್ತಿಗಳನ್ನು ಅಣಿನೆರೆಸುವ ಅಗತ್ಯವನ್ನು ಕರಡು ನಿರ್ಣಯವು ಒತ್ತಿಹೇಳುತ್ತದೆ.



ಕರ್ನಾಟಕದ ಮೀನಾಕ್ಷಿ ಸುಂದರಂ

ಪಕ್ಷದ ಎಲ್ಲಾ ಹಂತಗಳಲ್ಲಿ ಚರ್ಚೆಗಾಗಿ ಮಹಾಧಿವೇಶನದ ಎರಡು ತಿಂಗಳ ಮೊದಲು ಬಿಡುಗಡೆಯಾದ ಕರಡು ರಾಜಕೀಯ ನಿರ್ಣಯದ ಮೇಲೆ ಬಂದ ತಿದ್ದುಪಡಿಗಳ ಕುರಿತ ವರದಿಯನ್ನು ಮಹಾಧಿವೇಶನದಲ್ಲಿ ಮಂಡಿಸಲಾಯಿತು. 3,424 ತಿದ್ದುಪಡಿಗಳು ಮತ್ತು 84 ಸಲಹೆಗಳು ಬಂದವು. ಇವುಗಳಲ್ಲಿ 133 ತಿದ್ದುಪಡಿಗಳನ್ನು ಅಂಗೀಕರಿಸಲಾಗಿದೆ ಎಂದು ಮಹಾಧಿವೇಶನಕ್ಕೆ ತಿಳಿಸಲಾಯಿತು.

ಕರಡು ರಾಜಕೀಯ ನಿರ್ಣಯದ ಕುರಿತು ಚರ್ಚೆ

ಕರಡು ನಿರ್ಣಯದ ಕುರಿತು ಚರ್ಚೆ ಮಹಾಧಿವೇಶನದ ಎರಡನೇ ದಿನ (ಏಪ್ರಿಲ್ 3, 2025) ಬೆಳಿಗ್ಗೆಯಿಂದ ಪ್ರಾರಂಭವಾಗಿದ್ದು, ಏಪ್ರಿಲ್ 4ರ ವರೆಗೆ ಮುಂದುವರಿಯುತ್ತದೆ. ಈ ಪತ್ರಿಕಾ ಪ್ರಕಟಣೆಯನ್ನು ನೀಡುವ ವೇಳೆಗೆ ಚರ್ಚೆಯಲ್ಲಿ ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ, ತಮಿಳುನಾಡು, ಅಸ್ಸಾಂ, ಕರ್ನಾಟಕ, ಒಡಿಶಾ, ಉತ್ತರ ಪ್ರದೇಶ, ಹರಿಯಾಣ, ಮಧ್ಯಪ್ರದೇಶ, ಉತ್ತರಾಖಂಡ, ಆಂಧ್ರಪ್ರದೇಶ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಹಿಮಾಚಲ ಪ್ರದೇಶದ 18 ಪ್ರತಿನಿಧಿಗಳು ಭಾಗವಹಿಸಿದ್ದರು. ಕರ್ನಾಟಕದಿಂದ ಮೀನಾಕ್ಷಿ ಸುಂದರಂ ಮಾತನಾಡಿದರು.

ಎರಡು ನಿರ್ಣಯಗಳು

ಪ್ರತಿನಿಧಿ ಅಧಿವೇಶನದಲ್ಲಿ, ಮೊದಲ ದಿನ ಎರಡು ನಿರ್ಣಯಗಳನ್ನು ಪರಿಚಯಿಸಲಾಯಿತು ಮತ್ತು ಅಂಗೀಕರಿಸಲಾಯಿತು. ಕಾರ್ಮಿಕ ಸಂಹಿತೆಗಳ ವಿರುದ್ಧ ಕೇಂದ್ರ ಕಾರ್ಮಿಕ ಸಂಘಗಳು ಯೋಜಿಸಿರುವ 'ಮೇ 20, 2025ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿ' ಎಂದು ಮೊದಲ ನಿರ್ಣಯ ಕರೆ ನೀಡಿದೆ. ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಕಾರ್ಮಿಕ ವರ್ಗದ ಐಕ್ಯ ಹೋರಾಟಕ್ಕೆ ಮಹಾಧಿವೇಶನ ತನ್ನ ಸಂಪೂರ್ಣ ಬೆಂಬಲವನ್ನು ನೀಡಿತು ಮತ್ತು ಸಾರ್ವತ್ರಿಕ ಮುಷ್ಕರವನ್ನು ಸಕ್ರಿಯವಾಗಿ ಬೆಂಬಲಿಸುವಂತೆ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿತು.

ಈ ನಿರ್ಣಯವನ್ನು ಕೇಂದ್ರ ಸಮಿತಿಯ ಸದಸ್ಯರಾದ ಕೆ. ಹೇಮಲತಾ ಮಂಡಿಸಿದರು ಮತ್ತು ಕೇಂದ್ರ ಸಮಿತಿಯ ಸದಸ್ಯರಾದ ಅಮಿಯಾ ಪಾತ್ರ ಅನುಮೋದಿಸಿದರು.

ಎರಡನೇ ನಿರ್ಣಯವು 'ಆರ್‌ಎಸ್‌ಎಸ್–ಬಿಜೆಪಿ ಮತ್ತು ಸಂಘಪರಿವಾರದ ದುಷ್ಟ ಕೋಮುವಾದಿ ದಾಳಿಗಳನ್ನು ಎದುರಿಸುವ ಕುರಿತಾದದ್ದು. ಇದನ್ನು ಕೇಂದ್ರ ಸಮಿತಿಯ ಸದಸ್ಯರಾದ ಪಿ. ರಾಜೀವ್ ಮಂಡಿಸಿದರು ಮತ್ತು ಮಧು ಗರ್ಗ್ ಅವರು ಅನುಮೋದಿಸಿದರು.

ಮಹಾಧಿವೇಶನಕ್ಕೆ ಚೀನಾ, ವಿಯೆಟ್ನಾಂ, ಉತ್ತರ ಕೊರಿಯ, ಲಾವೊಸ್, ರಷ್ಯ, ಕ್ಯೂಬಾ, ಆಸ್ಟ್ರೇಲಿಯ, ಬಾಂಗ್ಲಾದೇಶ(2), ಬೆಲ್ಜಿಯಂ, ಬ್ರೆಝಿಲ್, ಬರ್ಮಾ, ಕ್ಯಾಟಲೋನಿಯ, ಚೆಕೊಸ್ಲೊವಾಕಿಯಾ, ಚಿಲಿ, ಸೈಪ್ರಸ್, ಫ್ರಾನ್ಸ್, ಗ್ಯಾಲಿಷಿಯಾ, ಜರ್ಮನಿ(2), ಗ್ರೀಸ್, ಇರಾನ್, ಐರ್ಲೆಂಡ್, ಇಟಲಿ, ಜಪಾನ್, ಕೀನ್ಯ, ನೇಪಾಳ, ಪಾಕಿಸ್ತಾನ(2), ಪ್ಯಾಲಸ್ತೀನ್, ಪೋರ್ಚುಗಲ್, ಶ್ರೀಲಂಕ(2), ದಕ್ಷಿಣ ಆಫ್ರಿಕ, ತುರ್ಕಿಯೆ, ಯುಎಸ್‌ಎ ಮತ್ತು ವೆನೆಜುವೆಲದ ಒಟ್ಟು 38 ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಿಂದ ಶುಭಾಶಯ ಸಂದೇಶಗಳು ಬಂದಿವೆ ಎಂದು ಈ ಪತ್ರಿಕಾ ಹೇಳಿಕೆ ತಿಳಿಸಿದೆ.

ಅದೇ ಸಮಯದಲ್ಲಿ, ಗಾಜಾದಲ್ಲಿ ಇಸ್ರೇಲಿನ ಕ್ರಮಕ್ಕೆ ಪೂರ್ಣ ಬೆಂಬಲವೂ ಇದೆ. ವಾಸ್ತವವಾಗಿ, ಇಸ್ರೇಲಿನ ವಿರುದ್ಧ ಮಾಡುವ ಯಾವುದೇ ಟೀಕೆಯನ್ನು ಯೆಹೂದ್ಯ–ವಿರೋಧಿ ಎಂದು ಕರೆಯಲಾಗುತ್ತಿದೆ. ಗಾಜಾದಲ್ಲಿ ನಡೆಯುತ್ತಿರುವ ನರಮೇಧವನ್ನು ಚರ್ಚಿಸುವ ಸಲುವಾಗಿ ಕರೆಯುವ ಸಭೆಗಳನ್ನು ಜರ್ಮನಿಯಲ್ಲಿ ಅಧಿಕೃತವಾಗಿ ರದ್ದುಗೊಳಿಸಲಾಗುತ್ತಿದೆ.

ಈ ರೀತಿಯಲ್ಲಿ ಸಾಮ್ರಾಜ್ಯಶಾಹಿ ದೇಶಗಳು, ಅವು ನವ–ಫ್ಯಾಸಿಸ್ಟ್ ಆಳ್ವಿಕೆಯಲ್ಲಿರಲಿ ಅಥವಾ ಉದಾರವಾದಿ ಬೂರ್ಜ್ವಾ ಆಡಳಿತದಲ್ಲಿರಲಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ತೀವ್ರವಾದ ದಾಳಿಯನ್ನು ಮಾಡುತ್ತಿವೆ ಮತ್ತು ಹೆಚ್ಚು ಹೆಚ್ಚು ದಮನಕಾರಿಯೂ ಆಗುತ್ತಿವೆ. ನವ–ಫ್ಯಾಸಿಸ್ಟ್ ಆಡಳಿತಗಳು ತುಲನಾತ್ಮಕವಾಗಿ ಹೆಚ್ಚು ದಮನಕಾರಿಯಾಗಿದ್ದರೂ, ಉದಾರವಾದಿ ಬೂರ್ಜ್ವಾ ಆಡಳಿತಗಳೇನೂ ಅವುಗಳಿಗಿಂತ ಹಿಂದೆ ಬಿದ್ದಿಲ್ಲ. ಅಷ್ಟೇ ಅಲ್ಲ, ಈ ವಿದ್ಯಮಾನವು ಸಾಮ್ರಾಜ್ಯಶಾಹಿ ದೇಶಗಳೂ ಸಹ ಮಿಲಿಟರಿ ವೆಚ್ಚವನ್ನು ಹೆಚ್ಚಿಸಿಕೊಳ್ಳುತ್ತಿರುವ ಸಮಯದಲ್ಲಿ ಸಂಭವಿಸುತ್ತಿದೆ. ಜರ್ಮನಿಯು ತನ್ನನ್ನು ತಾನು ಯುದ್ಧ ಸನ್ನದ್ಧಗೊಳಿಸಿಕೊಳ್ಳುವ ಸಲುವಾಗಿ ಹೆಚ್ಚು ಹೆಚ್ಚು ಖರ್ಚು ಮಾಡಲು ಅನುವಾಗುವಂತೆ ತಾನು ಹೊಂದಬಹುದಾದ ಹಣಕಾಸಿನ ಕೊರತೆಯ ಮೇಲಿನ ಮಿತಿಯನ್ನು ತೆಗೆದುಹಾಕುವ ಸಾಂವಿಧಾನಿಕ ತಿದ್ದುಪಡಿಯನ್ನು ಅಂಗೀಕರಿಸಿದೆ. ಫ್ರಾನ್ಸ್ ಮತ್ತು ಇಂಗ್ಲೆಂಡ್ ಕೂಡ ತಮ್ಮ ಒಟ್ಟು ದೇಶೀಯ ಉತ್ಪನ್ನಕ್ಕೆ ಹೋಲಿಸಿದರೆ ತಮ್ಮ ಮಿಲಿಟರಿ ವೆಚ್ಚಗಳನ್ನು ಹೆಚ್ಚಿಸಿಕೊಳ್ಳುತ್ತಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮೆಟ್ರೋಪಾಲಿಟನ್ ಬಂಡವಾಳಶಾಹಿಯು ದಮನಕಾರಿ ಮಿಲಿಟರಿವಾದದ ಹಂತವನ್ನು ಪ್ರವೇಶಿಸುತ್ತಿದೆ. ಎರಡನೇ ಮಹಾಯುದ್ಧದ ನಂತರದ ಕಾಲದಲ್ಲಿ ಇಂಥಹ ಒಂದು ವಿದ್ಯಮಾನವನ್ನು ನಾವು ಕಂಡಿರಲಿಲ್ಲ. ಇದು ವಿಶ್ವದ ಜನತೆಗೆ ಕೇಡಿನ ಒಂದು ಸೂಚನೆಯೇ ಸರಿ.

ಕೇರಳದ ಪ್ರಜಾಸತ್ತಾತ್ಮಕ ಸಾಧನೆಗಳನ್ನು ಹರಡಲು........ ಪುಟ 11 ರಿಂದ

ಇಂತಹ ಒಂದು ಫಲಿತಾಂಶ ಬರದಂತೆ ತಡೆಯಬೇಕು ಎಂದೇ ಕೇಂದ್ರದಲ್ಲಿರುವ ಬಿಜೆಪಿ–ಎನ್‌ಡಿಎ ಆಳ್ವಿಕೆಯು ನಿಖರವಾಗಿ ಬಯಸುತ್ತಿರುವುದು. ಆಡಳಿತಾತ್ಮಕ ಕೈಚಳಕಗಳನ್ನು ನಡೆಸಲು ರಾಜ್ಯಪಾಲರ ಹುದ್ದೆಯನ್ನು ನಿಯೋಜಿಸುವುದಲ್ಲದೆ, ಮಸೂದೆಗಳಿಗೆ ಒಪ್ಪಿಗೆಯನ್ನು ತಡೆಹಿಡಿಯುವ ಮೂಲಕ ರಾಜ್ಯದ ಶಾಸಕಾಂಗದ ಅಧಿಕಾರವನ್ನು ದುರ್ಬಲಗೊಳಿಸುವುದರ ಮೂಲಕ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಹಣಕಾಸು ಅವಕಾಶಗಳನ್ನು ವ್ಯವಸ್ಥಿತವಾಗಿ ಹಿಂಡುತ್ತಿದೆ.

ಕೇರಳಕ್ಕೆ ಹಣಕಾಸು ಆಯೋಗ ನೀಡಿದ ತೆರಿಗೆಯ ಪಾಲು 10ನೇ ಯುಎಫ್‌ಸಿ ಅವಧಿಯಲ್ಲಿ ಶೇ.3.9 ಇದ್ದದ್ದು, ಪ್ರಸ್ತುತ 15ನೇ ಯುಎಫ್‌ಸಿಯಲ್ಲಿ ಶೇ.1.9ಕ್ಕೆ ಇಳಿದಿದೆ. ಕೇಂದ್ರ ಪ್ರಾಯೋಜಿತ ಯೋಜನೆಗಳಲ್ಲಿ ರಾಜ್ಯದ ಪಾಲು ಕೇವಲ ಶೇ.1.6 ರಷ್ಟಿದೆ. ಬಂಡವಾಳ ವೆಚ್ಚ(ಕೇಪೆಕ್ಸ್)ದಲ್ಲಿ ಪಾಲು ಕೇವಲ ಶೇ.1.1. ವಿವಿಧ ರಾಜ್ಯಗಳಿಗೆ ಘೋಷಿಸಲಾದ ವಿಶೇಷ ಪ್ಯಾಕೇಜ್‌ಗಳಿಂದ ಕೇರಳ ಸುಮಾರಾಗಿ ಏನನ್ನೂ ಪಡೆದಿಲ್ಲ. 2024–25ರಲ್ಲಿ ಕೇಂದ್ರ ಸರ್ಕಾರವು ಭಾರತದ ಎಲ್ಲಾ ರಾಜ್ಯ ಸರ್ಕಾರಗಳಿಗೆ ಮಾಡಿದ ಒಟ್ಟು ವರ್ಗಾವಣೆ ರೂ.25 ಲಕ್ಷ ಕೋಟಿ. ಜನಸಂಖ್ಯೆಯ ಶೇ.2.8 ರಷ್ಟಿರುವ ಕೇರಳ ಪ್ರಮಾಣಾನುಗುಣವಾಗಿ 70,000 ಕೋಟಿ ರೂ.ಗಳನ್ನು ಪಡೆಯಬೇಕಿತ್ತು. ವಾಸ್ತವವಾಗಿ, ರಾಜ್ಯಗಳಿಗೆ ವರ್ಗಾವಣೆ ಕೇವಲ 35,000 ಕೋಟಿ ರೂ.ಗಳಾಗಿದ್ದು, ಇದು ರಾಜ್ಯಕ್ಕೆ ಸಿಗಬೇಕಾಗಿದ್ದ ಮೊತ್ತದ ಅರ್ಧದಷ್ಟು ಮಾತ್ರ.

ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಂತೆಯೇ ಇರುವ ಎಸ್‌ಪಿವಿ(ವಿಶೇಷ ಉದ್ದೇಶದ ವಾಹಕ)ಯಾದ ಕೆಐಐಎಫ್‌ಬಿ ತಂದ ಬಂಡವಾಳ ಸಾಲವು ರಾಜ್ಯ ಸರಕಾರದ ಪರೋಕ್ಷ ಸಾಲವೇ ಆಗಿರುತ್ತದೆ ಎಂಬ ನೆಪವೊಡ್ಡಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಾಮಾನ್ಯ ಸಾಲಪ್ರಮಾಣವನ್ನು ತನ್ನ ಮನಬಂದಂತೆ ಕಡಿಮೆ ಮಾಡಿದೆ. ಇನ್ನೂ ಕೆಟ್ಟ ಸಂಗತಿಯೆಂದರೆ, ರಾಜ್ಯವು ಬಜೆಟಿನ ಆಚೆ ಸಾಲ ಪಡೆಯುವ ಕುರಿತಾದ ತನ್ನ ಹೊಸ ನಿಯಮವನ್ನು ಪೂರ್ವಾನ್ವಯವಾಗುವಂತೆ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇದರ ಪರಿಣಾಮವಾಗಿ, ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಮಾರುಕಟ್ಟೆ ಸಾಲಗಳಿಂದ 10,000 ಕೋಟಿ ರೂ.ಗಳಿಗೂ ಹೆಚ್ಚು ಕಡಿತವಾಗಿದೆ. ಇವೆಲ್ಲವೂ ರಾಜ್ಯ ಸರ್ಕಾರದ ಹಣಕಾಸನ್ನು ಒಂದು ಬಿಕ್ಕಟ್ಟಿಗೆ ತಳ್ಳಿದೆ.

ತನ್ನ ತಾರತಮ್ಯವನ್ನು ಮುಚ್ಚಿಕೊಳ್ಳಲು, ಕೇಂದ್ರ ಸರ್ಕಾರ ಮತ್ತು ಅದರ ಅನುಯಾಯಿಗಳು ರಾಜ್ಯ ಸರ್ಕಾರದ ವಿರುದ್ಧ ಸಂಪೂರ್ಣವಾಗಿ ಸುಳ್ಳು, ಆಧಾರರಹಿತ ಮತ್ತು ದುರುದ್ದೇಶಪೂರಿತ ಪ್ರಚಾರವನ್ನು ನಡೆಸುತ್ತಿದ್ದಾರೆ ಎಂದಿರುವ ಸಿಪಿಐ(ಎಂ)ನ 24ನೇ ಮಹಾಧಿವೇಶನವು ತನ್ನ ಎಲ್ಲಾ ಘಟಕಗಳು, ಸದಸ್ಯರು, ಹಿತೈಷಿಗಳು ಮತ್ತು ಇತರ ಎಲ್ಲ ಪ್ರಜಾಪ್ರಭುತ್ವವಾದಿ ಜನ ವಿಭಾಗಗಳಿಗೆ ಒಕ್ಕೂಟ ಸರಕಾರವನ್ನು ಬಯಲಿಗೆಳೆಯಲು, ಕೇರಳದ ಪ್ರಜಾಸತ್ತಾತ್ಮಕ ಸಾಧನೆಗಳನ್ನು ಹರಡಲು ಮತ್ತು ಕೇರಳದಲ್ಲಿ ಎಲ್‌ಡಿಎಫ್ ಸರ್ಕಾರವನ್ನು ರಕ್ಷಿಸಲು ಶಕ್ತಿಶಾಲಿಯಾಗಿ ಅಣಿನೆರೆಯಬೇಕು ಎಂದು ಕರೆ ನೀಡಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE April 7-13, 2025 Price: Rs. 10/- Date of Publication: 04 April 2025 RNI No. KARKAN /2006/17926 Posted on 08-04-2025
Posted at BG PSO, BG - 560026 **Posted at Periodical Rate -** Rs. 2

"ಒಕ್ಕೂಟ ತತ್ವ ಭಾರತದ ಶಕ್ತಿ"

ಮಹಾಧಿವೇಶನದ ಸಂದರ್ಭದಲ್ಲಿ ವಿಶೇಷ ವಿಚಾರ ಸಂಕಿರಣ

ತಮಿಳುನಾಡಿನ ಮಧುರೈನಲ್ಲಿ ಸಿಪಿಐ(ಎಂ)ನ 24ನೇ ಮಹಾಧಿವೇಶನ ಭಾಗವಾಗಿ ಎಪ್ರಿಲ್ 3ರಂದು ನಡೆದ "ಒಕ್ಕೂಟ ತತ್ವ ಭಾರತದ ಶಕ್ತಿ" ಎಂಬ ವಿಶೇಷ ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಸಿಪಿಐ(ಎಂ)ನ ಹಿರಿಯ ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ್ ಕಾರಟ್, ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಕರ್ನಾಟಕ ಸರಕಾರವನ್ನು ಪ್ರತಿನಿಧಿಸಿ ಉನ್ನತ ಶಿಕ್ಷಣ ಸಚಿವರಾದ ಎಂ.ಸಿ.ಸುಧಾಕರ್ ಅವರು ಭಾಗವಹಿಸಿ ಮಾತನಾಡಿದರು.



ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಒಕ್ಕೂಟ ತತ್ವಗಳು ಮತ್ತು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವಲ್ಲಿ ಅನುಸರಿಸುತ್ತಿರುವ ಪ್ರತಿಗಾಮಿ ನೀತಿಗಳು, ಹಾಗೂ ರಾಜ್ಯಗಳಿಗೆ ಆದಾಯದ ಪಾಲನ್ನು ತಡೆಹಿಡಿದಿರುವುದು, ಅಭಿವೃದ್ಧಿ ಕಾರ್ಯಗಳಿಗೆ ರಾಜ್ಯಪಾಲರನ್ನು ಅಡ್ಡಿಯಾಗಿ ಬಳಸುವುದು ಮತ್ತು ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸದೆ ಶಾಸನಗಳನ್ನು ಹೇರಿದ್ದಕ್ಕಾಗಿ ತೀವ್ರ ಟೀಕೆ ವ್ಯಕ್ತವಾಯಿತು.



ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್

2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ, ರಾಜಕೀಯ, ಹಣಕಾಸು ಮತ್ತು ಆರ್ಥಿಕ ಅಂಶಗಳಲ್ಲಿ ಕೇಂದ್ರ–ರಾಜ್ಯ ಸಂಬಂಧವು ಹೊಸ ಮಟ್ಟವನ್ನು ತಲುಪಿದೆ. ನೈಸರ್ಗಿಕ ವಿಕೋಪಗಳ ಸಮಯದಲ್ಲಿಯೂ ಸಹ ವಿರೋಧ ಪಕ್ಷಗಳ ಆಡಳಿತದ ರಾಜ್ಯಗಳ ಅನ್ಯಾಯದ ವರ್ತನೆ ಪುನರ್‌ನಿರ್ಮಾಣ ಮತ್ತು ಪುನರ್ವಸತಿ ಪ್ರಯತ್ನಗಳಿಗೆ ಅಡ್ಡಿಯಾಗಿದೆ. ರಾಜ್ಯಗಳಿಗೆ ನಿಧಿಯ ಹಂಚಿಕೆಯಲ್ಲಿನ ಕಡಿತವು ಬಡವರಿಗೆ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರಗಳ ಸಾಮರ್ಥ್ಯದ ಮೇಲೆ ತೀವ್ರವಾಗಿ ಪರಿಣಾಮ ಬೀರಿದೆ ಎಂದು ಹೇಳಿದರು.

ರಾಜ್ಯ ಸರ್ಕಾರಗಳ ಕಾನೂನು ಹೋರಾಟ

ವಿಚಾರ ಸಂಕಿರಣವನ್ನುದ್ದೇಶಿಸಿ ಮಾತನಾಡಿದ ಪ್ರಕಾಶ್ ಕಾರಟ್, "ತಮಿಳುನಾಡು, ಕೇರಳ ಮತ್ತು ಕರ್ನಾಟಕ ಸೇರಿದಂತೆ ಹಲವಾರು ರಾಜ್ಯ ಸರ್ಕಾರಗಳು ಪ್ರಕೃತಿ ವಿಕೋಪಗಳ ಸಮಯದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆದಾಯ ಮತ್ತು ನೆರವಿನ ಪಾಲನ್ನು ಪಡೆಯಲು ಕಾನೂನು ಹೋರಾಟಗಳನ್ನು ನಡೆಸುತ್ತಿವೆ. ನ್ಯಾಯಾಲಯಗಳ ಹಸ್ತಕ್ಷೇಪದ ಹೊರತಾಗಿಯೂ ತಮಿಳುನಾಡು ಮತ್ತು ಕೇರಳ ಸರ್ಕಾರಗಳು ಪ್ರವಾಹ ಪರಿಹಾರ ಕಾರ್ಯಗಳಿಗೆ ಯಾವುದೇ ಹಣವನ್ನು ಪಡೆದಿಲ್ಲ, ಆದರೆ ಕರ್ನಾಟಕ ಸರ್ಕಾರ ಬರ ಪರಿಹಾರವನ್ನು ಪಡೆಯಲು ಸುಪ್ರೀಂ ಕೋರ್ಟ್ ಅನ್ನು ಸಂಪರ್ಕಿಸಿದೆ" ಎಂದು ಹೇಳಿದರು.

ಹಾಗೆ ಮಾಡುವ ಮೂಲಕ, ಬಿಜೆಪಿ ಸರ್ಕಾರವು ಫೆಡರಲ್ ತತ್ವಗಳ ಮೂಲ ಆಧಾರವನ್ನು ನಾಶಪಡಿಸುತ್ತಿದೆ ಮತ್ತು ಭಾರತವು ರಾಜ್ಯಗಳ ಒಕ್ಕೂಟವಾಗಿದ್ದರೂ ರಾಜ್ಯಗಳನ್ನು ಅಧೀನಕ್ಕೆ ಇಳಿಸಿದೆ. ಇದಲ್ಲದೆ, ಅಂತಹ ರಾಜ್ಯಗಳಲ್ಲಿ ನೇಮಕಗೊಂಡ ರಾಜ್ಯಪಾಲರು ಜನರಿಂದ ಆಯ್ಕೆಯಾದ ಸರ್ಕಾರಕ್ಕೆ ಸವಾಲು ಹಾಕುತ್ತಿದ್ದಾರೆ.

ಬಿಜೆಪಿ ಸರ್ಕಾರದಿಂದ ನೇಮಕಗೊಂಡ ವೈಸ್‌ರಾಯ್‌ಗಳು – ರಾಜ್ಯಪಾಲರು ಚುನಾಯಿತ ಶಾಸಕಾಂಗಗಳ ಚಟುವಟಿಕೆಗಳು ಮತ್ತು ನಿರ್ಧಾರಗಳನ್ನು ತಿದ್ದಿ ಬರೆಯುತ್ತಿದ್ದಾರೆ.

ಸ್ವಾತಂತ್ರ್ಯದ ನಂತರ ಯಾವುದೇ ಸಮಯದಲ್ಲಿ ಸಂವಿಧಾನದ ಮೂಲ ಲಕ್ಷಣವಾದ ಒಕ್ಕೂಟ ತತ್ವದ ಮೇಲೆ ಇಷ್ಟು ಗಂಭೀರ ದಾಳಿ ನಡೆದಿಲ್ಲ. ಇಂದು, ಭಾರತೀಯ ಒಕ್ಕೂಟವನ್ನು ಒಳಗೊಂಡಿರುವ ರಾಜ್ಯಗಳನ್ನು ಅಧೀನ ಸ್ಥಿತಿಗೆ ಇಳಿಸಲಾಗುತ್ತಿದೆ ಎಂದು ಕಾರಟ್ ಹೇಳಿದರು.

ಮುಂದಿನ ದಾರಿ ಎಂದರೆ ಎಲ್ಲಾ ಬಿಜೆಪಿಯೇತರ ರಾಜ್ಯ ಸರ್ಕಾರಗಳು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಂಯುಕ್ತ ರಂಗವನ್ನು ಮುಂದಿಡುವುದು. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವದಲ್ಲಿ ನಂಬಿಕೆಯಿರುವ ಎಲ್ಲಾ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಈ ಹೋರಾಟದಲ್ಲಿ ಮುಂದೆ ಬರಬೇಕು ಎಂದು ಕಾರಟ್ ಹೇಳಿದರು.



ಕರ್ನಾಟಕ ಸರಕಾರವನ್ನು ಪ್ರತಿನಿಧಿಸಿ ಉನ್ನತ ಶಿಕ್ಷಣ ಸಚಿವರಾದ ಎಂ.ಸಿ.ಸುಧಾಕರ್

ಏಕಘಟಕ ಪಟ್ಟಿಯನ್ನು ವಿಸ್ತರಿಸಲಾಗುತ್ತಿದೆ

ಕೇರಳ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಪಿಣರಾಯಿ ವಿಜಯನ್ ಮಾತಾಡುತ್ತ, "ನಮ್ಮ ರಾಜಕೀಯ ವ್ಯವಸ್ಥೆ ಹೆಚ್ಚು ಏಕಘಟಕ ಸ್ವರೂಪವನ್ನು ಪಡೆಯುತ್ತಿದೆಯೇ? ಇದು ಇಂದು ಭಾರತದಲ್ಲಿ ಒಕ್ಕೂಟ ತತ್ವ ಎದುರಿಸುತ್ತಿರುವ ಪಿಡುಗು. ರಾಜ್ಯಗಳ ಹಕ್ಕುಗಳ ಮೇಲೆ ಪರಿಣಾಮ ಬೀರುವ ಶಾಸನಗಳನ್ನು ರೂಪಿಸುವ ಮೂಲಕ ಬಿಜೆಪಿ ಸರ್ಕಾರ ಏಕಘಟಕ ರಾಷ್ಟ್ರದತ್ತ ಸಾಗಲು ಗಂಭೀರ ಪ್ರಯತ್ನಗಳನ್ನು ಮಾಡುತ್ತಿದೆ. ರಾಜ್ಯಗಳು ತಮಗೆ ಸಾಂವಿಧಾನಿಕವಾಗಿ ಹಂಚಿಕೆಯಾಗಿರುವ ಬಾಬ್ತುಗಳ ಮೇಲೆ ಖರ್ಚು ಮಾಡಲು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರಬೇಕು.

ರಾಜ್ಯಗಳು ಆಳುವ ಪಕ್ಷದ ಬ್ರಾಂಡ್ ರಾಯಭಾರಿಗಳಾಗಿ ಕಾರ್ಯನಿರ್ವಹಿಸಬೇಕು ಎಂದು ಆಗ್ರಹಿಸುವುದು ಒಕ್ಕೂಟ ತತ್ವದ ಬೇರುಗಳನ್ನೇ ಕತ್ತರಿಸುತ್ತದೆ" ಎಂದು ಹೇಳಿದರು.



ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್

"ಸದಾ ವಿಸ್ತರಿಸುತ್ತಿರುವ ಏಕಘಟಕ ಪಟ್ಟಿಯು ರಾಜ್ಯಗಳ ಶಾಸಕಾಂಗ ಡೊಮೇನ್‌ಗೆ ಆಕ್ರಮಣಕ್ಕೆ ಕಾರಣವಾಗುತ್ತದೆ. ಕೃಷಿ ಉತ್ಪನ್ನಗಳ ಬೆಲೆಯನ್ನು ನಿರುತ್ಸಾಹಗೊಳಿಸುವಂತಹ ರಾಜ್ಯಗಳ ಮೇಲೆ ಗಣನೀಯ ಪ್ರಮಾಣದಲ್ಲಿ ಪರಿಣಾಮ ಬೀರುವ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ಕೇಂದ್ರ ಪ್ರವೇಶಿಸಿದಾಗ ರಾಜ್ಯಗಳೊಂದಿಗೆ ಯಾವುದೇ ಸಮಾಲೋಚನೆ ಇಲ್ಲ ಎಂದು ನಮೂದಿಸುವುದು ಸಹ ಇಲ್ಲಿ ಸಂಬಂಧಿಸಿದೆ" ಎಂದು ಪಿಣರಾಯಿ ವಿಜಯನ್ ಹೇಳಿದರು.

ಸಹಕಾರಿ ಇಲಾಖೆಯ ರಚನೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಮರುನಾಮಕರಣವು ಶಿಕ್ಷಣ ಇಲಾಖೆಯಾಗಿ ತೀವ್ರ ಪರಿಣಾಮಗಳಿಗೆ ಕಾರಣವಾಗುತ್ತದೆ ಮತ್ತು ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಮೊಟಕುಗೊಳಿಸುತ್ತದೆ. ರಾಜ್ಯ ಸರ್ಕಾರಗಳು ರಚಿಸಿ ಗಣನೀಯವಾಗಿ ಹಣಕಾಸು ಒದಗಿಸುತ್ತಿರುವ ಹಲವಾರು ಉನ್ನತ ಶಿಕ್ಷಣ ಸಂಸ್ಥೆಗಳೊಂದಿಗೆ, ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಕರಡು ನಿಯಮಗಳು ಉಪಕುಲಪತಿಗಳ ನೇಮಕಾತಿ ಸೇರಿದಂತೆ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಅಕ್ಷರಶಃ ಕಸಿದುಕೊಳ್ಳುತ್ತವೆ.

ಉಚಿತ ಕೊಡುಗೆಗಳು ಮತ್ತು ಅವಶ್ಯಕತೆ

ಪ್ರಧಾನಿ ಸೇರಿದಂತೆ ಹಲವಾರು ಬಲಪಂಥೀಯ ಚಿಂತಕರು ಮತ್ತು ಬಿಜೆಪಿ ನಾಯಕರು ಉಚಿತ ಕೊಡುಗೆ ಸಂಸ್ಕೃತಿಯ ಬಗ್ಗೆ ತಮ್ಮ ಕಳವಳಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ಅಕ್ಷರಶಃ ವೃದ್ಧಾಪ್ಯ ಪಿಂಚಣಿಗಳು, ಅಂಗವಿಕಲರ ಪಿಂಚಣಿಗಳು ಮತ್ತು ವಿಧವಾ ಪಿಂಚಣಿಗಳು ಸೇರಿದಂತೆ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಪಡೆಯುವ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು ಗುರಿಯಾಗಿಸಿಕೊಂಡಿದ್ದಾರೆ.

ರಾಜ್ಯ ಸರ್ಕಾರಗಳು ಮತ್ತು ಸ್ವತಃ ಸಾಲ ಮಿತಿಗಳನ್ನು ನಿಗದಿಪಡಿಸುವಲ್ಲಿ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ದ್ವಂದ್ವ ಮಾನದಂಡಗಳು ಹಲವಾರು ಅಭಿವೃದ್ಧಿ ಯೋಜನೆಗಳಿಗೆ ಹಣದ ಕೊರತೆಯಿಂದಾಗಿ ರಾಜ್ಯಗಳ ಉಸಿರುಗಟ್ಟಿಸಲು ಕಾರಣವಾಗಿವೆ.

ಬಡವರಿಗೆ ಕಲ್ಯಾಣ ಕ್ರಮಗಳನ್ನು ಉಚಿತ ಕೊಡುಗೆಗಳು ಎಂದು ಬ್ರಾಂಡ್ ಮಾಡಲಾಗಿದ್ದರೂ, ತೆರಿಗೆ ಕಡಿತ, ಸಾಲ ಮನ್ನಾ ಸೇರಿದಂತೆ ಕಾರ್ಪೊರೇಟ್‌ಗಳು ಮತ್ತು ಅತಿ ಶ್ರೀಮಂತರಿಗೆ ವಿಸ್ತರಿಸಲಾದ ರಿಯಾಯಿತಿಗಳನ್ನು ಅವಶ್ಯಕತೆ ಎಂದು ಕರೆಯಲಾಗುತ್ತದೆ.

2024ರಲ್ಲಿ ವಿಶ್ವ ಅಸಮಾನತೆ ಪ್ರಯೋಗಾಲಯದ ಅರ್ಥಶಾಸ್ತ್ರಜ್ಞರ ಗುಂಪಿನ ಅಧ್ಯಯನದಲ್ಲಿ ಬಹಿರಂಗವಾದಂತೆ, 2022–23ರಲ್ಲಿ ಭಾರತದಲ್ಲಿ, ಅಗ್ರ ಶೇ. ಒಂದರಷ್ಟು ಜನರು ಕ್ರಮವಾಗಿ ಶೇ. 22.6 ಮತ್ತು ಶೇ. 40.1 ರಷ್ಟು ಆದಾಯ ಮತ್ತು ಸಂಪತ್ತಿನ ಪಾಲನ್ನು ಹೊಂದಿದ್ದ ಸಮಯದಲ್ಲಿ ಇದು ಸಂಭವಿಸುತ್ತಿದೆ ಎಂಬ ಅಂಶವು ಈ ವಿಷಯವನ್ನು ಗಂಭೀರ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತದೆ" ಎಂದು ಪಿಣರಾಯಿ ವಿಜಯನ್ ಗಮನಸೆಳೆದರು.

ರಾಜ್ಯಗಳ ಗುರುತು ಮತ್ತು ಸಂಸ್ಕೃತಿಯನ್ನು ನಾಶಪಡಿಸುತ್ತಿರುವ ಬಿಜೆಪಿ ಆಡಳಿತ

2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಸರಳ ಬಹುಮತವನ್ನು ಗೆಲ್ಲಲು ದೇಶದಲ್ಲಿ ಚಾಲ್ತಿಯಲ್ಲಿರುವ ಫೆಡರಲ್ ತತ್ವಗಳು, ಬಹುತ್ವ ಮತ್ತು ವೈವಿಧ್ಯಮಯ ಸಂಸ್ಕೃತಿಯ ಮೇಲೆ ದಾಳಿ ಮಾಡಿತು. ಧರ್ಮದ ಆಧಾರದ ಮೇಲೆ ಪೌರತ್ವ ನೀಡುವ ಪ್ರಯತ್ನಗಳು, ರಾಜ್ಯ ವಿಧಾನಸಭೆ ಮತ್ತು ಸಂಸತ್ತಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸುವ ಯೋಜನೆಗಳು, ಇತರ ಅಧಿಕೃತ ಭಾಷೆಗಳಿಗಿಂತ ಹಿಂದಿಗೆ ಆದ್ಯತೆ ಮತ್ತು ಆಹಾರದ ಹಕ್ಕಿನಲ್ಲಿ ಹಸ್ತಕ್ಷೇಪ ಮಾಡುವುದು ಹಿಂದೂ ರಾಷ್ಟ್ರ

ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**